

ಅರ್ಥ-೩

ಏಪ್ರಿಲ್, 2020

ಅರ್ಥ ಸಂಗ್ರಹದ ಮೂರನೆಯ ಸಂಚಿಕೆಯನ್ನು ಈಗ ನಿಮ್ಮ ಮುಂದೆ ಇಡುತ್ತಿದ್ದೇವೆ. ಸ್ವಾಭಾವಿಕವಾಗಿಯೇ ಎಲ್ಲಾ ಲೇಖನಗಳು ಕೊರೋನ ಮಹಾಮಾರಿಯ ಪರಿಣಾಮದಿಂದ ಉಂಟಾಗಬಹುದಾದ ಆರ್ಥಿಕ ಬಿಕ್ಕಟ್ಟನ್ನು ಕುರಿತೇ ಇದೆ. ಮತ್ತೆ ಅದೇ ಚರ್ಚೆ. ಜೀವ ಮುಖ್ಯವೋ ಜೀವನ ಮುಖ್ಯವೋ? ಹಾಗೇ ಇವೆರಡನ್ನು ಎದುರು ಬದುರು ಇಟ್ಟು, ಒಂದನ್ನು ಆಯ್ಕೆ ಮಾಡಿಕೊಳ್ಳಿ ಎಂದು ಹೇಳುವುದು ಸರಿಯಲ್ಲ. ನಿಜ, ವೈರಾಣುವನ್ನು ನಿಯಂತ್ರಿಸುವುದು ಬಹಳ ಮುಖ್ಯ, ಅದಕ್ಕೆ ಆದ್ಯತೆ ಕೊಡಬಾರದು ಎಂದು ಯಾವ ಅರ್ಥಶಾಸ್ತ್ರಜ್ಞರು ಹೇಳುತ್ತಿಲ್ಲ. ಆದರೆ ಅದು ಸೃಷ್ಟಿಸುತ್ತಿರುವ, ಹಾಗೂ ಮುಂದೆ ಬರುವ ಆರ್ಥಿಕ ಬಿಕ್ಕಟ್ಟು ಅಷ್ಟೇ ಮುಖ್ಯ. ಅದನ್ನು ಗಮನಿಸದೇ ಹೋದರೆ ಮುಂದೆ ತೊಂದರೆ ತೀವ್ರವಾಗಬಹುದು ಅನ್ನುವ ಎಚ್ಚರಿಕೆ ಬೇಕು.

ಸಧ್ಯಕ್ಕೆ ಲಕ್ಷಾಂತರ ಜನ ಕೆಲಸ ಕಳೆದುಕೊಂಡಿದ್ದಾರೆ, ನಿರ್ಗತಿಕರಾಗಿದ್ದಾರೆ. ಅವರನ್ನು ಗಮನಿಸುವುದು ನಮ್ಮ ಕರ್ತವ್ಯ. ಅದಕ್ಕೆ ಎಲ್ಲಾ ದೇಶದ ಸರ್ಕಾರಗಳು ಸಾಕಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಅಮೆರಿಕೆ 2 ಟ್ರಿಲಿಯನ್ ಡಾಲರನ್ನು ಅಂದರೆ ಒಟ್ಟು ಜಿಡಿಪಿ ಶೇಕಡ 10ರಷ್ಟನ್ನು ಇದಕ್ಕಾಗಿ ಮೀಸಲಿಟ್ಟಿದೆ. ಬಹುಪಾಲು ರಾಷ್ಟ್ರಗಳು ಜಿಡಿಪಿಯ 10ರಿಂದ 15ರಷ್ಟನ್ನು ಖರ್ಚು ಮಾಡುತ್ತಿವೆ. ಭಾರತ ಈ ನಿಟ್ಟಿನಲ್ಲಿ ಹಿಂದೆ ಬಿದ್ದಿದೆ. ಅದು ಜಿಡಿಪಿಯ ಶೇಕಡ ಒಂದಕ್ಕಿಂತ ಕಡಿಮೆ ಖರ್ಚುಮಾಡುತ್ತಿದೆ. ನಿಜ, ನಮ್ಮ ದೇಶ ಕೊರೋನ ಬರುವುದಕ್ಕಿಂತ ಮೊದಲೇ ಆರ್ಥಿಕ ಬಿಕ್ಕಟ್ಟಿನಲ್ಲಿತ್ತು. ಹಾಗಾಗಿ ಉಳಿದ ದೇಶಗಳಷ್ಟು ಅಲ್ಲದೇ ಹೋದರೂ ಜಿಡಿಪಿಯ ಶೇಕಡ 5ರಷ್ಟಾದರೂ ಖರ್ಚು ಮಾಡುವುದು ಅನಿವಾರ್ಯ. ವಿತ್ತೀಯ ಶಿಸ್ತು ಇತ್ಯಾದಿ ವಿಷಯಗಳನ್ನು ಬದಿಗಿಡಬೇಕಾಗುತ್ತದೆ. ಎರಡನೆಯದಾಗಿ ದುರ್ಬಲರಿಗೆ ಆಹಾರ ಹಾಗೂ ನಗದು ತಕ್ಷಣ ಸಿಗುವುದಕ್ಕೆ ವ್ಯವಸ್ಥೆ ಮಾಡುವುದು ಅನಿವಾರ್ಯ. ಇದು ಮಾನವೀಯ ಕಾರಣಕ್ಕೆ ಮಾತ್ರವಲ್ಲ. ಅರ್ಥಶಾಸ್ತ್ರದ ದೃಷ್ಟಿಯಿಂದಲೂ ಜನರ ಕೈಯಲ್ಲಿ ಹಣ ಇರಬೇಕು. ಆಗಷ್ಟೆ ಬೇಡಿಕೆ ಸಾಧ್ಯ.

ತುಂಬಾ ದಿನ ಲಾಕ್‌ಡೌನ್ ಸಾಧ್ಯವಿಲ್ಲ. ಮತ್ತೆ ಪ್ರಾರಂಭ ಮಾಡಲೇ ಬೇಕು. ಆ ಪ್ರಕ್ರಿಯೆಯನ್ನು ಕುರಿತು ಚಿಂತನೆ ಬೇಕು. ಸಿದ್ಧತೆ ಬೇಕು. ತಯಾರಿಯ ಕೊರತೆ ಎಲ್ಲದರಲ್ಲೂ ಕಾಣುತ್ತಿದೆ. ಪರಿಣತರ ಮಾತು ಕೇಳಿಸಿಕೊಳ್ಳೋಣ.

ಈ ದೃಷ್ಟಿಯಲ್ಲಿ ಹಲವು ಅರ್ಥಶಾಸ್ತ್ರಜ್ಞರ ಅಭಿಪ್ರಾಯವನ್ನು, ಚಿಂತನೆಗಳನ್ನು, ಸಲಹೆಗಳನ್ನು ಇಲ್ಲಿ ಒಂದು ಕಡೆ ಕೊಡಲಾಗಿದೆ. ಅಭಿಜಿತ್ ಬ್ಯಾನರ್ಜಿ, ರಘುರಾಂ ರಾಜನ್, ಕೌಶಿಕ್ ಬಸು, ಅಮರ್ತ್ಯಸೇನ್ ಮೊದಲಾದ ಪ್ರಖ್ಯಾತ ಅರ್ಥಶಾಸ್ತ್ರಜ್ಞರ ಮಾತುಗಳನ್ನು ಇಲ್ಲಿ ಸಂಗ್ರಹಿಸಿದ್ದೇವೆ. ಜೊತೆಗೆ ಕೇರಳದ ಪ್ರಯೋಗವನ್ನು ಕುರಿತಂತೆ ಅದರ ಮುಖ್ಯಮಂತ್ರಿಗಳ ಮಾತನ್ನು ಕೊಡಲಾಗಿದೆ. ಹಿಂದಿನ ಸಂಚಿಕೆಯಲ್ಲಿ ನೀಡಿದ್ದ ಅಭಿಜಿತ್ ಬ್ಯಾನರ್ಜಿ ಮತ್ತು ಎಸ್ತರ್ ಡಫ್ಲೊ ಅವರ ವಲಸೆಕಾರ್ಮಿಕರ ಅಧ್ಯಯನದ ಎರಡನೆಯ ಭಾಗವಿದೆ.

ನಿಮ್ಮ ಅಭಿಪ್ರಾಯಕ್ಕೆ ಸ್ವಾಗತ,

ವೇಣುಗೋಪಾಲ್
statsvenugopal@gmail.com


ಒಳ ಪುಟಗಳಲ್ಲಿ

ಅರ್ಥ–3, ಏಪ್ರಿಲ್, 2020














ಕೊರೋನ ಬಿಕ್ಕಟ್ಟಿನ ಸಮಯದಲ್ಲಿ ಏನು ಮಾಡಬೇಕು?



ಇತ್ತೀಚೆಗೆ ಎನ್‌ಡಿಟಿವಿ ಕೊರೋನ ಬಿಕ್ಕಟ್ಟಿನ ಆರ್ಥಿಕ ಪರಿಣಾಮಗಳನ್ನು ಕೇಂದ್ರವಾಗಿಟ್ಟುಕೊಂಡು ವಿಶೇಷ ಸಂದರ್ಶನ ಕಾರ್ಯಕ್ರಮ ನಡೆಸಿಕೊಟ್ಟಿತು. ವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಅದು ಒಂದು ರೀತಿಯಲ್ಲಿ ಪರಿಸ್ಥಿತಿಯ ಸ್ಥೂಲ ಪರಿಚಯ ಮಾಡಿಕೊಡುತ್ತದೆ ಎಂಬ ಭಾವನೆಯಿಂದ ಅದರ ಒಂದು ಟಿಪ್ಪಣಿಯನ್ನು ಕನ್ನಡದಲ್ಲಿ ಮಾಡಿ ಹಂಚಿಕೊಳ್ಳುತ್ತಿದ್ದೇವೆ. ಪ್ರಣಬ್ ರಾಯ್ ಕಾರ್ಯಕ್ರಮ ನಡೆಸಿಕೊಟ್ಟರು.

ಪ್ರಣಾಬ್ ರಾಯ್: ಇದು ಹಿಂದೆ ಜಗತ್ತನ್ನು ಕಾಡಿದ ಬಿಕ್ಕಟ್ಟುಗಳಿಗಿಂತ ಹಲವು ಕಾರಣಕ್ಕೆ ಭಿನ್ನ. ಇದು ಬಲು ಬೇಗ ಹರಡುತ್ತದೆ. ಹಾಗಾಗಿ ನಾವು ಕೂಡ ಅಷ್ಟೇ ವೇಗವಾಗಿ ಸ್ಪಂದಿಸಬೇಕು. ಸುಮ್ಮನೆ ಯೋಚಿಸುತ್ತಾ ವಿಶ್ಲೇಷಿಸುತ್ತಾ ಕೂರುವುದಕ್ಕಾಗುವುದಿಲ್ಲ. ಹಿಂದೆ ನಮ್ಮನ್ನು ಕಾಡಿದ್ದ ಕೆಲವು ಸಾಂಕ್ರಮಿಕ ರೋಗಗಳನ್ನು ಗಮನಿಸೋಣ. ಉದಾಹರಣೆಗೆ **ಮರ್ಸ್** ಅಂದರೆ ಮಿಡಲ್ ಈಸ್ಟ್ ರೆಸ್ಪಿರೇಟರಿ ಸಿಂಡ್ರೋಮ್ ಬಂದಾಗ ಅದು ಮೊದಲ ಸಾವಿರ ಜನಕ್ಕೆ ಹರಡುವುದಕ್ಕೆ 903 ದಿನ ತೆಗೆದುಕೊಂಡಿತು. ಅಂದರೆ ಹೆಚ್ಚು ಕಮ್ಮಿ ಎರಡುವರೆ ವರ್ಷಕ್ಕಿಂತ ಹೆಚ್ಚು ಕಾಲ ತೆಗೆದುಕೊಂಡಿತು.

ನಂತರ ಬಂದ ಸಾರ್ಸ್ ಪಿಡುಗು 1000 ಜನಕ್ಕೆ ಹರಡುವುದಕ್ಕೆ 130 ದಿನ ತೆಗೆದುಕೊಂಡಿತು. ಈಗ ಕರೋನ ವೈರಸ್ ಕೇವಲ 48 ದಿನಗಳಲ್ಲಿ ಮೊದಲ ಸಾವಿರ ಜನಕ್ಕೆ ಹರಡಿದೆ.

ಅಂದರೆ ನಾವು ಬೇಗ ನಿರ್ಧಾರ ತೆಗೆದುಕೊಳ್ಳಬೇಕು. ವೈರಾಣುವಿಗಿಂತ ಒಂದ ಹೆಜ್ಜೆ ಮುಂದೆ ಹೋಗಬೇಕು. ಆಗಷ್ಟೇ ಅದನ್ನು ನಿಯಂತ್ರಿಸಬಹುದು. ಇದು ನಾವು ಕಲಿಯಬೇಕಾದ ಮೊದಲ ಪಾಠ.

ಇದು ಬೇರೆ ಬಿಕ್ಕಟ್ಟಿಗಿಂತ ಯಾಕೆ ಬೇರೆ?

ಅರವಿಂದ್ ಸುಬ್ರಮಣಿಯನ್:
ನಾವು ಈ ಕೊರೋನಾ ಸೋಂಕಿನ ಆರ್ಥಿಕ ಪರಿಣಾಮಗಳ ವಿಷಯ ಮಾತನಾಡುವುದಕ್ಕೆ ಶುರು ಮಾಡಿದ ತಕ್ಷಣ, ಹಿಂದಿನ ಜಾಗತಿಕ ಹಣ–ಕಾಸು ಬಿಕ್ಕಟ್ಟಿಗೆ ಹೋಲಿಸುವುದಕ್ಕೆ ಪ್ರಯತ್ನಿಸುತ್ತೇವೆ. ಆದರೆ ಇದು ಅದಕ್ಕಿಂತ ಸಂಪೂರ್ಣವಾಗಿ ಭಿನ್ನ. ಅವುಗಳ ನಡುವೆ ಕನಿಷ್ಠ ಮೂರು ಪ್ರಮುಖ ವ್ಯತ್ಯಾಸಗಳನ್ನು ನೋಡಬಹುದು.

ಮೊದಲನೆಯದಾಗಿ ಇದು ತುಂಬಾ ವ್ಯಾಪಕವಾದದ್ದು. ಜೊತೆಗೆ ಹಣಕಾಸು ಬಿಕ್ಕಟ್ಟಿಗೆ ಹೋಲಿಸಿದರೆ ತುಂಬಾ ಅನಿಶ್ಚಿತವಾದದ್ದು. ಮೂರನೆಯದಾಗಿ ಸಾಮಾನ್ಯವಾಗಿ ಆಗುವಂತಹ ಘಟನೆಯಲ್ಲ, ಅಪರೂಪವಾಗಿ ಆಗುವಂತಹದ್ದು.

ಈ ಸೋಂಕಿನ ಪರಿಣಾಮದ ವ್ಯಾಪ್ತಿಗೆ ಸಂಬಂಧಿಸಿದಂತೆ ನಾವು ಈಗಾಗಲೇ ಹಲವು ಅಂಕಿಅಂಶಗಳನ್ನು ಗಮನಿಸಿದ್ದೇವೆ. ನಿರುದ್ಯೋಗ ಅನ್ನೋದು ಜಗತ್ತಿನ ಎಲ್ಲಾ ಕಡೆ ವ್ಯಾಪಕವಾಗಿದೆ. ಜಗತ್ತಿನಾದ್ಯಂತ ಆರ್ಥಿಕತೆ ಸ್ಥಗಿತಗೊಂಡಿದೆ. ಹಿಂದೆ ಹಣಕಾಸು ಬಿಕ್ಕಟ್ಟು ಆದಾಗ ಒಂದು ದೇಶಕ್ಕೆ ಬಿದ್ದ ಹೊಡೆತದ ಪರಿಣಾಮ ಉಳಿದ ದೇಶಗಳಿಗೆ ವಿಸ್ತ–ರಿಸಿತ್ತು. ಈಗ ಕೊರೋನಾ ಹೊಡೆತ ಎಲ್ಲಾ ದೇಶಗಳ ಆರ್ಥಿಕತೆಯನ್ನು ಸ್ತಬ್ಧಗೊಳಿಸಿದೆ. ಇದು ಒಂದು ಹೊಡೆತದ ಪರಿಣಾಮ ಅಲ್ಲ. ಪ್ರತಿಯೊಂದು ದೇಶಕ್ಕೂ ಏಟು ಬಿದ್ದಿದೆ. ಹಿಂದಿನದಕ್ಕಿಂತ ಹತ್ತು ಪಟ್ಟು ಬಲವಾದ ಏಟು.

ಎರಡನೆಯದಾಗಿ ಹಣಕಾಸು ಬಿಕ್ಕಟ್ಟಿಗೆ ಹೋಲಿಸಿದರೆ ಇದು ತುಂಬಾ ಅನಿಶ್ಚಿತ. ಎಲ್ಲವೂ ಅಸ್ಪಷ್ಟ.ಸ ಮೊದಲನೆಯದಾಗಿ ಇದು ಯಾವ ಪ್ರಮಾಣದಲ್ಲಿ ಹರಡುತ್ತದೆ, ಇದನ್ನು ನಿಭಾಯಿಸುವುದಕ್ಕೆ ಆಗುತ್ತದಾ ಇತ್ಯಾದಿ ಸೋಂಕಿಗೆ ಸಂಬಂಧಿಸಿದ ಅನುಮಾನಗಳು ಒಂದು ಕಡೆ. ಇನ್ನೊಂದು ಕಡೆ ಮನುಷ್ಯರಿಗೆ ಸಂಬಂಧಿಸಿದಂತೆ ಈ ಸಾಮಾಜಿ–ಕ ಅಂತರ ಕಾಪಾಡಿಕೊಳ್ಳುವುದು ಇತ್ಯಾದಿ ಕ್ರಮಗಳನ್ನು ಜನ ಎಷ್ಟು ದಿನ ತಾಳಿಕೊಳ್ಳಬಹುದು, ಅದು ವಿಫಲವಾಗಿಬಿಡಬಹುದಾ ಇತ್ಯಾದಿ ಅನಿಶ್ಚಿತತೆಗಳು ಕಾಡುತ್ತಿರುತ್ತವೆ.

ಮೂರನೆ ವ್ಯತ್ಯಾಸವೆಂದರೆ ಇದುದೊಂದು ಮಾಮೂಲಿಯಾಗಿ ನಡೆಯುವ ಒಂದು ಸಾಂಪ್ರದಾಯಿಕ ಆರ್ಥಿಕ ಬಿಕ್ಕಟ್ಟಲ್ಲ. ಅಂದರೆ ಬೇಡಿಕೆ ಕಮ್ಮಿಯಾಯಿತು, ಹಣಕಾಸು ಕ್ಷೇತ್ರದಲ್ಲಿ ಕುಸಿತವಾಯಿತು ಅನ್ನುವ ರೀತಿಯ ಒಂದು ಸಾಂಪ್ರದಾಯಿಕ ಬಿಕ್ಕಟ್ಟಲ್ಲ. ಈ ಬಿಕ್ಕಟ್ಟಿನಲ್ಲಿ ಬೇಡಿಕೆ ಮತ್ತು ಪೂರೈಕೆ ಎರಡಕ್ಕೂ ಪೆಟ್ಟು ಬಿದ್ದಿದೆ. ಕೇವಲ ಉತ್ಪಾದಕ ಕ್ಷೇತ್ರ ಮಾತ್ರವಲ್ಲ, ಸೇವಾ ಕ್ಷೇತ್ರಕ್ಕೂ ಪೆಟ್ಟು ಬಿದ್ದಿದೆ. ನೀವು ಇದಕ್ಕೆ ತುಂಬಾ ತೀವ್ರವಾಗಿ ಪ್ರತಿಕ್ರಿಯಿಸುವುದಕ್ಕೆ ಆಗುವುದಿಲ್ಲ. ಅವಶ್ಯಕವಲ್ಲದ ಪದಾರ್ಥಗಳ ಕೈಗಾರಿಕೆಗಳನ್ನು ಮುಚ್ಚುವುದು ಅಂದರೆ ಒಟ್ಟು ಆರ್ಥಿಕತೆಯ ಅರ್ಧಕ್ಕಿಂತ ಹೆಚ್ಚು ಕೈಗಾರಿಕೆಗಳನ್ನು ಮುಚ್ಚಬೇಕಾಗುತ್ತದೆ. ಅದೂ ಸುಮಾರು ದಿನ ಮುಚ್ಚಬೇಕಾಗುತ್ತದೆ. ಆದರೆ ಆರ್ಥಿಕತೆಯನ್ನು ಕುಸಿಯುವುದಕ್ಕೆ ಬಿಡುವುದಕ್ಕಾಗುವುದಿಲ್ಲ. ಕೆಲಸ ಕಳೆದುಕೊಂಡವರಿಗೆ

ನೆರವಾಗಬೇಕಾಗುತ್ತದೆ.

ಈ ಮೂರು ಕಾರಣಕ್ಕೆ ಇದು ಹಿಂದಿನ ಬಿಕ್ಕಟ್ಟಿಗಿಂತ ಸಂಪೂರ್ಣ ಭಿನ್ನ. ಇದು ನಾವು ನೋಡಿರದ ತೀರಾ ಹೊಸದಾದ ಬಿಕ್ಕಟ್ಟು.

ಪ್ರಣಬ್ ರಾಯ್:
ನಾವು ಸೂಕ್ತ ನೀತಿಯನ್ನು ರೂಪಿಸುವುದಕ್ಕೆ ನಮಗೆ ಸರಿಯಾದ ಮಾಹಿತಿ ಇರಬೇಕು. ಅಂದರೆ ಎಷ್ಟು ಜನಕ್ಕೆ, ಎಲ್ಲಿ, ಮತ್ತು ಏಕೆ ಸೋಂಕು ತಗುಲಿದೆ ಅನ್ನುವುದಕ್ಕೆ ಸಂಬಂಧಿಸಿದಂತೆ ನಮಗೆ ನಿಖರವಾದ ಮಾಹಿತಿ ಬೇಕು. ಹಾಗಾಗಿ ತಪಾಸಣೆ ನಡೆಸುವುದು ತುಂಬಾ ಮುಖ್ಯ. ತಪಾಸಣೆಗೆ ಒಳ್ಳೆಯ ವ್ಯವಸ್ಥೆ ಇಲ್ಲದೇ ಹೋದರೆ ಯಾರಿಗೆ ಸೋಂಕು ತಗುಲಿದೆ ಅನ್ನುವುದು ತಿಳಿಯುವುದಿಲ್ಲ. ಸರಿಯಾಗಿ ತಪಾಸಣೆ ಮಾಡಿದರೆ ಯಾರಿಗೆ ಸೋಂಕು ಇದೆ ಎಂದು ತಿಳಿಯುತ್ತದೆ. ಅವರನ್ನು ಪ್ರತ್ಯೇಕಿಸಿ ಸೋಂಕು ಹರಡುವುದನ್ನು ತಡೆಯಬಹುದು.

ಟೆಸ್ಟ್‌ಗೆ ಸಂಬಂಧಿಸಿದಂತೆ ಪ್ರತಿದಿನ ಹೊಸ ಬೆಳವಣಿಗೆಗಳು ಆಗುತ್ತಿವೆ. ಎರಡು ರೀತಿಯ ಟೆಸ್ಟಿಂಗ್ ಕ್ರಮವನ್ನು ಬಳಸಲಾಗುತ್ತಿದೆ. ಒಂದು ಆಂಟಿಬಾಡೀಸನ್ನು ಗಮನಿಸಲಾಗುತ್ತದೆ. ಇದು ಸರಳವಾದ ಕ್ರಮ. ಫಲಿತಾಂಶವೂ ಬೇಗ ಸಿಗುತ್ತದೆ. ಹಣವೂ ಕಡಿಮೆ. ಸುಮಾರು 800ರೂಪಾಯಿ ಆಗುತ್ತದೆ. ಆದರೆ ಸೋಂಕಿನ ಪ್ರಾರಂಭದ ದಿನಗಳಲ್ಲಿ ಅಂಟಿಬಾಡೀಸ್ ಸೃಷ್ಟಿಯಾಗಿರುವುದಿಲ್ಲ. ಹಾಗಾಗಿ ಪ್ರಾರಂಭಿಕ ದಿನಗಳಲ್ಲಿ ಇದು ವಿಶ್ವಾಸಾರ್ಹ ಕ್ರಮವಲ್ಲ. 6 ಅಥವಾ 7 ದಿನಗಳ ನಂತರ ಪರೀಕ್ಷಿಸುವುದಕ್ಕೆ ಇದು ಒಳ್ಳೆಯ ಕ್ರಮ. ಇದರಿಂದ ಹಿಂದೆ ಸೋಂಕು ತಗುಲಿತ್ತೇ ಅನ್ನುವುದೂ ತಿಳಿಯುತ್ತದೆ.

ಎರಡನೆಯ ಕ್ರಮದಲ್ಲಿ ವೈರಾಣುವನ್ನೇ ಗುರುತಿಸುವ ಪ್ರಯತ್ನ ಮಾಡಲಾಗುತ್ತದೆ. ಗಂಟಲಿನಿಂದ ಅಥವಾ ಮೂಗಿನಿಂದ ಸ್ಯಾಂಪಲನ್ನು ತೆಗೆದುಕೊಂಡು ಪರೀಕ್ಷಿಸಲಾಗುವುದು. ಪಿಸಿಆರ್ ಕ್ರಮವನ್ನು ಬಳಸುತ್ತಾರೆ. ಪಿಸಿಆರ್ ವಿಧಾನ ಬಳಸಿದರೆ ಪರೀಕ್ಷೆಗೆ 4800 ರೂಗಳ ವೆಚ್ಚ ತಗಲುತ್ತದೆ. ಫಲಿತಾಂಶ ತಿಳಿಯುವುದಕ್ಕೆ 6 ಗಂಟೆಗಳ ಕಾಲಾವಕಾಶ ಬೇಕು. ಜೊತೆಗೆ ಇದಕ್ಕೆ ಪರಿಣತರು ಬೇಕು. ಈಗ ನ್ಯಾಟ್ ಅನ್ನುವ ಕ್ರಮ ಬಳಕೆಗೆ ಬರುತ್ತಿದೆ. ಇದಕ್ಕೆ 1800 ರೂಪಾಯಿ ತಗಲುತ್ತದೆ. ಒಂದು ಗಂಟೆಯೊಳಗೆ ಫಲಿತಾಂಶ ಬರುತ್ತದೆ. ಪಿಸಿಆರ್ ಮತ್ತು ನ್ಯಾಟ್ ವೈರಾಣುವನ್ನೇ ಪರೀಕ್ಷಿಸುವದರಿಂದ ಅದು ಮೊದಲ ದಿನದಿಂದಲೇ ಕರಾರುವಾಕ್ಕಾದ ಫಲಿತಾಂಶವನ್ನು ಕೊಡುತ್ತದೆ. ಈಗ ನಮ್ಮ ದೇಶ ಇರುವ ಹಂತದಲ್ಲಿ ವ್ಯಾಪಕವಾಗಿ ಮತ್ತು ಪುಕ್ಕಟೆಯಾಗಿ ಪರೀಕ್ಷೆ ನಡೆಸಬೇಕು ಅನ್ನುವುದು ತಜ್ಞರ ಸಲಹೆ. ಡಾಕ್ಟರ್ ನವೀನ್ ಡಾಂಗ್ ಹೇಳುವಂತೆ "ಒಟ್ಟಿಗೆ ಸಾವಿರಾರು ಜನರನ್ನು ಪರೀಕ್ಷೆ ಮಾಡಬಹುದಾದ ಯಂತ್ರಗಳು ಲಭ್ಯವಿದೆ. ಅವುಗಳನ್ನು ತರಿಸಿಕೊಳ್ಳಬೇಕು. ದುರಾದೃಷ್ಟ ಅಂದರೆ ಅಂತಹ ಒಂದು ಯಂತ್ರವೂ ಭಾರತದಲ್ಲಿಲ್ಲ."

ಅಮರ್ತ್ಯಸೇನ್:
ಕೋವಿಡ್ ಬಿಕ್ಕಟ್ಟನ್ನು ಒಂದು ಯುದ್ಧ ಅನ್ನುವ ರೀತಿಯಲ್ಲಿ ವರ್ಣಿಸಲಾಗುತ್ತಿದೆ. ಆದರೆ ಇದೊಂದು ಯುದ್ಧವಲ್ಲ. ಯುದ್ಧ ಅನ್ನುವುದು ಒಬ್ಬನ ನಾಯಕತ್ವದಲ್ಲಿ ನಡೆಯುತ್ತದೆ. ಅದು ನೆಪೋಲಿಯನ್ ಇರಬಹುದು ಅಥವಾ ಸ್ಟಾಲಿನ್ ಇರಬಹುದು. ಅವರು ಏನು ಮಾಡಬೇಕು ಅನ್ನುವುದನ್ನು ನಿರ್ಧರಿಸುತ್ತಾರೆ. ಯುದ್ಧದ ಹೋಲಿಕೆ ಸರಿಯಲ್ಲ. ಯಾಕೆಂದರೆ ತುಂಬಾ ವಿಭಿನ್ನ ಗುಂಪುಗಳು, ಆಸಕ್ತಿಗಳು ಇರುವ ದೇಶ ಇದು. ಕೆಲವರು ನಿರ್ದಿಷ್ಟವಾಗಿ ಕೋವಿಡ್–19 ಹರಡುವುದನ್ನು ನಿಲ್ಲಿಸುವುದರಲ್ಲೇ ಆಸಕ್ತರಾಗಿದ್ದಾರೆ. ಉಳಿದವರು ಮುಂದಿನ ಊಟಕ್ಕೆ ಏನು ಮಾಡಬೇಕು ಅನ್ನುವ ಚಿಂತೆಯಲ್ಲಿದ್ದಾರೆ. ಲಾಕ್‌ಡೌನ್ ಸಂದರ್ಭದಲ್ಲಿ ನೂರಾರು ಜನರ ಕೆಲಸ ಕಳೆದುಕೊಳ್ಳುತ್ತಾರೆ. ಆದ–ಾಯವಿರೋದಿಲ್ಲ, ಆಹಾರ ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ. ಕೊನೆಗೆ ನೂರಾರು ಜನ ಹಸಿವಿನಿಂದ ಸಾಯುವ ಸ್ಥಿತಿ ನಿರ್ಮಾಣವಾಗುತ್ತದೆ. ಸಂಕಷ್ಟವಂತೂ ಆಗೇ ಆಗುತ್ತದೆ. ಸಾವೂ ಸಂಭವಿಸುತ್ತದೆ. ಈಗ ಪರಸ್ಪರ ಸಹಕಾರದಿಂದ ಕೆಲಸ ಮಾಡಬೇಕಾಗಿದೆ. ಯುದ್ಧ ಪರಸ್ಪರ ಸಹಕಾರದಿಂದಾಗುವ ಕ್ರಿಯೆ ಅಲ್ಲ.

ಆರೋಗ್ಯವೋ ಆರ್ಥಿಕತೆಯೋ; ಜೀವ ಮುಖ್ಯವೋ ಜೀವನ ಮುಖ್ಯವೋ?

ಕೌಶಿಕ್ ಬಸು:
ನಾವು ಅರ್ಥಿಕತೆಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಎತ್ತಿದ ಕೂಡಲೆ, 'ಈಗ ಜನರ ಪ್ರಾಣ ಮುಖ್ಯ. ಇದು ಆರ್ಥಿಕತೆಯ ಬಗ್ಗೆ ಮಾತನಾಡುವ



ಸಮಯವಲ್ಲ' ಅನ್ನುತ್ತಾರೆ. ಆದರೆ ಹಾಗೆ ಅವೆರಡನ್ನು ಎದುರು ಬದುರು ಇಡುವುದೇ ನನ್ನ ಪ್ರಕಾರ ಸಂಪೂರ್ಣ ತಪ್ಪು. ಇದು ಜೀವ ವರ್ಸಸ್ ಜೀವದ ಸಮಸ್ಯೆಯೇ. ಆರ್ಥಿಕತೆಯನ್ನು ನಾಶವಾಗುವುದಕ್ಕೆ ಬಿಟ್ಟರೂ ಅಪಾರವಾದ ಸಾವು ನೋವು ಸಂಭವಿಸುತ್ತದೆ. ವೈರಾಣುವನ್ನು ನಿಯಂತ್ರಿಸುವ ವಿಷಯದಲ್ಲಿ ಭಾರತ ಪ್ರಾರಂಭದಲ್ಲೇ ಪ್ರಮುಖ ಕ್ರಮ ತೆಗೆದುಕೊಂಡಿದೆ. ಇನ್ನೂ ಹೆಚ್ಚು ವ್ಯವಸ್ಥಿತವಾಗಿ ಮಾಡಬಹುದಿತ್ತು ಅನ್ನುವುದು ನಿಜ. ಆದರೆ ನಾವು ಒಂದು ಎಚ್ಚರವಹಿಸಬೇಕು. ಈ ಲಾಕ್‌ಡೌನ್‌ನ್ನಿಂದ ಆರ್ಥಿಕತೆ ಸಂಪೂರ್ಣ ಕುಸಿದು ಹೋಗಬಾರದು. ಆರ್ಥಿಕತೆ ಕುಸಿದರೆ ಸಾಮಾನ್ಯ ಜನರಿಗೆ ತುಂಬಾ ತೊಂದರೆಯಾಗುತ್ತದೆ. ಬಡವರು, ವಲಸೆಗಾರರಿಗೆ ತೊಂದರೆಯಾಗುತ್ತದೆ. ಎರಡನೆಯ ಸಮಸ್ಯೆ ಅಂದರೆ ರುಪಾಯಿ ಮೌಲ್ಯ ಕುಸಿಯಬಹುದು. ಅದರಿಂದ ಇಡೀ ಆರ್ಥಿಕತೆಯೇ ನಿಂತುಹೋಗಬಹುದು. ಆಗಲೂ ಅಪಾರ ಪ್ರಾಣ ಹಾನಿಯಾಗಬಹುದು. ಹಾಗಾಗಿ ಈಗ ಪ್ರಶ್ನೆ ಇದನ್ನು ಮಾಡಬೇಕಾ ಅಥವಾ ಅದನ್ನು ಮಾಡಬೇಕಾ ಅನ್ನುವುದಲ್ಲ. ಈಗ ವೈರಾಣು ನಿಯಂತ್ರಿಸುವುದು ಹಾಗೂ ಜೊತೆಜೊತೆಯಲ್ಲೇ ನಿರಂತರವಾಗಿ ಆರ್ಥಿಕತೆಯನ್ನು ಎಚ್ಚರದಿಂದ ಗಮನಿಸುತ್ತಿರುವುದು ಒಟ್ಟಿಗೇ ಆಗಬೇಕು. ಪರಿಸ್ಥಿತಿ ಸಂಪೂರ್ಣ ಕೈಮೀರಿ ಹೋಗುವುದಕ್ಕೆ ಅವಕಾಶಕೊಡಬಾರದು.

ಅಮೇರಿಕೆಯ ಅನುಭವದಿಂದ ನಾವೇನಾದರೂ ಕಲಿಯಬಹುದೇ

ಅಮೃತ್ ಸಿರು

ಅಮೇರಿಕಾ ಈವರೆಗೆ ಮಹಾಮಾರಿಯ ಬಿಕ್ಕಟನ್ನು ಎದುರಿಸಲು ಎರಡು ಟ್ರಿಲಿಯನ್ ಹಣ ಬಿಡುಗಡೆ ಮಾಡಿದೆ. ಅಂದರೆ ಜಿಡಿಪಿಯ ಶೇಕಡ 10ರಷ್ಟು. ತಕ್ಷಣದ ಅವಶ್ಯಕತೆಗಿಂತ ಸ್ವಲ್ಪ ಹೆಚ್ಚಾಗಿಯೇ ಬಿಡುಗಡೆ ಮಾಡಿದ್ದಾರೆ. ಈ ಮಾಹಮಾರಿಯ ಸಮಸ್ಯೆ ಅಂದರೆ ನೀವು ತಕ್ಷಣ ಕ್ರಮ ತೆಗೆದುಕೊಳ್ಳದೇ ಹೋದರೆ ತುಂಬಾ ಜನ ವಯಸ್ಸಾದವರನ್ನು ಕಳೆದುಕೊಳ್ಳಬೇಕಾಗುತ್ತದೆ. ಹಾಗಾಗಿ ಲಾಕ್ ಡೌನ್ ಬೇಕಾಗುತ್ತದೆ. ಆದರೆ ನೀವು ಲಾಕ್‌ಡೌನ್ ಮಾಡಿದರೆ ಅದು ಕಿರಿಯವಯಸ್ಸಿನವರ ಹಾಗೂ ಬಡವರ ಬದುಕಿಗೆ ತೊಂದರೆಯಾಗುತ್ತದೆ. ಹಾಗಾಗಿ ಉತ್ಪನ್ನದ ಮರುಹಂಚಿಕೆ ಅನಿವಾರ್ಯವಾಗುತ್ತದೆ. ಆದರೆ ಇದನ್ನು ಹೇಗೆ ಮಾಡುವುದು? ಯಾವ ಪ್ರಮಾಣದಲ್ಲಿ ಮಾಡುವುದು? ಆರ್ಥಿಕವಾಗಿ ಯಾವುದು ಹೆಚ್ಚು ಪರಿಣಾಮಕಾರಿಯಾದದ್ದು? ನಮ್ಮ ದೃಷ್ಟಿಯಲ್ಲಿ ನೇರವಾಗಿ ಕೂಲಿಯನ್ನು ನಗದಿನಲ್ಲಿ ಕೊಡುವುದು ಹೆಚ್ಚು ಪರಿಣಾಮಕಾರಿಯಾದ ಕ್ರಮ. ಕಂಪೆನಿಗಳನ್ನು ಮುಚ್ಚುವುದಕ್ಕೆ ಬಿಡಬಾರದು. ಟ್ರಂಪ್ ಮಾಡಿದ ಹಾಗೆ ಕಂಪೆನಿಗಳಿಗೆ ನೆರವು ನೀಡಿ, ನಂತರ ಅದರ ಪ್ರಯೋಜನ ಕೆಳಗಿನ ಹಂತಕ್ಕೆ ಹರಿದು ಬರುವುದನ್ನು ನಿರೀಕ್ಷಿಸುವುದಕ್ಕಿಂತ ಇದು ಹೆಚ್ಚು ಪರಿಣಾಮಕಾರಿಯಾದ ಕ್ರಮ. ಹಾಗೆ ಹರಿದು ಬರುವುದು ಕಷ್ಟ. ಜನರಿಗೆ ನೇರವಾಗಿ ಸಬ್ಸಿಡಿಗಳನ್ನು ಹಲವು ರೀತಿಯಲ್ಲಿ ಕೊಡಬಹುದು.

ಪ್ರಣಬ್ ರಾಯ್: ಭಾರತದಲ್ಲಿ ನೂರಾರು ಜನ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಸ್ವಯಂ ಉದ್ಯೋಗಿಗಳು ಕಷ್ಟದಲ್ಲಿದ್ದಾರೆ. ಕೆಲಸವಿಲ್ಲದ ದಿನಗೂಲಿಯವರಿದ್ದಾರೆ. ಭವಿಷ್ಯವೂ ಇಲ್ಲದ, ವರ್ತಮಾನವೂ ಇಲ್ಲದ, ಬೀದಿಯಲ್ಲಿ ಬದುಕುತ್ತಿರುವ ಲಕ್ಷಾಂತರ ಜನರಿದ್ದಾರೆ. ಹಾಗೆ ಸಂಕಷ್ಟದಲ್ಲಿರುವವರಿಗೆ ಸರ್ಕಾರ ನೇರವಾಗಿ ಕೂಲಿ, ಆಹಾರವನ್ನು ಕೊಡುವುದಕ್ಕೆ ಸಂಬಂಧಿಸಿದಂತೆ ನಿಮ್ಮ ಅಭಿಪ್ರಾಯವೇನು?

ಅಮೃತ್ ಸಿರು:
ಕೊಡಬೇಕು. ಭಾರತದಲ್ಲಿ ಸುಮಾರು ಜಿಡಿಪಿಯ ಶೇಕಡ 1ರಷ್ಟನ್ನು ಅದಕ್ಕೆ ಇಟ್ಟಿದ್ದಾರೆ. ಅದು ತುಂಬಾ ಕಡಿಮೆ. ಇದೊಂದು ರೀತಿ ಕಣ್ಣಿಗೆ ಕಾಣದ್ದರ ವಿರುದ್ಧದ ಯುದ್ಧ. ದೀರ್ಘ ಕಾಲ ನಡೆಯುವ ಯುದ್ಧ. ದುರ್ಬಲರ ರಕ್ಷಣೆ ಮಾಡಬೇಕು. ಅವರನ್ನು ಕೆಲಸದಿಂದ ತೆಗೆಯದಂತೆ ನೋಡಿಕೊಳ್ಳಬೇಕು. ಅನೌಪಚಾರಿಕ ಕ್ಷೇತ್ರದಲ್ಲಿ ಇರುವವರಿಗೆ ಸಬ್ಸಿಡಿಯನ್ನು ಹೆಚ್ಚಿಸಬೇಕು. ಅನೌಪಚಾರಿಕ ವಲಯ ಭಾರತದ ಆರ್ಥಿಕತೆಯ ಬಹುದೊಡ್ಡ ಭಾಗ.

ಪ್ರೊಣಾಯ್ ರಾಯ್:
ಅರವಿಂದ್ ಈ ವಿಷಯದಲ್ಲಿ ಭಾರತ ಉಳಿದ ದೇಶಗಳಿಗಿಂತ ಹೇಗೆ ಭಿನ್ನ?

ಅರವಿಂದ್:
ಈ ಬಿಕ್ಕಟ್ಟಿಗೆ ಸಿಲುಕುವ ಮೊದಲೇ ಭಾರತದಲ್ಲಿ ಆರ್ಥಿಕ ಹಿನ್ನಡೆಯಿತ್ತು.





ಅದಕ್ಕೆ ಸಂಬಂಧಿಸಿದ ಎಲ್ಲಾ ಸೂಚಿಗಳು ಇಳಿಯುತ್ತಿದ್ದವುತ್ತು. ಹಣ–ಕಾಸು ಕ್ಷೇತ್ರವೂ ನಿಧಾನವಾಗುತ್ತಿತ್ತು. ಇದರ ಮೇಲೆ ಕೊರೋನ ವೈರಸ್ ಬಿಕ್ಕಟ್ಟು ಎರಗಿದೆ. ಅದರಿಂದ ಉಳಿದ ದೇಶಗಳಿಗೆ ಹೋಲಿಸಿದರೆ ಭಾರತದ ಆರ್ಥಿಕತೆ ಇನ್ನಷ್ಟು ಕೆಟ್ಟ ಸ್ಥಿತಿಯಲ್ಲಿದೆ. ಎಡನೆಯದಾಗಿ ಮೂಲಭೂತ ವೈದ್ಯಕೀಯ ಸೌಕರ್ಯ ಭಾರತದಲ್ಲಿ ಸಾಪೇಕ್ಷವಾಗಿ ದುರ್ಬಲವಾಗಿದೆ. ಹಾಗಾಗಿ ಉಳಿದ ದೇಶಗಳಿಗೆ ಹೋಲಿಸಿದರೆ ಅರೋಗ್ಯಕ್ಕೆ ಸಂಬಂಧಿಸಿದ ಬಿಕ್ಕಟ್ಟನ್ನು ಎದುರಿಸುವ ಸಾಮರ್ಥ್ಯ ನಮ್ಮಲ್ಲಿ ಸ್ವಲ್ಪ ಕಡಿಮೆ. ಮೂರನೆಯದಾಗಿ ನಮ್ಮಲ್ಲಿ ಶೇಕಡ 70ರಿಂದ 80ರಷ್ಟು ಜನ ಅನೌಪಚಾರಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಬೇರೆ ದೇಶಗಳಿಗೆ ಹೋಲಿಸಿದರೆ, ಅದರಲ್ಲೂ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಗೆ ಹೋಲಿಸಿದರೆ ಇದು ಜಾಸ್ತಿ. ಹಾಗಾಗಿ ಅವರ ತನಕ ಸಾಗಿ, ಅವರಿಗೆ ಈ ಹೊಡೆತವನ್ನು ತಾಳಿಕೊಳ್ಳುವುದಕ್ಕೆ ಬೇಕಾದ ನೆರವನ್ನು ಒದಗಿಸುವುದು ಕಷ್ಟದ ಕೆಲಸ. ಅದರ ಒಂದು ಆಯಾಮವನ್ನು ನಾವು ಈಗ ನೋಡಿದ್ದೇವೆ. ವಲಸೆ ಕಾರ್ಮಿಕರ ಪಾಡನ್ನು ಗಮನಿಸಿದ್ದೇವೆ. ಅದು ನಮ್ಮ ಕಣ್ಣು ತೆರೆಸಿದೆ. ಈ ಬಹುದೊಡ್ಡ ದುರ್ಬಲ ಸಮುದಾಯದವರನ್ನು ನಾವು ಕಡೆಗಣಿಸಿಬಿಟ್ಟಿದ್ದೆವು. ನಮ್ಮ ಆರ್ಥಿಕತೆಯನ್ನು ಅವರು ಈವರೆಗೂ ಕಾಪಾಡಿಕೊಂಡು, ನಡೆಸಿಕೊಂಡು ಬಂದಿದ್ದಾರೆ. ಆದರೆ ಅವರ ಸ್ಥಿತಿಯೇ ಹೀನಾಯವಾಗಿದೆ. ಇದು ಸಮಸ್ಯೆಯ ಮತ್ತೊಂದು ಆಯಾಮ. ಕೌಶಿಕ್ ಬಸು ಅವರು ಹೇಳುವಂತೆ ಜೀವ ಹಾಗೂ ಜೀವನದ ಪ್ರಶ್ನೆಯ ಚರ್ಚೆ ಮುಖ್ಯವಾಗುತ್ತದೆ. ಯಾಕೆಂದರೆ ಇಲ್ಲಿ ಬಹುಸಂಖ್ಯಾತರು ಬಡವರು, ದುರ್ಬಲರು. ಹಾಗಾಗಿ ಸಮಸ್ಯೆಯ ಆರ್ಥಿಕ ಆಯಾಮವನ್ನು ಎದುರಿಸುವುದು ಅನಿವಾರ್ಯ. ಇಲ್ಲದೇ ಹೋದರೆ ಪರಿಣಾಮ ಭೀಕರವಾಗಬಹುದು. ದುರ್ಬಲರಿಗೆ ನೆರವು ನೀಡಬೇಕು. ಆದರೆ ಅವರನ್ನು ತಲುಪುವುದು ಸುಲಭವಲ್ಲ. ಅವರಲ್ಲಿ ಬಹುಪಾಲು ಜನ ಅಸಂಘಟಿತ ಕ್ಷೇತ್ರದಲ್ಲಿದ್ದಾರೆ. ಅವರನ್ನು ತಲುಪುವುದು ಒಂದು ದೊಡ್ಡ ಸವಾಲು. ಈ ದೃಷ್ಟಿಯಲ್ಲೂ ಭಾರತ ಉಳಿದ ರಾಷ್ಟ್ರಗಳಿಗಿಂತ ಭಿನ್ನ. ಹಾಗಾಗಿ ಇದಕ್ಕಾಗಿ ಹೆಚ್ಚು ಹಣವನ್ನು ಹೂಡುವುದು ಅನಿವಾರ್ಯ.

ಕೌಶಿಕ್ ಬಸು:

ವಿತ್ತೀಯ ಕೊರತೆಯನ್ನು ಗಮನಿಸಬೇಕು ಅನ್ನುವುದು ಸರಿ ಇರಬಹುದು. ಆದರೆ ಈಗ ಅದು ಪ್ರಸ್ತುತವಲ್ಲ. ಅದೇನು ಒಂದೋ ಎರಡೋ ತಿಂಗಳಿಗೆ ಸೀಮಿತವಾದ ವಿಷಯವಲ್ಲ. ಮುಂದಿನ ಆರು ತಿಂಗಳಿನಲ್ಲಿ ಸರಿಪಡಿಸಿಕೊಳ್ಳಬಹುದು. ಜೊತೆಗೆ ಆರ್ಥಿಕತೆ ಅಂದರೆ ವಿತ್ತೀಯ ಕೊರತೆ ಒಂದೇ ಅಲ್ಲ. ಇನ್ನೂ ಹಲವು ಅಂಶಗಳಿವೆ. ಅವುಗಳಿಗೆ ಗಮನ ಕೊಡದೇ ಹೋದರೆ ಆರ್ಥಿಕ ಬಿಕ್ಕಟ್ಟು ನಮ್ಮನ್ನು ಕಾಡುವುದಕ್ಕೆ ಆರು ತಿಂಗಳು ಬೇಕಾಗಿಲ್ಲ. ಕೆಲವೇ ವಾರಗಳಲ್ಲಿ ಪ್ರಾರಂಭವಾಗುತ್ತದೆ.

ಪ್ರಣಬ್ ರಾಯ್:

ಪ್ರೊಫೆಸರ್ ಸೇನ್, ನಿಮ್ಮ ಅನುಭವದಲ್ಲಿ ಈ ಬಿಕ್ಕಟ್ಟಿನಿಂದ ನಾವು ಯಾವು ಪಾಠ ಕಲಿಯಬಹುದು? ನಮ್ಮ ಮುಂದಿನ ಭವಿಷ್ಯ ಹೇಗಿರಬಹುದು?

ಅಮರ್ತ್ಯ ಸೇನ್:

ಹಲವಾರು ಪಾಠಗಳು ಸಾಧ್ಯ. ಎರಡು ಕಲಿಯಲೇ ಬೇಕಾದ ಪಾಠಗಳ ಬಗ್ಗೆ ಹೇಳುತ್ತೇನೆ. ನಾನು ಆರ್ಥಿಕತೆಯ ಕುಸಿತದ ಬಗ್ಗೆ ಚಿಂತಿತನಾಗಿಲ್ಲ. ನಿಜ, ಲಾಕ್‌ಡೌನ್‌ನಿಂದ ಆರ್ಥಿಕತೆಗೆ ತೊಂದರೆಯಾಗಿದೆ. ಭಾರತದ ಆರ್ಥಿಕತೆಗೆ ಚೇತರಿಸಿಕೊಳ್ಳುವ ಸಾಮರ್ಥ್ಯವಿದೆ. ನಮ್ಮಲ್ಲಿ ಉತ್ಸುಕರಾಗಿರುವ ಕೆಲಸಗಾರರಿದ್ದಾರೆ, ಉದ್ದಿಮೆದಾರರಿದ್ದಾರೆ. ಆರ್ಥಿಕತೆ ಸುಧಾರಿಸಿಕೊಳ್ಳುತ್ತದೆ. ಆದರೆ ನಿಜವಾದ ಸಮಸ್ಯೆ ಆರೋಗ್ಯ ಕ್ಷೇತ್ರವನ್ನು ಸಂಪೂರ್ಣ ಕಡೆಗಣಿಸಿರುವುದು. ಅದು ನಮಗೆ ಸ್ಪಷ್ಟವಾಗಿ ಕಾಣುತ್ತದೆ. ಇದು ಹಿಂದಿನ ಸರ್ಕಾರದಲ್ಲೇ ಇತ್ತು. ಆದರೆ ಈಗ ಅದು ಹೆಚ್ಚಾಗಿದೆ. ನಾವು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಖರ್ಚು ಮಾಡಬೇಕು. ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಆರೋಗ್ಯಕ್ಕೆ ಮಹತ್ವ ನೀಡಬೇಕು. ನೀವು ಖಾಯಿಲೆ ಬಂದಾಗ ಖಾಸಗಿ ಆಸ್ಪತ್ರೆಗೆ ಹೋಗುತ್ತೀರಿ. ಸರ್ಕಾರ ನಿಮ್ಮ ಖರ್ಚನ್ನು ಕೊಡುತ್ತೆ ಅನ್ನುವುದಲ್ಲ. ನಮ್ಮಲ್ಲಿ ಪ್ರಾಥಮಿಕ ಆರೋಗ್ಯ ಕ್ಷೇತ್ರದ ಮೂಲಭೂತ ಸೌಲಭ್ಯ ಹೆಚ್ಚಬೇಕು. ಚೀನಾದಲ್ಲಿ ಅದು ಇದೆ. ತೈವಾನಿನಲ್ಲಿ ಇದೆ. ಕೊರಿಯಾದಲ್ಲಿ ಇದೆ. ಎಲ್ಲೆಲ್ಲಿ ಈ ಬಿಕ್ಕಟ್ಟನ್ನು ನಿಭಾಯಿಸುತ್ತಿದ್ದಾರೋ ಅಲ್ಲೆಲ್ಲಾ ಇದೆ. ಅಲ್ಲೆಲ್ಲಾ ಜನರ ಆಯುಷ್ಯ ಕೂಡ ಹೆಚ್ಚಾಗಿದೆ. ಭಾರತದಲ್ಲಿ ಅಂತಹ ಸೌಕರ್ಯ ಸಾಲದು. ಇದನ್ನು ಬಹುಕಾಲದಿಂದ ನಿರ್ಲಕ್ಷಿಸಿಕೊಂಡೇ ಬಂದಿದ್ದೇವೆ. ಶಿಕ್ಷಣದ ವಿಷಯದಲ್ಲೂ ಇದು ಸ್ವಲ್ಪ ಮಟ್ಟಿಗೆ ನಿಜ. ಅಲ್ಲಿ ಒಂದಿಷ್ಟಾದರೂ ಆಗಿದೆ. ಆದರೆ ನಾವು ಖಾಸಗಿ ಕ್ಷೇತ್ರವನ್ನು ಬೇಕಾದ್ದಕ್ಕಿಂತ ಹೆಚ್ಚಾಗಿ ಅವಲಂಬಿಸಿದ್ದೇವೆ. ಸಾರ್ವಜನಿಕ ಕ್ಷೇತ್ರವನ್ನು ಬೆಳೆಸಬೇಕು.

ಇನ್ನೊಂದು ವಿಷಯ, ಈ ಬಿಕ್ಕಟ್ಟು ಒಂದು ಯುದ್ಧವಲ್ಲ. ಪರಸ್ಪರ



ಸಹಕಾರದಿಂದ ಎಲ್ಲಾರೂ ಒಟ್ಟಾಗಿ ಪರಿಹಾರ ಕಂಡುಕೊಳ್ಳಬೇಕು. ಸರ್ಕಾರದ ವಿರೋಧಿ ಎಂದರೆ ದೇಶವಿರೋಧಿ ಅಲ್ಲ. ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಸಹಕಾರ ಬೇಕು. ಅದು ಯಾಕೆ ಬೇಕು ಅನ್ನುವುದು ತಕ್ಷಣಕ್ಕೆ ಅರ್ಥವಾಗದೇ ಇರಬಹುದು. ಪ್ರಜಾಸತ್ತಾತ್ಮಕ ವ್ಯವಸ್ಥೆ ಕೆಲಸಮಾಡುವುದೇ ಸಹಕಾರದ ತತ್ತ್ವದಲ್ಲಿ. ಅದು ಯಶಸ್ವಿಯಾಗುವುದೇ ಹಾಗೆ. ನಾವೆಲ್ಲರೂ ಒಟ್ಟಾಗಿ ಸಹಕಾರದಿಂದ ಕೆಲಸ ಮಾಡಿದರೆ ಕೋವಿಡ್–19ನ್ನು ಮೀಕೊಳ್ಳಬಹುದು.

ಅಮಿತ್ ಸಿರು:

ನನ್ನ ದೃಷ್ಟಿಯಲ್ಲಿ ಭಾರತದ ಆರ್ಥಿಕತೆಗೆ ಈ ಮೊದಲೇ ಹಿನ್ನಡೆಯಾಗಿ–ತ್ತು, ಎನ್‌ಪಿಎ ಸಮಸ್ಯೆಯಿಂದಾಗಿ ಬ್ಯಾಂಕಿಂಗ್ ಕ್ಷೇತ್ರ ತೊಂದರೆಯಲ್ಲಿತ್ತು. ಹಾಗಾಗಿ ಭಾರತ ಇಂದು ಆರ್ಥಿಕತೆಯ ಚೇತರಿಕೆಗೆ ನೆರವಾಗುವ ಸ್ಥಿತಿಯಲ್ಲಿಲ್ಲ. ಆರ್ಥಿಕತೆಯನ್ನು ನಿಜವಾಗಿ ಪುನಶ್ಚೇತನಗೊಳಿಸುವುದಕ್ಕೆ ಕ್ರಿಯಾಶೀಲವಾದ ಚಿಂತನೆ ಬೇಕಾಗುತ್ತದೆ. ಆದರೆ ಸಧ್ಯದ ಬಿಕ್ಕಟ್ಟನ್ನು ಎದುರಿಸುವುದಕ್ಕೆ ನನ್ನ ಲೆಕ್ಕಾಚಾರದ ಪ್ರಕಾರ ಜಿಡಿಪಿಯ ಕನಿಷ್ಠ ಶೇಕಡ 5ರಷ್ಟಾದರೂ ಖಂಡಿತಾ ಬೇಕಾಗುತ್ತದೆ. ಇದರಿಂದ ವಿತ್ತೀಯ ಕೊರತೆ ಹೆಚ್ಚಾಗಬಹುದು. ಅದು ಹಣದುಬ್ಬರದ ಮೇಲೂ ಪರಿಣಾಮ ಬೀರುತ್ತದೆ. ಆದರೆ ಇಲ್ಲಿ ಒಂದು ಸಮಾಧಾನದ ವಿಷಯವೂ ಇದೆ. ಎಲ್ಲಾ ದೇಶಗಳಲ್ಲೂ ಸಧ್ಯಕ್ಕೆ ಈ ಸಮಸ್ಯೆ ಇದೆ. ಹಾಗಾಗಿ ನಮ್ಮ ದೇಶದಿಂದ ಹೂಡಿಕೆದಾರರು ಬಂಡವಾಳವನ್ನು ಹಿಂತೆಗೆದುಕೊಂಡು ಬೇರೆ ದೇಶಗಳಲ್ಲಿ ಹೂಡಿ ತಮ್ಮ ಪೋರ್ಟ್‌ಫೋಲಿಯೋವನ್ನು ಸುಧಾರಿಸಿಕೊಳ್ಳುತ್ತಾರೆ ಅನ್ನುವ ಆತಂಕ ಸಧ್ಯಕ್ಕಂತೂ ಇಲ್ಲ. ಅದನ್ನು ಅನುಕೂಲ ಅಂತ ಭಾವಿಸಿಕೊಂಡು ಬಿಕ್ಕಟ್ಟಿನ ನಿವಾರಣೆಗೆ ಕ್ರಮಗಳನ್ನು ಹೆಚ್ಚು ಉದಾರವಾಗಿ ತೆಗೆದುಕೊಳ್ಳಬಹುದು. ಆಸ್ಪತ್ರೆಗಳ ಕೊರತೆ ಇದೆ. ನಿರ್ಮಿಸುವುದಕ್ಕೆ ಸಮಯ ಬೇಕು. ಆದರೆ ನಿರ್ಮಿಸಬೇಕು. ಇಲ್ಲದೇ ಹೋದರೆ ಸಮಸ್ಯೆ ನಾವು ಭಾವಿಸಿರುವುದಕ್ಕಿಂತ ಹೆಚ್ಚು ತೀವ್ರವಾಗುತ್ತದೆ. ನಷ್ಟವೂ ನಿರೀಕ್ಷೆಯನ್ನು ಮೀರುತ್ತದೆ.

ಭಾರತ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು?

ಅರವಿಂದ್ :

ನಾವೀಗ ಸ್ಟಿಮ್ಯುಲಸ್ ಬಗ್ಗೆ ಮಾತನಾಡುವುದಕ್ಕೆ ಆಗುವುದಿಲ್ಲ. ಆರ್ಥಿಕತೆ ಕುಸಿದಿದೆ, ಅದನ್ನು ಮತ್ತೆ ಸ್ಥಾಪಿಸಬೇಕು ಅಂತ ಹೇಳುವುದಕ್ಕೆ ಆಗುವುದಿಲ್ಲ. ಈಗ ಅರ್ಥಿಕತೆಯನ್ನು ಹಾಗೆ ಸುಸ್ಥಿತಿಗೆ ತರುವುದಕ್ಕೆ ಆಗುವುದಿಲ್ಲ. ಏನು ಮಾಡಬೇಕು ಅನ್ನುವುದನ್ನು ಒಂದೊಂದಾಗಿ ನೋಡೋಣ. ಜಿಡಿಪಿಯ ಶೇಕಡ 4ರಿಂದ 5ರಷ್ಟನ್ನು ಖರ್ಚುಮಾಡಬೇಕು ಅನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಈಗ ಸುಮಾ–ರಿಗೆ ಜಿಡಿಪಿ ಶೇಕಡ 1ರಷ್ಟು ಘೋಷಿಸಿದ್ದಾರೆ. ಇನ್ನೂ ಸಾಕಷ್ಟು ಮಾಡಬೇಕು. ಇದರಲ್ಲಿ ಮೊದಲನೆಯದಾಗಿ ತಪಾಸಣೆ ನಡೆಸುವುದಕ್ಕೆ ಖರ್ಚು ಮಾಡಬೇಕು. ಅದಕ್ಕೆ ಬೇಕಾದ ಸಲಕರಣೆಗಳನ್ನು ಕೊಳ್ಳುವುದು ಇತ್ಯಾದಿಗಳಿಗೆ ಯಾವುದೇ ನಿರ್ಬಂಧವೂ ಇಲ್ಲದೆ ಪೂರ್ತಿ ಖರ್ಚು ಮಾಡಬೇಕು. ಅದಕ್ಕೆ ಸಂಬಂಧಿಸಿದಂತೆ ಹೂಡಿಕೆಯನ್ನು ಹೆಚ್ಚಿಸಬೇಕು. ಎರಡನೆಯದಾಗಿ ದುರ್ಬಲರ ಸುರಕ್ಷೆಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕಾಗಿ ದೊಡ್ಡ ಭಾಗ ಹಣವನ್ನು ಮೀಸಲಿಡಬೇಕು. ಸರ್ಕಾರ ಸಧ್ಯಕ್ಕೆ ಲಭ್ಯವಿರುವ ಪಡಿತರ ಪದ್ಧತಿ, ನಗದು ವರ್ಗಾವಣೆ ಇತ್ಯಾದಿ ವ್ಯವಸ್ಥೆಯನ್ನು ಬಳಸಿಕೊಂಡೇ ಮಾಡುತ್ತಿದೆ. ಇದು ಒಳ್ಳೆಯ ಕ್ರಮ. ಈ ಸಂದರ್ಭದಲ್ಲಿ ನೆರವು ಬೇಕಾದ ಎಲ್ಲರಿಗೂ ಸಿಗುವಂತೆ ನೋಡಿಕೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ಅವಶ್ಯಕತೆ ಇಲ್ಲದ ಕೆಲವ–ರಿಗೆ ಅದು ಹೋಗಿಬಿಡಬಹುದು. ತೊಂದರೆಯಿಲ್ಲ. ಆದರೆ ಅವಶ್ಯಕತೆ ಇರುವವರಿಗೆ ಮಾತ್ರ ಯಾವ ಕಾರಣಕ್ಕೂ ತಪ್ಪಬಾರದು. ಜನಧನ್ ಇತ್ಯಾದಿ ಎಲ್ಲಾ ಬ್ಯಾಂಕ್ ಅಕೌಂಟುಗಳಿಗೆ ವರ್ಗಾಯಿಸಬೇಕು. ಎಷ್ಟು ಜನರಿಗೆ, ಎಷ್ಟು ದಿನ, ಹೀಗೆಲ್ಲಾ ಯೋಚಿಸುತ್ತಾ ಕೂರಬಾರದು. ನಾವು ಆಧಾರ್, ಬಿಪಿಎಲ್ ಕಾರ್ಡ್ ಇದ್ದವರಿಗೆ ಮಾತ್ರ ಕೊಡುತ್ತೇವೆ ಎಂದುಕೊಂಡರೆ ನಿಜವಾಗಿ ಅವಶ್ಯಕತೆಯಿರುವ ಎಷ್ಟೋ ಜನರಿಗೆ ಸಿಗದೇ ಹೋಗಿಬಿಡುತ್ತದೆ. ಸರ್ಕಾರಕ್ಕೆ ವಿತ್ತೀಯ ಸಮತೋಲನವನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಇರುತ್ತದೆ. ಆದರೆ ಈ ವರ್ಷ ಅದನ್ನು ಬದಿಗಿಡಬೇಕಾಗುತ್ತದೆ. ವಿತ್ತೀಯ ಕೊರತೆ ಜಿಡಿಪಿಯ 3.5ರಷ್ಟನ್ನು ಮೀರಬಾರದು ಇತ್ಯಾದಿ ಸಾಂಪ್ರದಾಯಿಕ ಚಿಂತನೆಯನ್ನು ಬದಿಗಿಡಬೇಕು. ಒಮ್ಮೆ ಈ ಬಿಕ್ಕಟ್ಟು ಪರಿಹಾರವಾದರೆ, ಆರ್ಥಿಕತೆ ಚೆನ್ನಾಗಿ, ತ್ವರಿತವಾಗಿ ಸುಧಾರಿಸುತ್ತದೆ ಎಂದು ನನಗೆ ತೋರುತ್ತದೆ. ಇಡೀ ಜಗತ್ತಿನಲ್ಲಿ ಈ ಬಿಕ್ಕಟ್ಟು ಹೆಚ್ಚು ತೀವ್ರವಾಗಿದೆ ಅನ್ನುವುದು ನಿಜ. ಆದರೆ ಜಾಗತಿಕ ಯುದ್ಧ ಅಥವಾ ಇನ್‌ಫ್ಲುಯೆಂಜಾ ಮಹಾಮಾ–ರಿಗೆ ಹೋಲಿಸಿದರೆ ಇದರ ಅವಧಿ ಕಡಿಮೆ ಇರುತ್ತದೆ. ರಾಜ್ಯಗಳಿಗೆ

ಹಣದ ಕೊರತೆ ಕಾಡದಂತೆ ನೋಡಿಕೊಳ್ಳಬೇಕು. ಈಗ ರಾಜ್ಯಗಳು ಹಣದ ತೊಂದರೆಯನ್ನು ಎದುರಿಸುತ್ತಿವೆ. ರಾಜ್ಯಗಳು ಹೆಚ್ಚು ಹಣಕ್ಕಾಗಿ ಕೇಂದ್ರವನ್ನು ಒತ್ತಾಯಿಸುತ್ತಿವೆ.

ಅಭಿಜಿತ್ ಬ್ಯಾನರ್ಜಿ

ಸಮಾಜದ ದುರ್ಬಲರ ಕೈಯಲ್ಲಿ ಹಣ ಇರಬೇಕು. ಅದು ತುಂಬಾ ಮುಖ್ಯ. ಅದು ಮೈಕ್ರೊ ಆರ್ಥಿಕ ಕಾರಣಗಳಿಂದಲೂ ಅವಶ್ಯಕ. ನಾವು ಈವರೆಗೂ ಕೇನ್ಸ್ ಹೇಳುವ ಮಂದಗತಿಯ ಹಂತದಲ್ಲಿ ಇದ್ದೆವು. ಈಗ ಕೇನ್ಸ್ ಹೇಳುವ ಕುಸಿತದ ಹಂತ ತಲುಪಿದ್ದೇವೆ. ಬೇಡಿಕೆ ಕಮ್ಮಿಯಾಗುತ್ತದೆ, ವರಮಾನ ಕಮ್ಮಿಯಾಗುತ್ತದೆ ಅದರಿಂದ ಮತ್ತೆ ಬೇಡಿಕೆ ಕಮ್ಮಿಯಾಗುತ್ತದೆ. ಹೀಗೆ ಮಾಮೂಲಿ ಕಥೆ ಮುಂದುವರಿಯುತ್ತದೆ. ಈಗ ದೊಡ್ಡ ಪ್ರಮಾಣದಲ್ಲಿ ಹಣ ಹೂಡಬೇಕು. ಹೂಡದೇ ಇರುವುದಕ್ಕೆ ಕಾರಣವೇ ಇಲ್ಲ. ಹಾಗೆಯೇ ಆ ಹಣವನ್ನು ಬಡವರಿಗೆ ಕೊಡದೇ ಇರುವುದಕ್ಕೂ ಕಾರಣವಿಲ್ಲ. ಆರ್ಥಿಕತೆ ದಿವಾಳಿಯಾಗುವುದು, ನಂತರ ಅದರಿಂದ ಹೊರಬರುವುದು ಈ ಪ್ರಕ್ರಿಯೆಯ ಪರಿಣಾಮ ಭೀಕರವಾಗಿರುತ್ತದೆ. ಸಾಲದ ಮರುಪಾವತಿಯನ್ನು ರಿಷೆಡ್ಯುಲ್ ಮಾಡಬೇಕಾಗುತ್ತದೆ. ಸಧ್ಯಕ್ಕೆ ಮೂರು ತಿಂಗಳ ಮಟ್ಟಿಗೆ ಮರುಪಾವತಿಗೆ ರಿಯಾಯಿತಿ ಕೊಡಬೇಕು. ಇದು ಉದ್ದಿಮೆಗಳು ಚೇತರಿಸಿಕೊಳ್ಳುವ ದೃಷ್ಟಿಯಿಂದ ಅನಿವಾರ್ಯ. ಈಗ ಇರುವ ಸಮಸ್ಯೆ ಅಂದರೆ ಹಣವನ್ನು ನಿಜವಾಗಿ ಅವಶ್ಯಕತೆ ಇರುವ ಬಡವರಿಗೆ ಹೇಗೆ ತಲುಪಿಸುವುದು ಅನ್ನುವುದು. ಲಾಕ್‌ಡೌನ್ ಸರಿಯಾಗಿ ಕೆಲಸ ಮಾಡುವಂತೆ ಆಗಬೇಕಾದರೆ ಬಡವರ ಕೈಯಲ್ಲಿ ಹಣ ಇರುವಂತೆ ನೋಡಿಕೊಳ್ಳಬೇಕು. ಇಲ್ಲದೇ ಹೋದರೆ ಅವರು ರಸ್ತೆಗೆ ಬಂದೇ ಬರುತ್ತಾರೆ. ನೀವು ಅವರನ್ನು ಉಪವಾಸ ಇರಿ ಅಂತ ಹೇಳುವುದಕ್ಕೆ ಆಗುವುದಿಲ್ಲ. ಅಥವಾ ಅವರನ್ನು ಪಡಿತರದಲ್ಲೇ ಜೀವಿಸಿ ಅಂತ ಹೇಳುವುದಕ್ಕೂ ಆಗುವುದಿಲ್ಲ. ಅವರಿಗೆ ಬೇರೆ ಅಗತ್ಯಗಳೂ ಇರುತ್ತವೆ. ಲಾಕ್ ಡೌನ್ ಸಮಯದಲ್ಲಿ ಬದುಕು ಕೆಟ್ಟದಾಗಿರುತ್ತದೆ. ನೀವು ಅವರಿಗೆ ಏನು ಉತ್ತೇಜನ ಕೊಡದೇ ಹೋದರೆ ಅವರು ಕೇಳುವುದಿಲ್ಲ. ಅವರಿಗೆ ಹಣ ಕೊಡಬೇಕು. ಆಗ ಅವರು ನಿಯಮಗಳನ್ನು ಪಾಲಿಸಬಹುದು.

ಡಫ್ಲೋ:

ನಾವು ಇದನ್ನು ಜೀವ ಮತ್ತು ಜೀವನದ ನಡುವಿನ ಆಯ್ಕೆಯಾಗಿ ನೋಡಬಾರದು. ಅಷ್ಟೇ ಅಲ್ಲ ಇದು ಜೀವರಕ್ಷಣೆ ಹಾಗೋ ಮೆಕ್ರೋ ಇಕಾನಮಿಯ ನಡುವಿನ ಆಯ್ಕೆಯ ಪ್ರಶ್ನೆಯೂ ಅಲ್ಲ. ಇನ್ನು ಕೆಲವು ದಿನಗಳಲ್ಲಿ ಅವರ ಕೈಯಲ್ಲಿ ಹಣ ಖಾಲಿಯಾದರೆ ಅವರನ್ನು ಮನೆಯಲ್ಲಿ ಇರಿಸುವುದಕ್ಕೆ ಸಾಧ್ಯವಿಲ್ಲ. ಅದು ಪೋಲಿಸರ ಕೈಯಲ್ಲೂ ಆಗದೇ ಇರಬಹುದು. ಲಾಕ್‌ಡೌನ್ ವಿಫಲವಾಗುತ್ತದೆ. ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ಇದನ್ನು ಜನರ ಜೀವನ ಹಾಗೂ ಆರೋಗ್ಯದ ರಕ್ಷಣೆಯ ನಡುವಿನ ಆಯ್ಕೆಯ ಪ್ರಶ್ನೆಯಾಗಿ ನೋಡುವುದಕ್ಕೆ ಸಾಧ್ಯವಿಲ್ಲ. ಲಾಕ್‌ಡೌನ್ ಬೇಕು. ಅದು ಯಶಸ್ವಿ ಆಗಬೇಕಾದರೆ ಜನರಿಗೆ ಬೇಕಾದ್ದನ್ನು ಅವರಿಗೆ ಒದಗಿಸಿಬೇಕು. ಆದಕ್ಕೆ ದಾರಿಯನ್ನು ಕಂಡುಕೊಳ್ಳಬೇಕು. ಜನರಿಗೆ ಹಣ ಕೊಡದೇ ಹೋದರೆ ಅದರ ಪರಿಣಾಮ ಆರ್ಥಿಕತೆಯ ಮೇಲೂ ಆಗುತ್ತದೆ. ಜನರಿಗೆ ಆದಾಯ ಇಲ್ಲದೇ ಇರುವುದರಿಂದ ಅವರಿಗೆ ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ಬೇಡಿಕೆ ಕಮ್ಮಿಯಾಗುತ್ತದೆ. ಹಾಗಾಗಿ ಮಾರಾಟವೂ ಕಮ್ಮಿಯಾಗುತ್ತದೆ. ಉತ್ಪಾದನೆಯೂ ಕುಸಿಯುತ್ತದೆ. ಜನರು ಕೆಲಸ ಕಳೆದುಕೊಳ್ಳುತ್ತಾರೆ. ಆರ್ಥಿಕತೆಗೆ ಮತ್ತೆ ಚೇತರಿಸಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ.

ಗೋದಾಮಿನಲ್ಲಿರುವ 60 ಮಿಲಿಯನ್ ಟನ್ ಆಹಾರ ಸಾಮಗ್ರಿಗಳನ್ನು ಹಂಚುವುದನ್ನು ಕುರಿತು

ಅಭಿಜಿತ್:



ಭಾರತದಲ್ಲಿ ಸಾರ್ವಜನಿಕ ಪಡಿತರ ಪದ್ಧತಿ ಕಳೆದ ಹತ್ತು ವರ್ಷಗಳಲ್ಲಿ ಸಾಕಷ್ಟು ಸುಧಾರಿಸಿದೆ. 7ರಿಂದ 14 ಕೆಜಿಯಷ್ಟು ಪಡಿತರವನ್ನು ಜನರಿಗೆ ಹಂಚಿದರೆ ಯಾವ ಪ್ರಮಾದವೂ ಆಗುವುದಿಲ್ಲ. ನಿಜವಾದ ಸಮಸ್ಯೆ ಅಂದರೆ ಎಷ್ಟೋ ಜನ ಪಡಿತರ ವ್ಯವಸ್ಥೆಯಲ್ಲಿ ಬರುವುದಿಲ್ಲ. ಈಗ ವಲಸೆಗಾರರಿಗೂ ಅದರ ಅನುಕೂಲ ಪಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಹಣವನ್ನು ನೇರವಾಗಿ ವರ್ಗಾಯಿಸಬೇಕು. ಜನ್‌ಯೋಜನೆ ಇರುವುದೇ ಇದಕ್ಕೆ. ಜನ ವಾರಕ್ಕೆ 400 ಕಜಿ ಅಕ್ಕಿ ತಿನ್ನುವುದಿಲ್ಲ. ಪಡಿತರದ ಮೂಲಕ ಹಂಚುವುದಕ್ಕೆ ಮಿತಿ ಇರುತ್ತದೆ. ನಾವು ಬೇರೆ ವಿಧದಲ್ಲಿ ಮರುಹಂಚಿಕೆಯ ಬಗ್ಗೆ ಯೋಚಿಸಬೇಕು. ಗೋದಾಮಿನಲ್ಲಿರುವ ಆಹಾರವನ್ನು ವಿತರಿಸುವುದು ಒಳ್ಳೆಯ ಯೋಜನೆ. ಅದನ್ನು ಸಾಗಿಸುವುದಕ್ಕೆ ಒಂದಿಷ್ಟು ಎಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಖಾಯಿಲೆ ಹರಡದಂತೆ ಎಚ್ಚರಿಕೆ ವಹಿಸಬೇಕು. ಈ ಸಮಯದಲ್ಲಿ ನರೇಗಾ ಬಗ್ಗೆ ಮಾತನಾಡುವುದು ಕಷ್ಟವಾಗಬಹುದು. ಈಗ ಮನೆಯ ಆಚೆ ಹೋಗುವುದಕ್ಕೆ ಆಗದ ಸ್ಥಿತಿಯಲ್ಲಿರುವಾಗ ನರೇಗಾ ಬಗ್ಗೆ ಮಾತನಾಡುವುದು ವಿಚಿತ್ರವಾಗಿ ತೋರುತ್ತದೆ. ಸಧ್ಯಕ್ಕೆ ಲಭ್ಯವಿರುವ ದಾರಿಗಳೆಂದರೆ ಪಡಿತರ ಪದ್ಧತಿ ಮತ್ತು ನೇರವಾಗಿ ಹಣವನ್ನು ವರ್ಗಾಯಿಸುವುದು ಎರಡೇ. ಯಾರು ರೈತ, ಯಾರು ಅಲ್ಲ, ಅವನ ಹತ್ತಿರ 2 ಎಕರೆ ಭೂಮಿ ಇದೆಯಾ ಅಥವಾ 1.5 ಎಕರೆ ಇದೆಯಾ ಇವುಗಳ ಬಗ್ಗೆ ತಲೆಕೆಡಿಸಿಕೊಳ್ಳಬಾರದು. ಕೆಲವು ಶ್ರೀಮಂತರಿಗೆ ಸಿಕ್ಕಿಬಿಟ್ಟರೆ ಅಂತ ಯೋಚಿಸಬಾರದು. ಸಿಗಲಿ ಬಿಡಿ. ನಾವು ಈ ಸಮಯದಲ್ಲಿ ಜಾಣರಾಗುವುದು ಮುಖ್ಯವಲ್ಲ, ಶೀಘ್ರವಾಗಿ ಮಾಡುವುದು ಮುಖ್ಯ.

ಡಫ್ಲೋ:

ಈ ಸಮಯದಲ್ಲಿ ಇಂತಹ ನಿರ್ದಿಷ್ಟ ಗುಂಪಿನವರಿಗೆ ಕೊಡುತ್ತೇವೆ ಅಂತ ನಿರ್ಧರಿಸುವುದಾಗಲಿ, ಹಲವು ಷರತ್ತುಗಳನ್ನು ಹಾಕುವುದಾಗಲಿ ಸರಿ ಇಲ್ಲ. ಹಾಗೆ ಮಾಡಿದರೆ ನಿಜವಾಗಿ ಅವಶ್ಯಕತೆ ಇದ್ದವರಿಗೆ ಸಿಗುವುದಿಲ್ಲ. ಜನರಿಗೆ ಮನೆಯಿಂದ ಆಚೆ ಹೋಗುವುದಕ್ಕೂ ಅವಕಾಶವಿಲ್ಲದೇ ಇದ್ದಾಗ ಇಂತಿಂತಹ ಸೌಲಭ್ಯಕ್ಕೆ ಇಂತಿಂತಹ ಅರ್ಹತೆ ಬೇಕು ಅಂತ ನಿರೀಕ್ಷಿಸುವುದೇ ತಪ್ಪು. ಭಾರತದಲ್ಲಿ ಬಹು ಜನರಿಗೆ ಜನರಿಗೆ ಹಣವನ್ನು ವರ್ಗಾಯಿಸುವುದಕ್ಕೆ ವ್ಯವಸ್ಥೆ ಇದೆ. ಇಂತಹ ವ್ಯವಸ್ಥೆ ಹಲವು ವರ್ಷಗಳಿಂದ ರೂಪಪಡೆದುಕೊಂಡು ಬಂದಿದೆ. ಕೆಲವರು ಇದರಲ್ಲಿ ಬಿಟ್ಟು ಹೋಗುತ್ತಾರೆ. ಅಂತಹವರಿಗೆ ನೇರವಾಗಿ ತಲುಪಿಸಬೇಕು.



ಅಭಿಜಿತ್:

ಇನ್ನೊಂದು ಸಮಸ್ಯೆ ಇದೆ. ಈಗ ರಾಬಿ ಬೆಳೆಯನ್ನು ಕಟಾವು ಮಾಡಬೇಕು. ಅದಕ್ಕೆ ರೈತರು ಎಲ್ಲಿ ಸಿಗುತ್ತಾರೆ? ಈಗ ರಾಬಿ ಬೆಳೆಯನ್ನು ಕಳೆದುಕೊಂಡುಬಿಟ್ಟರೆ ಮತ್ತೊಂದು ದುರಂತವನ್ನು ಎಳೆದುಕೊಂಡ ಹಾಗೆ ಆಗುತ್ತದೆ. ಇದು ಕೇವಲ ಕೊಳ್ಳುವ ವಿಷಯವಲ್ಲ. ಕಟಾವು ಕೂಡ ಆಗಬೇಕು. ಸರ್ಕಾರ ಈ ನಿಟ್ಟಿನಲ್ಲಿ ಒಂದು ವ್ಯವಸ್ಥೆ ಮಾಡುವುದಕ್ಕೆ ಯೋಚಿಸಬೇಕು.

ಮುಂದಿನ ದಿನಗಳಿಗೆ ಮಾಡಿಕೊಳ್ಳಬೇಕಾದ ತಯಾರಿಯನ್ನು ಕುರಿತು

ಕೌಶಿಕ್ ಬಸು:

ದುರ್ಬಲರಿಗೆ ಹಣವನ್ನು ವರ್ಗಾಯಿಸುವುದು ಮುಖ್ಯ. ಆದರೆ ಅದು ಸಾಲುವುದಿಲ್ಲ. ಇದನ್ನು ನಮಗೆ ಬೆಂಗಾಲದ ಕ್ಷಾಮ ತೋರಿಸಿದೆ. ನೀವು ಜನರಿಗೆ ಹಣ ಕೊಡುತ್ತೀರಿ. ಆದರೆ ಆಹಾರ ಪದಾರ್ಥಗಳು ಸಿಗದೇ ಹೋದರೆ ಅವರಿಗೆ ಕೊಳ್ಳುವುದಕ್ಕೆ ಆಗುವುದಿಲ್ಲ. ಕೊರತೆಯಿದ್ದಾಗ ಅದರ ಬೆಲೆ ತುಂಬಾ ಏರುತ್ತದೆ. ಅವರಿಗೆ ಕೊಳ್ಳುವುದಕ್ಕೆ ಆಗುವುದಿಲ್ಲ. ಆಗ ನೀವು ನೇರವಾಗಿ ಆಹಾರವನ್ನು ಒದಗಿಸಬೇಕಾಗುತ್ತದೆ. ನಾನು ಸಾಮಾನ್ಯವಾಗಿ ಹಣ ನೀಡಿ ಅಂತ ಹೇಳುವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ಗುಂಪಿಗೆ ಸೇರಿದವನು. ಆದರೆ ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ನೆರವನ್ನು ನೇರವಾಗಿ ನೀಡಬೇಕಾಗುತ್ತದೆ. ಭಾರತದಲ್ಲಿ ಖಂಡಿತಾ ಅದನ್ನು ಕನಿಷ್ಠಮಟ್ಟಕ್ಕಾದರೂ ಮಾಡಬಹುದು.

ಎರಡನೆಯದಾಗಿ ವಾಹನ ಸಂಚಾರ ನಿಲ್ಲಿಸಿರುವುದು ಪ್ರಾರಂಭದಲ್ಲಿ ಒಳ್ಳೆಯದು. ಆದರೆ ಇದು ಮುಂದುವರಿಯುವುದಕ್ಕೆ ಸಾಧ್ಯ ಇಲ್ಲ. ಸಂಚಾರ ಪ್ರಾರಂಭವಾಗಬೇಕು. ಕನಿಷ್ಠ ಜನ ರೈಲು ಹಾಗೂ ವಿಮಾನದಲ್ಲಿ ಸಂಚಾರ ಮಾಡಬೇಕಾಗುತ್ತದೆ. ವಿಮಾನದ ಒಡಾಟಕ್ಕೆ ಅವಕಾಶ ಮಾಡಿಕೊಡಬೇಕು. ಆದರೆ ಒಟ್ಟು ಸಾಮರ್ಥ್ಯದ ಕಾಲು ಭಾಗಕ್ಕಿಂತ ಹೆಚ್ಚು ಜನ ಇರಬಾರದು ಅಂತ ಷರತ್ತು ಹಾಕಿ. ಇಂತಹ ಸರಳ ನಿಯಮಗಳಿಂದ ಸೋಂಕಿನ ಪ್ರಮಾಣವನ್ನು ಕಡಿಮೆ ಮಾಡಬಹುದು. ಜೊತೆಗೆ ಆರ್ಥಿಕತೆಯೂ ಸಂಪೂರ್ಣ ಸ್ಥಗಿತವಾಗುವುದಿಲ್ಲ. ಜನರ ಓಡಾಟ ಪ್ರಾರಂಭವಾಗುತ್ತದೆ. ಸರಕುಗಳ ಸಂಚಾರ ಪ್ರಾರಂಭವಾಗುತ್ತದೆ. ಸಣ್ಣ ಉದ್ದಿಮೆಗಳು ಪ್ರಾರಂಭವಾಗುತ್ತದೆ. ಹಾಗೆಯೇ ರೈಲು ಸಂಚಾರಕ್ಕೂ ಅವಕಾಶ ಮಾಡಿಕೊಡಬೇಕು. ಇಲ್ಲದೇ ಹೋದರೆ ಪೂರೈಕೆಯ ಕೊಂಡಿ ಮುರಿದು ಹೋಗುತ್ತದೆ. ಕೊರತೆ ಪ್ರಾರಂಭವಾಗುತ್ತದೆ.

ಮೂರನೆಯದಾಗಿ ನಿರುದ್ಯೋಗದ ವಿಷಯ, ಅಮೇರಿಕೆಯಲ್ಲಿ ನಿರುದ್ಯೋಗ ಶೇಕಡ 32ರಷ್ಟು ಜಾಸ್ತಿಯಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇದನ್ನು ನಿರ್ವಹಿಸುವ ದಾರಿಯನ್ನು ಕಂಡುಕೊಳ್ಳಬೇಕು. ಡೆನ್ಮಾರ್ಕ ಮತ್ತು ಬ್ರಿಟನ್ನಿನಲ್ಲಿ ಒಳ್ಳೆಯ ಉದಾಹರಣೆ ಸಿಗುತ್ತದೆ. ಬ್ರಿಟನ್ನಿನಲ್ಲಿ ಭಾರತದವರೇ ಆದ ರಿಷಿ ಸುನಾಲ್ ವಿತ್ತ ಮಂತ್ರಿಗಳು. ಅವರು ಕೈಗಾರಿಕೆಗಳಿಗೆ ನೀವು ಕೆಲಸಗಾರರನ್ನು ಕೆಲಸದಿಂದ ತೆಗೆಯಬೇಡಿ, ನಾವು ಅವರ ಸಂಬಳದ ಒಂದು ಭಾಗವನ್ನು ಕೊಡುತ್ತೇವೆ ಎಂದಿದ್ದಾರೆ. ನಿಜ ವಿತ್ತೀಯ ಕೊರತೆ ಹೆಚ್ಚಾಗುತ್ತದೆ. ಆದರೆ ಉದ್ಯೋಗದ ಸ್ಥಿತಿ ಕೆಡುವುದಿಲ್ಲ. ನಾವು ಈ ನಿಟ್ಟಿನಲ್ಲಿ ತಕ್ಷಣ ಕೆಲಸ ಪ್ರಾರಂಭಿಸಬೇಕು.

ಬಡವರನ್ನು ಗಣನೆಗೆ ತೆಗೆದುಕೊಳ್ಳದ ಲಾಕ್‌ಡೌನ್

ಜಾನ್ ಡ್ರೇಜ್
ಮೂಲ ದಿ ಹಿಂದು,

"ಈ ವೈರಾಣುವನ್ನು ತಡೆಯಲು ಬೇರೆ ದಾರಿಯೇ ಇಲ್ಲವೆಂದರೆ ನಾನು ಹಸಿದುಕೊಂಡೇ ಇರುವುದಕ್ಕೆ ಸಿದ್ಧಳಿದ್ದೇನೆ. ಆದರೆ ಇದನ್ನು ನನ್ನ ಮಕ್ಕಳಿಗೆ ಹೇಗೆ ತಿಳಿಸಲಿ?" ಇದು ನೇಮಿ ದೇವಿಯ ಮನಸ್ಸು ಕರಗುವ ಮಾತುಗಳು. ಆಕೆ ಜಾರ್ಖಂಡಿನ ಲಟೆಹರ್ ಜಿಲ್ಲೆಯ ದುಂಬಿ ಗ್ರಾಮದ ನಿವಾಸಿ. ಅವಳ ಗಂಡ ಮತ್ತು ಮಗ ಇಬ್ಬರೂ ವಲಸೆ ಕಾರ್ಮಿಕರು. ಕೆಲಸಕ್ಕೆ ಎಂದು ದೂರ ಹೋದವರು ಬರಲಾರದೆ ಸಿಕ್ಕಿಬಿದ್ದಿದ್ದಾರೆ. ಒಂದಾದ ಮೇಲೆ ಒಂದರಂತೆ ಪ್ರತಿ ಹಳ್ಳಿಯಲ್ಲಿ ಹೆಂಗಸರು ಇಂತಹದ್ದೇ ನೋವನ್ನು ತೋಡಿಕೊಳ್ಳುತ್ತಿದ್ದರು. ಇದೆಲ್ಲಾ ಪ್ರಧಾನಮಂತ್ರಿಯವರು 21 ದಿನಗಳ ಲಾಕ್‌ಡೌನ್ ಘೋಷಿಸುವುದಕ್ಕೂ ಮೊದಲಿನ ಘಟನೆಗಳು.

ಕೊರೊನ ವೈರಾಣುವಿನ ಬಿಕ್ಕಟ್ಟಿನ ಅಗಾಧತೆ ಕ್ರಮೇಣ ಭಾರತವನ್ನು ಅವರಿಸಿಕೊಳ್ಳುತ್ತಿದೆ. ನನಗೆ ನಿಮಗೆ ಇದರ ಬಿಸಿ ತಟ್ಟಲು ಇನ್ನು ಸ್ವಲ್ಪ ದಿನ ಬೇಕಾಗಬಹುದು. ಆದರೆ ಅನೌಪಚಾರಿಕ ಕ್ಷೇತ್ರದ ಕಾರ್ಮಿಕರನ್ನು ಹಾಗೂ ಅವರ ಕುಟುಂಬದವರನ್ನು ಈಗಾಗಲೇ ಇದು ಪೂರ್ಣಪ್ರಮಾಣದಲ್ಲಿ ಅಪ್ಪಳಿಸಿದೆ. ಕೆಲಸ ಇಲ್ಲ, ಸಂಪನ್ಮೂಲಗಳೆಲ್ಲಾ ಬರಿದಾಗುತ್ತಿದೆ. ಸೌಲಭ್ಯ ಇರುವವರು ಹೇರಳವಾಗಿ ಅವಶ್ಯಕ ವಸ್ತುಗಳನ್ನು ಪೇರಿಸಿಕೊಂಡು ಆಹಾರದ ಬೆಲೆ ಗಗನಕ್ಕೆ ಹೋದಾಗ ಅವರ ಸ್ಥಿತಿ ಇನ್ನಷ್ಟು ಬಿಗಡಾಯಸುತ್ತದೆ. 21 ದಿನಗಳ ಲಾಕ್‌ಡೌನ್ ವಿಧಿಸುವ ಸರ್ಕಾರದ ನಿರ್ಧಾರದಿಂದ ಮುಂದೆ ಕೊರೋನ ಉಪಟಳ ಶಮನವಾಗಬಹುದು. ಆದರೆ ಲಾಕ್‌ಡೌನಿನಿಂದ ಕಂಗಾಲಾಗಿರುವ ಬಡಜನತೆಗೆ ನೆರವು ತುರ್ತಾಗಿ ಬೇಕಾಗಿದೆ. ಹಣಕಾಸಿನ ಬೆಂಬಲವೂ ಸೇರಿದಂತೆ ಎಲ್ಲಾ ರೀತಿಯ ನೆರವು ಅವರಿಗೆ ಅನಿವಾರ್ಯ. ಈಗಾಗಲೇ ಅವರಲ್ಲಿ ಹೆಚ್ಚಿನವರಿಗೆ ಅಲ್ಪಸ್ವಲ್ಪ ಹಣಕಾಸಿನ ನೆರವು, ಸಾರ್ವಜನಿಕ ಪಡಿತರ ಪದ್ಧತಿಯಡಿ ಆಹಾರದ ರೇಷನ್ ಸಿಕ್ಕಿದೆ. ರಾಷ್ಟ್ರೀಯ ಆಹಾರ ರಕ್ಷಣಾ ಕಾಯ್ದೆಯಡಿ ಭಾರತದ ಮೂರನೇ ಎರಡು ಭಾಗ (ಗ್ರಾಮೀಣ ಪ್ರದೇಶಗಳಲ್ಲಿ ಶೇಕಡ 75ರಷ್ಟು ಹಾಗೂ ಪಟ್ಟಣಗಳಲ್ಲಿ ಶೇಕಡ 50ರಷ್ಟು ಕುಟುಂಬಗಳು) ಕುಟುಂಬಗಳು ಬರುತ್ತವೆ. ಅತ್ಯಂತ ಬಡ ರಾಜ್ಯಗಳು ಸೇರಿದಂತೆ ಹೆಚ್ಚಿನ ರಾಜ್ಯಗಳಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಇದೆ. ಅಷ್ಟು ಪರಿಪೂರ್ಣವಾಗಿಲ್ಲದೇ ಇರಬಹುದು. ಆದರೆ ಹೆಚ್ಚಿನ ಜನರನ್ನು ಹಸಿವಿನಿಂದ ರಕ್ಷಿಸುವಷ್ಟು ಕೆಲಸಮಾಡುತ್ತಿದೆ.

ಹೆಚ್ಚುವರಿ ಆಹಾರ ದಾಸ್ತಾನನ್ನು ಬಳಸಿ

ಈ ಸನ್ನಿವೇಶದಲ್ಲಿ ಪಡಿತರ ಪದ್ಧತಿ ತುಂಬಾ ಮುಖ್ಯವಾದ ಆಸ್ತಿ. ಆ ವ್ಯವಸ್ಥೆ ನಡೆದುಕೊಂಡು ಹೋಗಬೇಕು. ಅದನ್ನು ಇನ್ನಷ್ಟು ವಿಸ್ತರಿಸುವುದು ಕೂಡ ಅವಶ್ಯಕ. ಅದು ಇನ್ನೂ ಹೆಚ್ಚು ಜನರಿಗೆ ತಲುಪಬೇಕು. ಅದೃಷ್ಟವಶಾತ್ ಭಾರತದಲ್ಲಿ ಆಹಾರದ ದಾಸ್ತಾನು ಬೇಕಾದ್ದಕ್ಕಿಂತ ಸಾಕಷ್ಟು ಹೆಚ್ಚಿಗೆ ಇದೆ. ಕಳೆದ 20ವರ್ಷಗಳಿಂದ ನಿಯಮದ ಪ್ರಕಾರ ಬೇಕಾಗಿರುವುದಕ್ಕಿಂತ ದುಪ್ಪಟ್ಟು ಸ್ಟಾಕ್ ಇಟ್ಟುಕೊಂಡಿದ್ದೇವೆ. ಅದನ್ನು ಬಳಸಲು ಇದು ಸಕಾಲ. ತುರ್ತು ಕ್ರಮವಾಗಿ ಪಡಿತರವನ್ನು ಮುಂದಿನ ಮೂರು ಅಥವಾ ಬೇಕೆಂದರೆ ಆರು ತಿಂಗಳವರೆಗೆ ಎರಡು ಪಟ್ಟು ಹೆಚ್ಚಿಸುವುದಕ್ಕೆ ಸರ್ಕಾರಕ್ಕೆ ತೊಂದರೆಯೂ ಇಲ್ಲ. ಜನರಿಗೆ ಆಗಿರುವ ನಷ್ಟವನ್ನೆಲ್ಲಾ ಅದು ತುಂಬಿಸಿಕೊಡುವುದಿಲ್ಲ. ಆದರೆ ಮನೆಯಲ್ಲಿ ಕನಿಷ್ಠ ಪಕ್ಷ ಆಹಾರವಾದರೂ ಇರುತ್ತದೆ.

ಆಹಾರದ ವಿತರಣೆಯನ್ನು ಪರಿಣಾಮಕಾರಿಯಾಗಿ ಮಾಡಲು ಕೆಲವು ಧೈರ್ಯವಾದ ಕ್ರಮ ತೆಗೆದುಕೊಳ್ಳಬೇಕು. ಉದಾಹರಣೆಗೆ ಬೆರಳು ಸ್ಕಾನ್ ಮಾಡುವ ಕ್ರಮವನ್ನು ಸಧ್ಯಕ್ಕೆ ಕೈಬಿಡಬಹುದು. ಆಗ ಸೋಂಕಿನ ಅಪಾಯವೂ ಇರುವುದಿಲ್ಲ. ಕೆಲವರನ್ನು ಸೌಲಭ್ಯದಿಂದ ವಂಚಿತರನ್ನಾಗಿಸುವ ಸಾಧ್ಯತೆಯೂ ತಪ್ಪುತ್ತದೆ. ಜನ ಗುಂಪುಗೂಡುವುದನ್ನು ತಪ್ಪಿಸುವ ದೃಷ್ಟಿಯಿಂದ ವಿತರಣೆಯನ್ನು ಹಲವು ಹಂತದಲ್ಲಿ ಮಾಡಬೇಕು. ಮೋಸವನ್ನು ತಪ್ಪಿಸುವ ದೃಷ್ಟಿಯಿಂದ ಕಟ್ಟುನಿಟ್ಟಿನ ಪರಿಶೀಲನೆ ಅವಶ್ಯಕ. ತಪ್ಪಿತಸ್ಥರನ್ನು ತಕ್ಷಣ ಶಿಕ್ಷಿಸಬೇಕು. ಇವೆಲ್ಲವೂ ಸಾಧ್ಯ. ಮುಖ್ಯವಾಗಿ ಆಗಬೇಕಾದದ್ದು ವಿಳಂಬ ಮಾಡದೆ ತುರ್ತಾಗಿ ದಾಸ್ತಾನನ್ನು ಬಿಡುಗಡೆ ಮಾಡುವುದು.

ಇಷ್ಟಾಗಿಯೂ ಪಡಿತರ ಪದ್ಧತಿಯ ವ್ಯವಸ್ಥೆ ಸಾಲುವುದಿಲ್ಲ. ಹಲವಾರು ಬಡಜನರು ಅದರ ವ್ಯಾಪ್ತಿಯಲ್ಲಿ ಬರುವುದಿಲ್ಲ. ದೊಡ್ಡ ಪ್ರಮಾಣದಲ್ಲಿ ಹಣವನ್ನು ನೇರವಾಗಿ ವರ್ಗಾಯಿಸಬೇಕು. ಪಿಂಚಣಿಯ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಬೇಕು. (2006ರಿಂದ ಅದು ತಿಂಗಳಿಗೆ ಕೇವಲ 200 ರೂಪಾಯಿ ಇದೆ). ಒಂದೇ ಸಮಸ್ಯೆಯೆಂದರೆ ಹಣವನ್ನು ಹೇಗೆ ವಿತರಿಸುವುದು? ಹೆಚ್ಚಿನ ಪಿಂಚಣಿದಾರರು ವಾಣಿಜ್ಯ ಪ್ರತಿನಿಧಿಗಳ ಮೂಲಕ (BC) ಗಳ ಮೂಲಕ ಪಿಂಚಣಿ ಪಡೆದುಕೊಳ್ಳುತ್ತಾರೆ. ಈ ಪ್ರತಿನಿಧಿಗಳು ಒಂದು ರೀತಿಯಲ್ಲಿ ರೋಬೋಟ್ ಮಾದರಿಯ ಮಾನವ ಎಟಿಎಂ ಇದ್ದ ಹಾಗೆ. ಬ್ಯಾಂಕುಗಳ ಬದಲು ಕೆಲಸ ಮಾಡುತ್ತಾರೆ. ಒಂದು ಸಮಸ್ಯೆಯೆಂದರೆ ಹೆಚ್ಚಿನ 'ಬಿಸಿ'ಗಳು ಸ್ಮಾರ್ಟ ಕಾರ್ಡ್ ಬದಲು ಬಯೋಮೆಟ್ರಿಕ್ ಅಥೆಂಟಿಕೇಷನ್ ಬಳಸುತ್ತಾರೆ. ಅದನ್ನು ವ್ಯಾಪಕವಾಗಿ ಬಳಸುವುದರಿಂದ ಕೊರೋನ ವೈರಾಣು ಹರಡುವುದು



ತೀವ್ರವಾಗಬಹುದು.

ಪಾವತಿಯ ಕ್ರಮ

ಬಯೋಮೆಟ್ರಿಕ್ ಕ್ರಮವನ್ನು ಸಧ್ಯಕ್ಕೆ ಕೈಬಿಡುವುದು ತಂಬಾ ಒಳ್ಳೆಯದು. ಹೆಚ್ಚಿನ ವಾಣಿಜ್ಯ ಪ್ರತಿನಿಧಿಗಳು ಸೋಂಕಿನ ಹೆದರಿಕೆಯಿಂದ ಬಾರದೇ ಹೋಗಬಹುದು. (ಅವರಿಗೆ ಕೊಡುತ್ತಿರುವ ಹಣವೂ ತುಂಬಾ ಕಡಿಮೆ.) ಬ್ಯಾಂಕುಗಳಲ್ಲಿ ಜನ ಗುಂಪುಗೂಡದಂತೆ ಕ್ರಮ ತೆಗೆದುಕೊಳ್ಳಬೇಕು. ಹೊಸ ಪಾವತಿ ವ್ಯವಸ್ಥೆ ಕೂಡ ಸಾಧ್ಯ. ತಿಂಗಳಲ್ಲಿ ಒಂದು ನಿರ್ದಿಷ್ಟ ದಿನ ಪಂಚಾಯತ್ ಭವನದಲ್ಲಿ ಸಾಮಾಜಿಕ ರಕ್ಷಣಾ ಪಿಂಚಣಿಯನ್ನು ನಗದಿನಲ್ಲಿ ವಿತರಿಸಬಹುದು. ಅದರಿಂದ ಎಲ್ಲರೂ ಬ್ಯಾಂಕಿಗೆ ಹೋಗುವುದು ತಪ್ಪುತ್ತದೆ. ಇದನ್ನು ಒಡಿಸ್ಸಾದಲ್ಲಿ ಬಹಳ ವರ್ಷಗಳಿಂದ ಯಶಸ್ವಿಯಾಗಿ ಮಾಡಿಕೊಂಡು ಬಂದಿದ್ದಾರೆ. ಅಂಗನವಾಡಿ ಅಥವಾ ಸ್ವ ಸಹಾಯ ಗುಂಪುಗಳ ಮೂಲಕ ಕೂಡ ಹಣವನ್ನು ಹಂಚಬಹುದು. ಒಂದಿಷ್ಟು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬೇಕು.

ಪಡಿತರ ವ್ಯವಸ್ಥೆಯನ್ನು ಹಾಗೂ ಸಾಮಾಜಿಕ ಭದ್ರತಾ ಪಿಂಚಣಿಯನ್ನು ಪರಿಷ್ಕರಿಸುವುದು ತುಂಬಾ ಅನುಕೂಲ. ಆದರಲ್ಲಿ ಗಣನೀಯ ಸಂಖ್ಯೆಯ ಬಡಕುಟುಂಬಗಳು ಬಿಟ್ಟು ಹೋಗಿವೆ. ಹಾಗೆಯೇ ಆಹಾರ ಪಡಿತರ ಜನರ ಉಪವಾಸವನ್ನು ತಪ್ಪಿಸಬಹುದು. ಆದರೆ ಜನರಿಗೆ ಇನ್ನು ಹಲವು ಮೂಲಭೂತ ಅವಶ್ಯಕತೆಗಳು ಇರುತ್ತವೆ. ನಿರುದ್ಯೋಗದ ಹೊಡೆತದಿಂದ ಚೇತರಿಸಿಕೊಳ್ಳಲು ಹಣ ಬೇಕಾಗುತ್ತದೆ.

ಪಿಂಚಣಿಯ ಆಚೆಗೆ ನಗದನ್ನು ವರ್ಗಾಯಿಸುವುದಕ್ಕೆ ಹಲವು ಮಾರ್ಗಗಳು ಇವೆ. ಉದಾಹರಣೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಉದ್ಯೋಗ ಕಾರ್ಡುದಾರರಿಗೆ ಅಥವಾ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ ನಿಧಿಯ ಫಲಾನುಭವಿಗಳಿಗೆ ಅಥವಾ ಪಿಡಿಎಸ್ ಕಾರ್ಡುದಾರರ ಖಾತೆಗೆ ಹಣವನ್ನು ನೇರವಾಗಿ ಪಾವತಿಸಬಹುದು. ಈ ಪಟ್ಟಿಯನ್ನು ಹೇಗೆ ಬಳಸಿಕೊಳ್ಳಬಹುದು ಅನ್ನುವುದು ಆಯಾ ಸಂದರ್ಭಕ್ಕೆ ಅನುಗುಣವಾಗಿರುತ್ತದೆ. ಇದನ್ನು ರಾಜ್ಯ ಮಟ್ಟದಲ್ಲಿ ನಿಭಾಯಿಸುವುದು ಹೆಚ್ಚು ಪರಿಣಾಮಕಾರಿಯಾದ ಮಾರ್ಗವಾಗಬಹುದು. ನನ್ನ ದೃಷ್ಟಿಯಲ್ಲಿ ನರೇಗಾ ಉದ್ಯೋಗ ಕಾರ್ಡ್ ಬಳಸಿಕೊಳ್ಳುವುದು ಪ್ರಾರಂಭಕ್ಕೆ ಒಳ್ಳೆಯ ಮಾರ್ಗವಾಗಬಹುದು. ಇನ್ನೂ ಹಲವು ಮೌಲಿಕ ಸಲಹೆಗಳು ಬಂದಿವೆ. ಉದಾಹರಣೆಗೆ ಮಧ್ಯಾಹ್ನದ ಊಟ, ಸಾಮುದಾಯಿಕ ಅಡುಗೆ ಮತ್ತು ವಲಸೆ ಕಾರ್ಮಿಕರಿಗಾಗಿ ರಿಲೀಫ್ ಕ್ಯಾಂಪುಗಳನ್ನು ಕುರಿತಂತೆ ಹಲವು ಉತ್ತಮ ಸಲಹೆಗಳು ಬಂದಿವೆ. ಮೊದಲ ಹಂತ ಅಂದರೆ ಪರಿಹಾರ ಕ್ರಮಗಳನ್ನು ಲಾಕ್ ಡೌನ್ ಯೋಜನೆಯ ಭಾಗವನ್ನಾಗಿ ಮಾಡುವುದು. ಅದನ್ನು ಮಾಡದೇ ಹೋದರೆ ಅನುಕೂಲಕ್ಕಿಂತ ತೊಂದರೆಯೇ ಹೆಚ್ಚಾಗುತ್ತದೆ. ಹೊಟ್ಟೆಗಿಲ್ಲದ ಹಾಗೂ ದುರ್ಬಲ ಜನರಿಗೆ ವೈರಾಣುವನ್ನು ಪರಿಣಾಮಕಾರಿಯಾಗಿ ಎದುರಿಸುವುದಕ್ಕೆ ಆಗುವುದಿಲ್ಲ. ಲಾಕ್‌ಡೌನ್ ಅನ್ನು ಸೃಜನಶೀಲವಾಗಿ ಮಾಡುವುದು ಅಂದರೆ ಜನರನ್ನು ಹೊರಾಟಕ್ಕೆ ಸಜ್ಜು ಮಾಡುವುದು. ಅವರನ್ನು ಕುರಿಗಳನ್ನಾಗಿ ಭಾವಿಸಬಾರದು.

ಅಂತಿಮವಾಗಿ ಕೇಂದ್ರ–ರಾಜ್ಯಗಳ ನಡುವಿನ ಸಹಕಾರ ತುಂಬಾ ಅವಶ್ಯಕ. ಹಲವು ರಾಜ್ಯ ಸರ್ಕಾರಗಳು ಈಗಾಗಲೇ ಮೌಲಿಕವಾದ ಸಾಮಾಜಿಕ ಭದ್ರತಾ ಕ್ರಮಗಳನ್ನು ಪ್ರಾರಂಭಿಸಿವೆ. ಆದರೆ ಅವು ಸಾಲುವುದಿಲ್ಲ. ಕೇಂದ್ರ ಸರ್ಕಾರ ಈ ಬಗ್ಗೆ ನಿಷ್ಕ್ರಿಯವಾಗಿದೆ. ಅದು ಅರ್ಥವಾಗುವುದಿಲ್ಲ. ಸೂಕ್ತ ಪರಿಹಾರ ಕಲ್ಪಿಸಬೇಕಾದರೆ ಕೇಂದ್ರ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಹಣವನ್ನು ಹೂಡಬೇಕಾಗುತ್ತದೆ. ಆದರೆ ರಾಜ್ಯ ಸರ್ಕಾರಗಳ ನಾಯಕತ್ವದಲ್ಲಿ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು. ಪ್ರತಿಯೊಂದು ರಾಜ್ಯದಲ್ಲೂ ಭಿನ್ನವಾದ ಪರಿಸ್ಥಿತಿಗಳಿವೆ, ಅವುಗಳದ್ದೇ ಆದ ಕ್ರಮಗಳು ಇರುತ್ತವೆ. ಕೇಂದ್ರ ಸರ್ಕಾರಗಳಿಗೆ ಇವನ್ನು ನಿಭಾಯಿಸುವುದಕ್ಕೆ ಕಷ್ಟ. ಕಾರ್ಯಕ್ರಮಗಳಿಗೆ ತಗಲುವ ಖರ್ಚನ್ನು ಕೊಟ್ಟರೆ ಅದು ಒಂದು ಒಳ್ಳೆಯ ಪ್ರಾರಂಭ.

Jean Drèze is Visiting Professor at the Department of Economics, Ranchi University.

ಲಾಕ್ ಡೌನ್‌ನ ಆರ್ಥಿಕ ಪರಿಣಾಮಗಳು

ಪ್ರೊ. ಎಂ. ಚಂದ್ರ ಪೂಜಾರಿ

ಕೊರೊನಾ ಹತೋಟಿಗೆ ಲಾಕ್‌ಡೌನ್ ಬಿಟ್ಟರೆ ಬೇರೆ ದಾರಿಯೇ ಇಲ್ಲ ಎಂದು ಸರಕಾರ 21 ದಿನಗಳ ರಾಷ್ಟ್ರವ್ಯಾಪಿ ಲಾಕ್‌ಡೌನ್ ಘೋಷಿಸಿದೆ. ಲಾಕ್‌ಡೌನ್ ಪರಿಣಾಮದ ಬಗ್ಗೆ ಮಾತಾಡುವ ಮುನ್ನ ಕೊರೊನಾ ಹತೋಟಿಗೆ ಲಾಕ್‌ಡೌನ್ ಬಿಟ್ಟರೆ ಬೇರೆ ದಾರಿಯೇ ಇಲ್ಲ ಎನ್ನುವ ಸರಕಾರದ ನಿರ್ಧಾರದ ಬಗ್ಗೆ ಆಲೋಚಿಸಬೇಕಾಗಿದೆ. ಈ ನಿರ್ಧಾರ ಚೀನಾವನ್ನು ನೋಡಿ ಬಂದ ತೀರ್ಮಾನ. ಚೀನಾ ಕೂಡ ನಮ್ಮ ಹಾಗೆ ದೊಡ್ಡ ದೇಶ. ನಮ್ಮಿಂದಲೂ ಹೆಚ್ಚು ಜನಸಂಖ್ಯೆ ಇರುವ ದೇಶ. ಜೊತೆಗೆ ಅವರು ನಮ್ಮ ನೆರೆಯ ದೇಶ. ಅಲ್ಲಿನ ಜನಜೀವನ ಮತ್ತು ನಮ್ಮ ಜೀನವದ ನಡುವೆ ಸಾಕಷ್ಟು ಸಾಮ್ಯತೆ ಇದೆ. ಅಲ್ಲಿ ಕೊರೊನಾ ವೈರಸ್ ಸಾಂಕ್ರಾಮಿಕಗೊಂಡ ವೂಹಾನ್ ಮಹಾನಗರ ಮತ್ತು ಅದು ಇರುವ ಹುಬೆ ಪ್ರಾಂತ್ಯವನ್ನು ಎರಡು ಹಂತಗಳಲ್ಲಿ ಸಂಪೂರ್ಣ ಲಾಕ್‌ಡೌನ್ ಮಾಡಿ ವೈರಸ್ ಹಾವಳಿಯನ್ನು ಹತೋಟಿಗೆ ಚೀನಾ ತಂದಿದೆ. ಚೀನಾದ ಈ ಮಾದರಿಯನ್ನು ಅನುಸರಿಸದ ಇಟಲಿ, ಬ್ರಿಟನ್, ಆಮೇರಿಕಾದಂತಹ ದೇಶಗಳು ದೊಡ್ಡ ಮಟ್ಟಿನ ಅನಾಹುತವನ್ನು ಎದರಿಸುತ್ತಿವೆ. ನಮ್ಮಲ್ಲಿ ಚೀನಾದಂತೆ ದೊಡ್ಡ ಸಂಖ್ಯೆಯಲ್ಲಿ ಜನರಿದ್ದಾರೆ. ಜೊತೆಗೆ ಚೀನಾದ ಸಿಟಿಗಳಂತೆ ನಮ್ಮ ಸಿಟಿಗಳಲ್ಲು ಕೂಡ ಜನದಟ್ಟಣೆ ಇದೆ. ಇವೆಲ್ಲ ಕಾರಣಗಳಿಂದ ಲಾಕ್‌ಡೌನ್ ಕೊರೊನಾ ವೈರಸ್ ಹತೋಟಿಗೆ ಉತ್ತಮ ಮಾರ್ಗವೆಂದು ಬಗೆಯಲಾಗಿದೆ.

ಆದರೆ ಚೀನಾ ಕೇವಲ ಲಾಕ್‌ಡೌನ್‌ನಿಂದ ಕೊರೊನಾ ವಿರುದ್ಧ ಯಶಸ್ಸು ಪಡೆದಿಲ್ಲ. ಲಾಕ್‌ಡೌನ್ ಜೊತೆಗೆ ಅಲ್ಲಿನ ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ಮಾಹಿತಿ ತಂತ್ರಜ್ಞಾನ ಮತ್ತು ಅವುಗಳ ಬಳಕೆ, ಸರಕಾರದ ಸ್ಪಂದನೆ ಇವೆಲ್ಲವೂ ಚೀನಾದ ಯಶಸ್ಸಿನ ಹಿಂದೆ ಕೆಲಸ ಮಾಡಿವೆ. ಚೀನಾದಲ್ಲಿ ಅತ್ಯುತ್ತಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಇದೆ. ಇದೇ ಕಾರಣದಿಂದ ಚೀನಾ ಕೆಲವೇ ಕೆಲವು ದಿನಗಳಲ್ಲಿ ಸಾವಿರಾರು ಬೆಡ್‌ಗಳ ಆಸ್ಪತ್ರೆಗಳನ್ನು ನಿರ್ಮಿಸುವುದರ ಜೊತೆಗೆ ದೊಡ್ಡ ಸಂಖ್ಯೆಯಲ್ಲಿ ವೈದ್ಯರನ್ನು, ನರ್ಸ್‌ಗಳನ್ನು, ಆರೋಗ್ಯ ಸಹಾಯಕರನ್ನು, ಆಸ್ಪತ್ರೆಗಳಲ್ಲಿ ಕೆಲಸ ಮಾಡುವವರಿಗೆ ರಕ್ಷಣ ಕವಚಗಳನ್ನು, ಔಷಧಿಯನ್ನು ಪೂರೈಕೆ ಮಾಡಿದೆ. ಅಲ್ಲಿನ ಮಾಹಿತಿ ತಂತ್ರಜ್ಞಾನ ಫೇಸ್ ರೀಡಿಂಗ್, ಸಿಸಿ ಟಿವಿಗಳ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಆರೋಗ್ಯ ಸವಲತ್ತುಗಳನ್ನು ತಲುಪಿಸಲು ಪರಿಣಾಮಕಾರಿಯಾಗಿ ಬಳಸಿಕೊಂಡಿದೆ. ಅಲ್ಲಿನ ಸರಕಾರ ವೈರಸ್ ಇರುವಿಕೆಯನ್ನು ಆರಂಭದಲ್ಲಿ ನಿರಾಕರಿಸಿದರೂ ನಂತರ ಸಮರೋಪಾದಿಯಲ್ಲಿ ಪರಿಹಾರ ಕಾರ್ಯಕ್ರಮ ಕೈಗೊಂಡಿದೆ. ಚೀನಾದ ಇಂತಹ ವ್ಯವಸ್ಥೆಯನ್ನು ಆಮೇರಿಕಾ, ಇಟಲಿ, ಸ್ಪೇಯಿನ್, ಫ್ರಾನ್ಸ್ ಮುಂತಾದ ಯುರೋಪಿಯನ್ ದೇಶಗಳ ಆರೋಗ್ಯದ ವ್ಯವಸ್ಥೆಗೆ ಹೋಲಿಸಿದರೆ ಲಾಕ್‌ಡೌನ್ ಒಂದೇ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆಮೇರಿಕಾ ಮತ್ತು ಯುರೋಪಿಯನ್ ದೇಶಗಳಲ್ಲಿ ಆರೋಗ್ಯ ವ್ಯವಸ್ಥೆ ಸಂಪೂರ್ಣ ಖಾಸಗಿ ಉದ್ದಿಮೆಗಳ ಹತೋಟಿಯಲ್ಲಿದೆ. ಅಲ್ಲಿನ ಜನರು ಹೆಲ್ತ್ ಇನ್ಸೂರೆನ್ಸ್ ಇದ್ದರೆ ಮಾತ್ರ ಬದುಕು ಉಳಿಯಲು ಸಾಧ್ಯ. ಕೋಟ್ಯಾಂತರ ಅಮೆ–ರಿಕನ್ನರಿಗೆ ಇಂತಹ ಇನ್ಸೂರೆನ್ಸ್ ಸಹ ಇಲ್ಲ. ಆಮೇರಿಕಾದಲ್ಲಿ ಒಬಾಮ ಅಧಿಕಾರದಲ್ಲಿ ಇದ್ದಾಗ ಜಾರಿಗೆ ತಂದ ಸೀಮಿತವಾದರೂ ಇನ್ಸೂರೆನ್ಸ್ ಕವರೇಜ್‌ನ್ನು ವಿಸ್ತರಿಸುವ 'ಒಬಾಮ ಕೇರ್' ಟ್ರಂಪ್ ಬಂದ ನಂತರ ಮೊಟಕುಗೊಂಡಿದೆ. ಇಟಲಿ, ಫ್ರಾನ್ಸ್, ಸ್ಪೆಯೀನ್ ದೇಶಗಳಲ್ಲೂ ಇದೇ ಸ್ಥಿತಿ. ಇವೇ ಕಾರಣದಿಂದ ಈ ದೇಶಗಳಲ್ಲಿ ಸೋಂಕು ತಗಲಿದ ಮತ್ತು ಮೃತಪಟ್ಟವರ ಸಂಖ್ಯೆ ಚೀನಾದ ಸಂಖ್ಯೆಯನ್ನು ಮೀರಿಸಿವೆ.

ಇವೆಲ್ಲದರ ಹಿನ್ನೆಲೆಯಲ್ಲಿ ನಮ್ಮ ದೇಶದ ಲಾಕ್‌ಡೌನ್ ಕ್ರಮವನ್ನು ನೋಡಿದರೆ ಪರಿಣಾಮವನ್ನು ಊಹಿಸಬಹುದು. ಪಾಶ್ಚಿಮಾತ್ಯ ದೇಶಗಳಂತೆ ನಮ್ಮ ಆರೋಗ್ಯ ವ್ಯವಸ್ಥೆ ಕೂಡ ಖಾಸಗಿ ಉದ್ದಿಮೆಗಳ ಹಿಡಿತದಲ್ಲಿದೆ. ಸರಕಾರ ಆರೋಗ್ಯ ಕ್ಷೇತ್ರದ ಮೇಲೆ ಅತ್ಯಂತ ಕನಿಷ್ಠ ವಿನಿಯೋಗಿಸುತ್ತಿದೆ. ಶೇ.70 ರಷ್ಟಿರುವ ಖಾಸಗಿ ಸವಲತ್ತುಗಳು ನಮ್ಮ ದೇಶದ ಶೇ.30ರಷ್ಟು ಅನುಕೂಲಸ್ಥರಿಗೆ ಸೇವೆ ನೀಡುತ್ತಿವೆ. ಅತ್ಯಂತ ಕನಿಷ್ಠ ಸವಲತ್ತು ಹೊಂದಿರುವ ಸರಕಾರಿ ವ್ಯವಸ್ಥೆಯನ್ನು ಬಡವರು ಅವಲಂಬಿಸಿದ್ದಾರೆ. ಇದರಿಂದಾಗಿ ಆ ವ್ಯವಸ್ಥೆಯಲ್ಲಿ ಕುಂದುಕೊರತೆ ಬಗ್ಗೆ ಬಡವರ ದೂರುಗಳನ್ನು ಸರಕಾರ ಗಂಭೀರವಾಗಿ ಪರಿಗಣಿಸುವುದಿಲ್ಲ.

ವೈದ್ಯರ, ಔಷಧಿಗಳ, ಪರಿಕರಗಳ ಮತ್ತು ಇತರ ಮೂಲಸೌಕರ್ಯಗಳ ಕೊರತೆ ಅನುಭವಿಸುತ್ತಿರುವ ಸರಕಾರಿ ಆರೋಗ್ಯ ವ್ಯವಸ್ಥೆಯು ಕೊರೊನಾದಂತಹ ಮಹಾಮಾರಿಯನ್ನು ಪರಿಹರಿಸುವುದು ದೂರದ ಮಾತು. ಇಂತಹ ಸಂದರ್ಭದಲ್ಲಿ ಕೊರೊನಾ ವೈರಸ್ ದೇಶವ್ಯಾಪಿ ಹಬ್ಬದಂತೆ ನೋಡಿಕೊಳ್ಳಲು ಲಾಕ್‌ಡೌನ್ ಸುಲಭದ ದಾರಿ. ಆದರೆ ಲಾಕ್ ಡೌನ್ ದೇಶದ ಜನರ ಮೇಲೆ, ಅದರಲ್ಲೂ ತಳಸ್ತರದ ಜನರ ಮೇಲೆ ಮಾಡುವ ಪರಿಣಾಮವನ್ನು ಊಹಿಸಲು ಅಸಾಧ್ಯ.

ವಲಸೆ ಕಾರ್ಮಿಕರ ಭೀಕರ ಸ್ಥಿತಿ

ಎಲ್ಲ ವ್ಯವಸ್ಥೆಯಲ್ಲೂ ತಳಸ್ತರದ ಜನರು ಉತ್ಪಾದನೆಯ ಮೂಲವೂ ಹೌದು, ಗ್ರಾಹಕರೂ ಹೌದು. ಕೊರೊನಾ ವೈರಸ್ ಮಾನವ

ಸಂಪನ್ಮೂಲದ ಮೇಲೆ ದಾಳಿ ಮಾಡುತ್ತಿದೆ. ಇದನ್ನು ತಡೆಯಲು ಸರಕಾರ ಲಾಕ್ ಡೌನ್ ಘೋಷಿಸಿದೆ. ಆದರೆ ಲಾಕ್ ಡೌನ್‌ನ್ನು ಘೋಷಿಸುವ ಮುನ್ನ ಆರು ಕೋಟಿಯಷ್ಟಿರುವ ಅಲೆಮಾರಿಗಳು, 40 ಕೋಟಿಗಿಂತಲೂ ಹೆಚ್ಚು ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರು, ಸಣ್ಣಪುಟ್ಟ ವ್ಯಾಪಾರಿ, ಸಣ್ಣ ಉದ್ಯಮಿಗಳ ಇರುವಿಕೆಯನ್ನು ಸರಕಾರ ಪರಿಗಣಿಸಿಯೇ ಇಲ್ಲ. ಎಲ್ಲ ಗ್ರಾಮೀಣ ಪ್ರದೇಶಗಳಿಂದಲೂ ನಗರ ಪ್ರದೇಶಗಳಿಗೆ ಹೊಟ್ಟೆಪಾಡಿಗಾಗಿ ವಲಸೆ ಹೋಗುವುದು ಸಾಮಾನ್ಯ. ಸಣ್ಣಪುಟ್ಟ ನಗರಗಳಿಗೆ ಸಣ್ಣ ಸಂಖ್ಯೆಯಲ್ಲಿ ವಲಸೆ ಹೋದರೆ ದೊಡ್ಡ ನಗರಗಳಿಗೆ ಬರುವ ವಲಸೆ ಕಾರ್ಮಿಕರ ಸಂಖ್ಯೆ ದೊಡ್ಡದಿದೆ. ಕರ್ನಾಟಕದ ಹಲವು ನಗರಗಳಲ್ಲಿ ಇಂದು ಸ್ಥಳೀಯ ಕೆಲಸಗಾರರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಉತ್ತರ ಪ್ರದೇಶ, ಬಿಹಾರ, ಒರಿಸ್ಸಾ ಹೀಗೆ ಉತ್ತರ ಭಾರತದ ಹಲವು ರಾಜ್ಯಗಳ ಕೆಲಸಗಾರರಿದ್ದಾರೆ. ಇದು ಕರ್ನಾಟಕದ ಕತೆ ಮಾತ್ರವಲ್ಲ, ದಕ್ಷಿಣದ ಎಲ್ಲ ರಾಜ್ಯಗಳ ಕತೆಯೂ ಹೆಚ್ಚು ಕಡಿಮೆ ಇದೆ. ಉತ್ತರ ಭಾರತದ ಅಭಿವೃದ್ಧಿ ಹೊಂದಿದ ರಾಜ್ಯಗಳಲ್ಲೂ ಇದೇ ಸ್ಥಿತಿ ಇದೆ.

ಲಾಕ್ ಡೌನ್ ಘೋಷಿಸುವ ಮುನ್ನ ವಲಸೆ ಕಾರ್ಮಿಕರಿಗೆ ಎರಡು ಆಯ್ಕೆಗಳನ್ನು ನೀಡಬಹುದಿತ್ತು. ಒಂದು, ಅವರು ವಲಸೆಗೆ ಬಂದ ಸ್ಥಳದಲ್ಲೇ ಮುಂದುವರಿಯಲು ವ್ಯವಸ್ಥೆ ಕಲ್ಪಿಸುವುದು. ಎರಡು, ಮುಂದುವರಿಯಲು ಆಸಕ್ತಿ ಇಲ್ಲದಿದ್ದರೆ ಊರಿಗೆ ಹಿಂತಿರುಗಲು ಅವಕಾಶ ನೀಡುವುದು. ವಲಸೆ ಕಾರ್ಮಿಕರು ಬಂದ ಸ್ಥಳದಲ್ಲೇ ಇರಬೇಕಾದರೆ ಅವರಿಗೆ ವಾಸವಿರಲು ಅವಶ್ಯವಿರುವ ಸವಲತ್ತುಗಳನ್ನು – ಆಹಾರ, ನೀರು, ವಸತಿ ಮತ್ತು ಇತರ ಮೂಲಸೌಕರ್ಯಗಳನ್ನು ಒದಗಿಸಬೇಕಿತ್ತು. ಒಂದು ವೇಳೆ ಅವರು ಊರಿಗೆ ಹೋಗಲು ಆಸಕ್ತರಾಗಿದ್ದರೆ ಅವರು ಹಿಂತಿರುಗಿ ಹೋಗಲು ಒಂದೆರಡು ದಿನಗಳ ಅವಕಾಶ ಮತ್ತು ಸಾರಿಗೆ ವ್ಯವಸ್ಥೆ ಮಾಡುವುದು.

ಇಂತಹ ಪೂರ್ವ ತಯಾರಿ ಇಲ್ಲದೆ ನೋಟು ರದ್ದತಿ ತರಹ ಒಂದೇ ಉಸಿರಲ್ಲಿ 21 ದಿನಗಳ ಲಾಕ್‌ಡೌನ್ ಘೋಷಿಸಿ ಎಲ್ಲ ಸಾರಿಗೆ ವ್ಯವಸ್ಥೆಯನ್ನು ರದ್ದುಗೊಳಿಸಿದರೆ ಏನಾಗಬಹುದು? ನೋಟು ಚಲಾವಣೆ ಅರ್ಥ ವ್ಯವಸ್ಥೆಯ ರಕ್ತ ಸಂಚಲನದಂತೆ ಕೆಲಸ ಮಾಡುತ್ತದೆ. ಅದನ್ನು ಏಕ್‌ದಂ ನಿಲ್ಲಿಸಿದ ಕಾರಣ ಇಡೀ ಅರ್ಥ ವ್ಯವಸ್ಥೆಯೇ ಕುಸಿದು ಬಿತ್ತು. ಇದಕ್ಕಿಂತಲೂ ಭೀಕರವಾದ ಪರಿಣಾಮವನ್ನು ಪೂರ್ವಸೂಚನೆ ಇಲ್ಲದೆ ಘೋಷಿಸಿದ ಲಾಕ್‌ಡೌನ್ ಮಾಡಬಹುದು. ವಲಸೆ ಕಾರ್ಮಿಕರು ಬಂದ ಸ್ಥಳದಲ್ಲಿ ಕೆಲಸವಿಲ್ಲದೆ, ಅನ್ನ ನೀರಿಲ್ಲದೆ ಪರದಾಡುತ್ತಿರುವುನ್ನು ನಾವೆಲ್ಲ ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಬಂದ ಸ್ಥಳದಲ್ಲಿ ಆಶ್ರಯವಿಲ್ಲ, ಊರಿಗೆ ಹೋಗುವ ಎಂದರೆ ಎಲ್ಲ ಸಾರಿಗೆಗಳು ಬಂದ್ ಆಗಿವೆ. ಸಣ್ಣಪುಟ್ಟ ಮಕ್ಕಳನ್ನು ನಡೆಸಿಕೊಂಡು, ಹಸುಗೂಸುಗಳನ್ನು ಕಂಕುಳಲ್ಲಿ ಎತ್ತಿಕೊಂಡು ಕಿಲೋಮೀಟರ್‌ಗಟ್ಟಲೆ ನಡೆದುಕೊಂಡು ಹೋಗುವ ದೃಶ್ಯ ಕಲ್ಲು ಮನಸ್ಸನ್ನೂ ಕರಗಿಸಬಹುದು. ವಿದೇಶದಲ್ಲಿರುವ ಭಾರತದ ಪ್ರಜೆಗಳನ್ನು ವಿಮಾನದ ಮೂಲಕ ಭಾರತಕ್ಕೆ ತರಬೇಕೆಂದು ತೋಚುವ ಸರಕಾರಕ್ಕೆ ನಮ್ಮದೇ ದೇಶದೊಳಗೆ ದುಡಿಯುವ ಲಕ್ಷಾಂತರ ಕಾರ್ಮಿಕರನ್ನು ಮನೆ ಸೇರಿಸಬೇಕೆನ್ನುವ ಕನಿಷ್ಠ ಯೋಚನೆ ಬರಲಿಲ್ಲ. ಇದೇ ಕಾರ್ಮಿಕರು ಇದ್ದ ಸ್ಥಳದಲ್ಲಿ ಉದ್ಯೋಗ, ಆಹಾರ, ಕುಡಿಯುವ ನೀರು ಇತ್ಯಾದಿಗಳ ಖರೀದಿಗೆ ಬೀದಿಗೆ ಬಂದರೆ ಪೋಲಿಸರ ಹೊಡೆತ. ತಮ್ಮದೇ ವ್ಯವಸ್ಥೆ ಮಾಡಿಕೊಂಡು ಊರಿಗೆ ಹೋಗಲು ಪ್ರಯತ್ನಿಸಿದರೆ ಅಲ್ಲೂ ಪೋಲಿಸ್ ಹೊಡೆತ. ಪೋಲಿಸ್ ಹೊಡೆಯುವುದು ಸರಿಯಲ್ಲ ಎನ್ನುವ ಬದಲು ಇವರೆಲ್ಲ ಯಾಕಾದರೂ ಬೀದಿಗೆ ಬರುತ್ತಾರೆಂದು ಬಡಜನರನ್ನೇ ಜರಿಯುವ ಮಾಧ್ಯಮ. ಇವೆಲ್ಲವನ್ನು ನೋಡಿದರೆ ನಮ್ಮದೊಂದು ನಾಗರಿಕ ಸಮಾಜವೇ ಎನ್ನುವ ಸಂದೇಹ ಕಾಡುತ್ತಿದೆ.

ಬಡವರು ವೈರಸ್‌ವಾಹಕರಲ್ಲ. ಹಿಂದೆ ಬಡವರನ್ನು ವೈರಸ್ ತರಹ ನೋಡುತ್ತಿದ್ದರು. ಇಂದು ಬಡವರನ್ನು ವೈರಸ್‌ವಾಹಕದ ರೂಪದಲ್ಲಿ ನೋಡುತ್ತಿದ್ದಾರೆ. ವೈರಸ್ ಬಡವರಿಂದಲೇ ಹರಡುತ್ತಿದೆ, ಅವರ ಚಲನೆಯನ್ನು ಹತ್ತಿಕ್ಕಿದ್ದರೆ ವೈರಸ್ ಚಲನೆಯನ್ನು ಹತೋಟಿಗೆ ತರಬಹುದೆನ್ನುವ ದೃಷ್ಟಿಕೋನ ಇದು. ವೈರಸ್ ಭಾರತದಲ್ಲಿ ಸೃಷ್ಟಿಯಾಗಿಲ್ಲ, ಹೊರಗಿನಿಂದ ಬಂದಿದೆ ಮತ್ತು ಇದನ್ನು ಬಡವರು ಭಾರತಕ್ಕೆ ತಂದಿಲ್ಲ. ಮಧ್ಯಮ ಮತ್ತು ಶ್ರೀಮಂತ ವರ್ಗ ತಂದಿವೆ. ಭಾರತ ಲಾಕ್‌ಡೌನ್ ಆದಾಗ ಅವರು ಉದ್ಯೋಗಕ್ಕಾಗಿ, ಊಟಕ್ಕಾಗಿ, ಸಹಾಯಕ್ಕಾಗಿ ಹೊರಗೆ ಓಡಾಡುವ ಅಗತ್ಯವಿಲ್ಲ. ಹೊರಗೆ ಹೋಗದಿದ್ದರೂ ಸಂಬಳ, ಪಿಂಚಣಿ, ಡಿವಿಡೆಂಡ್, ಬಡ್ಡಿ, ಬಾಡಿಗೆ ಇತ್ಯಾದಿ ರೂಪಗಳಲ್ಲಿ ಅವರಿಗೆ ಆದಾಯ ಬರುತ್ತದೆ. ಆದರೆ ಹೊರಗೆ ಹೋಗಿ ದುಡಿಯದಿದ್ದರೆ ಜೀವಂತ ಇರಲು ಸಾಧ್ಯವೇ ಇಲ್ಲ ಎನ್ನುವವರು ಏನು ಮಾಡಬೇಕು? ಇಂತಹ ಅನಿರೀಕ್ಷಿತ, ಅಯೋಜಿತ ಲಾಕ್‌ಡೌನ್ ಅಸಂಘಟಿತ ವಲಯದ ದುಡಿಮೆಯನ್ನು ನಂಬಿದ ಎಲ್ಲರ ಬದುಕನ್ನೂ ನರಕಸದೃಶ್ಯ ಮಾಡುವುದನ್ನು ಈಗಾಗಲೇ ನೋಡುತ್ತಿದ್ದೇವೆ. ದುಡಿಮೆಯಿಲ್ಲದ, ಆದಾಯವಿಲ್ಲದ, ಊಟವಿಲ್ಲದ ಇವರ ರೋಗನಿರೋಧಕ ಕ್ಷೀಣಿಸುತ್ತದೆಂದು ಹೇಳಲು ವೈದ್ಯರು ಬೇಕಿಲ್ಲ. ಇವರೆಲ್ಲ ಮಹಾಮಾರಿಗೆ ಬಲುಬೇಗ ತುತ್ತಾಗಬಹುದು. ತುಂಬಾ ತಡವಾಗಿ ಘೋಷಿಸಿದ ಅರೆಬರೆ ಪರಿಹಾರಗಳ ಭರವಸೆ ಸಕಾಲದಲ್ಲಿ ತಲುಪಿದರೆ ಪುಣ್ಯ. ಒಂದು ವೇಳೆ ಸರಕಾರ ಇವರಿಗೆ ನೀಡುವ ಕನಿಷ್ಠ ಸವಲತ್ತನ್ನೂ ಸಕಾಲದಲ್ಲಿ ತಲುಪಿಸದಿದ್ದರೆ ಇವರೆಲ್ಲ ಮಹಾಮಾರಿಯಿಂದ ತಪ್ಪಿಸಿಕೊಂಡರೂ, ಆಹಾರದ ಕೊರತೆಯಿಂದ ಸಾಯುವ ಸಾಧ್ಯತೆ ಹೆಚ್ಚಿದೆ.

ನಮ್ಮ ದುಡಿಮೆಗಾರರ ಶೇ.94 ರಷ್ಟು ಜನ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ನಮ್ಮ ಜಿಡಿಪಿಯ ಶೇ.49ರಷ್ಟು ಇವರ ದುಡಿಮೆಯಿಂದ ಬರುತ್ತಿದೆ. ನೋಟು ರದ್ದತಿ ಸಂದರ್ಭದಲ್ಲೂ ಮೊದಲು ಅಸಂಘಟಿತ ವಲಯದ ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡವು. ಆಗ ಅದು ಮಾಧ್ಯಮದಲ್ಲಿ ದೊಡ್ಡ ಸುದ್ದಿಯಾಗಲಿಲ್ಲ. ಸಂಘಟಿತ ಮತ್ತು ಅಸಂಘಟಿತ ವಲಯಗಳು ಪರಸ್ಪರ ಅವಲಂಬಿತ. ಸಂಘಟಿತ ವಲಯದ ಹಲವು ಬಿಡಿಭಾಗಗಳು ಅಸಂಘಟಿತ ವಲಯದಲ್ಲಿ ಉತ್ಪಾದನೆಯಾಗುತ್ತವೆ. ಜೊತೆಗೆ ಸಂಘಟಿತ ವಲಯದಲ್ಲಿ ದೊಡ್ಡ ಸಂಖ್ಯೆಯಲ್ಲಿ ಅಸಂಘಟಿತ ಕಾರ್ಮಿಕರಿದ್ದಾರೆ. ಅಷ್ಟು ಮಾತ್ರವಲ್ಲ ಸಂಘಟಿತ ವಲಯದ ಉತ್ಪಾದನೆಯ ಅನುಭೋಗದಲ್ಲಿ ಅಸಂಘಟಿತ ವಲಯದ ದುಡಿಮೆಗಾರರ ಪಾತ್ರವೂ ಇದೆ. ಹೀಗಾಗಿ ಸಂಘಟಿತ ವಲಯದ ಉತ್ಪಾದನೆ ಮತ್ತು ಬೇಡಿಕೆ ಎರಡೂ ಕೂಡ ಅಸಂಘಟಿತ ವಲಯದ ಉತ್ಪಾದನೆ ಮತ್ತು ಬೇಡಿಕೆ ಮೇಲೆ ನಿಂತಿದೆ. ಇದೇ ಕಾರಣದಿಂದ ನೋಟು ರದ್ದತಿಯ ತಕ್ಷಣದ ಪರಿಣಾಮವಾಗಿ ಅಸಂಘಟಿತ ವಲಯದ ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡರೆ ನಂತರದ ದಿನಗಳಲ್ಲಿ ಇದರ ಪರಿಣಾಮ ಸಂಘಟಿತ ವಲಯದ ಮೇಲೂ ಕಾಣಲು ಆರಂಭವಾಯಿತು. ಆ ಸಂದರ್ಭದಲ್ಲಿ ಮಾಧ್ಯಮಗಳು ಕಿರುಚಾಡಲು ಆರಂಭಿಸಿದವು. ಸರಕಾರ ಎಚ್ಚೆತ್ತುಕೊಂಡು ಸಂಘಟಿತ ವಲಯದ ಉದ್ಯಮಿಗಳಿಗೆ ಕೋಟಿಗಟ್ಟಲೆ ತೆರಿಗೆ ವಿನಾಯಿತಿ ನೀಡಿದೆ. ಅಸಂಘಟಿತರ ವಲಯದಲ್ಲಿ ದುಡಿಯುವವರ ಆದಾಯ ಹೆಚ್ಚಿಸಲು ಏನೇನೂ ಕ್ರಮ ಕೈಗೊಳ್ಳಲಿಲ್ಲ. ಇದರಿಂದ ನಮ್ಮ ದೇಶದ ಜಿಡಿಪಿ ಕುಸಿದು ಪಾತಾಳ ಸೇರಿತು. ಇಂತಹ ಸಂದರ್ಭದಲ್ಲಿ ಈ ಮಹಾಮಾರಿ ವಕ್ಕರಿಸಿದೆ. ಈ ಸಂದರ್ಭದಲ್ಲಾದರೂ ಸರಕಾರ ಎಚ್ಚತ್ತುಕೊಂಡು ತಳಸ್ತರದ ಜನರ ಕೈಯಲ್ಲಿ ಅಲ್ಪಸ್ವಲ್ಪ ಹಣ ಇರುವಂತೆ ನೋಡಿಕೊಳ್ಳಬೇಕಿತ್ತು. ಆದರೆ ಅಂತಹ ಕ್ರಮಗಳು ಇನ್ನೂ ಜಾರಿಗೆ ಬಂದಿಲ್ಲ. ಇದರಿಂದಾಗಿ ನೋಟು ರದ್ದತಿ ಪರಿಣಾಮದ ಮತ್ತೊಂದು ಮತ್ತು ಬಹುಶಃ ಇನ್ನಷ್ಟು ಭೀಕರ ರೂಪವನ್ನು ಅಯೋಜಿತ ಲಾಕ್‌ಡೌನ್‌ನಿಂದಲೂ ನಿರೀಕ್ಷಿಸಬಹುದು.

ಕೃಷಿ, ಸಣ್ಣಪುಟ್ಟ ವ್ಯಾಪಾರ, ಉದ್ದಿಮೆ, ಅಸಂಘಟಿತ ವಲಯದ ದುಡಿಮೆ ಎಲ್ಲವೂ ಮೊದಲ ಹಂತದಲ್ಲಿ ದೊಡ್ಡ ಮಟ್ಟಿನ ಕುಸಿತ ಕಾಣಲಿವೆ. ಶೇ.70 ರಷ್ಟು ಜನ ಈಗಾಗಲೇ ಅತ್ಯಂತ ಕನಿಷ್ಠ ಆದಾಯದಲ್ಲಿ ಬದುಕುತ್ತಿದ್ದಾರೆ. ಇವರು ಅವಲಂಬಿಸಿದ ಎಲ್ಲ ಕ್ಷೇತ್ರಗಳು ಕುಸಿತ ಕಾಣುವುದರಿಂದ

ಇವರು ಅಲ್ಲಿ ಉದ್ಯೋಗ ನಿರೀಕ್ಷಿಸುವುದು ಕಷ್ಟ. ಸಂಘಟಿತ ವಲಯ ಇವರನ್ನು ಹತ್ತಿರ ಸೇರಿಸದಿರುವುದರಿಂದ ಅಸಂಘಟಿತ ವಲಯದಲ್ಲೂ ದೊಡ್ಡ ನಿರುದ್ಯೋಗ ಸೃಷ್ಟಿಯಾಗಬಹುದು. ಆದಾಯ ಗಳಿಸುವ ದಾರಿಗಳೆಲ್ಲ ಮುಚ್ಚುವುದರಿಂದ ಇವರ ಆರೋಗ್ಯ, ಬದುಕು ಎಲ್ಲವೂ ಕಠಿಣ ಪರೀಕ್ಷೆಗೆ ಒಳಗಾಗಬಹುದು. ಯಾವ ಕ್ರಮ ಕೈಗೊಳ್ಳಬಹುದು? ಇಂತಹ ಕರಾಳ ಭವಿಷ್ಯ ಅನಿವಾರ್ಯವೇನಲ್ಲ. ಸರಕಾರ ಮನಸ್ಸು ಮಾಡಿದರೆ ಈ ಸ್ಥಿತಿಯನ್ನು ಸಂಪೂರ್ಣವಲ್ಲದಿದ್ದರೂ ಬಹುತೇಕ ಬದಲಾಯಿಸಬಹುದು.

ಸರಕಾರ ತಕ್ಷಣ ಈ ಆರು ಕ್ರಮಗಳನ್ನು ತೆಗೆದುಕೊಳ್ಳಬೇಕು.

ಒಂದು, ಅಸಂಘಟಿತ ವಲಯದಲ್ಲಿ ದುಡಿಯುವವರನ್ನು ಗುರುತಿಸುವುದು ಮತ್ತು ಅವರಿಗೆ ಕನಿಷ್ಠ ಮೂಲ ಸೌಕರ್ಯಗಳನ್ನು ಪೂರೈಸುವುದು. ಅಸಂಘಟಿತ ವಲಯದಲ್ಲಿರುವವರನ್ನು ಗುರುತಿಸಲು ಸಾಕಷ್ಟು ಸಾಧನಗಳಿವೆ. ಆಧಾರ್, ರೇಶನ್ ಕಾರ್ಡ್, ಬಿಪಿಎಲ್ ಸರ್ವೆ ಇತ್ಯಾದಿ ಮಾಹಿತಿಗಳನ್ನು ಬಳಸಿಕೊಂಡು ಅತೀ ಜರೂರು ಮೂಲ ಸೌಕರ್ಯಗಳ ಅವಶ್ಯಕತೆ ಇರುವವರನ್ನು ಗುರುತಿಸಬಹುದು. ಗುರುತಿಸಿದ ನಂತರ ಪಂಚಾಯಿತಿಗಳ ಮೂಲಕ ಅಥವಾ ಇತರ ವಿಕೇಂದ್ರೀಕೃತ ವ್ಯವಸ್ಥೆ ಮೂಲಕ ಅವರಿಗೆ ಆಹಾರ ಸಾಮಗ್ರಿ ಮತ್ತು ಇತರ ಸವಲತ್ತುಗಳನ್ನು ಕನಿಷ್ಠ ಮೂರು ತಿಂಗಳಾದರೂ ಪೂರೈಕೆ ಮಾಡಬೇಕು. ಮೂಲಸೌಕರ್ಯಗಳಲ್ಲಿ ನೀರು ಪೂರೈಕೆ ಅತೀ ಮುಖ್ಯ. ಸೋಕು ತಗುಲದಂತೆ ಇರಲು ಆಗಾಗ ಸಾಬೂನು ಹಾಕಿ ಕೈತೊಳೆಯಬೇಕೆನ್ನುತ್ತಾರೆ. ಕುಡಿಯುವ ನೀರಿಗೇ ಪರದಾಡುವ ಜನ ಆಗಾಗ ಕೈತೊಳೆಯಬೇಕಾದರೆ ನೀರಿನ ಪೂರೈಕೆ ಅತಿ ಅವಶ್ಯಕ. ಶುಚಿತ್ವ ಕಾಪಾಡಲು ಕೂಡ ನೀರಿನ ಪೂರೈಕೆ ಮುಖ್ಯ.

ಎರಡು, ಅತ್ಯಂತ ಕನಿಷ್ಠ ರೋಗರೋಧಕ ಶಕ್ತಿ ಹೊಂದಿರುವ ಇವರೆಲ್ಲ ಬಹುಬೇಗ ಸೋಂಕಿಗೆ ಬಲಿಯಾಗುವ ಸಾಧ್ಯತೆ ಇದೆ. ಆದುದರಿಂದ ಕೊರೊನಾ ರೋಗದ ಲಕ್ಷಣ ಇದ್ದವರನ್ನು ಮಾತ್ರ ಪರೀಕ್ಷಿಸುವ ಸರಕಾರದ ಇಂದಿನ ನಿಲುವನ್ನು ಬದಲಾಯಿಸಿಕೊಂಡು ಕೊರೊನಾ ಸೋಂಕಿತರನ್ನು ಪತ್ತೆ ಹಚ್ಚಲು ರ್‍ಯಾಂಡಮ್ ಪರೀಕ್ಷೆಗಳನ್ನು ನಡೆಸಬೇಕು.

ಮೂರು, ಕೊರೊನಾ ರೋಗದ ಶಂಕಿತರನ್ನು ಮನೆಯಲ್ಲೇ ಪ್ರತ್ಯೇಕವಾಗಿ ಇರಬೇಕೆನ್ನುವ ಸರಕಾರದ ಇಂದಿನ ನಿಲುವು ತಳಸ್ತರದ ಜನರಿಗೆ ಅನ್ವಯಿಸುವುದು ಸರಿಯಲ್ಲ. ಏಕೆಂದರೆ ಬಹುತೇಕ ಸಂದರ್ಭದಲ್ಲಿ ಇವರೆಲ್ಲ ಒಂದೆರಡು ಕೊಠಡಿಗಳುಳ್ಳ ಸಣ್ಣಪುಟ್ಟ ವಸತಿಯಲ್ಲಿರುತ್ತಾರೆ. ಇಂತಹ ಸಣ್ಣ ಜಾಗದಲ್ಲಿ ಏಳೆಂಟು ಮಂದಿ ವಾಸಿಸುವುದು ಸಾಮಾನ್ಯ. ಇಂತಹ ಸಣ್ಣ ಜಾಗದಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಲು ಸಾಧ್ಯವೇ ಇಲ್ಲ. ಅಷ್ಟು ಮಾತ್ರವಲ್ಲ ಮನೆಯ ಎಲ್ಲರಿಗೂ ಸೋಂಕು ತಗಲುವ ಸಾಧ್ಯತೆ ಹೆಚ್ಚಿದೆ. ಆದುದರಿಂದ ತಳಸ್ತರದ ಜನರಲ್ಲಿ ಶಂಕಿತರನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡುವ ವ್ಯವಸ್ಥೆಯನ್ನು ತಕ್ಷಣ ಜಾರಿಗೆ ತರಬೇಕು.

ನಾಲ್ಕು, ದುಡಿಯುವ ಸ್ಥಳದಲ್ಲಿ ಅಥವಾ ಸಣ್ಣಪುಟ್ಟ ಫ್ಯಾಕ್ಟರಿಗಳಲ್ಲಿ ಒಬ್ಬ ಕೆಲಸಗಾರನಿಗೆ ಸೋಂಕು ತಗಲಿದರೆ ಎಲ್ಲ ಕಾರ್ಮಿಕರನ್ನು ಮನೆಯಲ್ಲೇ ಇರಬೇಕೆಂದು ತಾಕೀತು ಮಾಡುವ ಇಂದಿನ ಸರಕಾರದ ನಿಲುವನ್ನು ಬದಲಾಯಿಸಿಕೊಳ್ಳಬೇಕು. ಮೇಲೆ ಹೇಳಿದಂತೆ ಸಣ್ಣಪುಟ್ಟ ಫ್ಯಾಕ್ಟ-ರಿಗಳಲ್ಲಿ ದುಡಿಯುವವರೆಲ್ಲ ಮನೆಯಲ್ಲೇ ಉಳಿದರೆ ಫ್ಯಾಕ್ಟರಿ ಬಂದ್ ಆಗುತ್ತದೆ. ಜೊತೆಗೆ ಎಲ್ಲ ಕೆಲಸಗಾರರೂ ಆದಾಯ ಕಳೆದುಕೊಳ್ಳುತ್ತಾರೆ. ಇಂತಹ ದೂರಾಲೋಚನೆಯಿಲ್ಲದ ಕ್ರಮದ ಬದಲು ಫ್ಯಾಕ್ಟರಿಯ ಎಲ್ಲ ಕಾರ್ಮಿಕರನ್ನು ಪರೀಕ್ಷಿಸಿ ಯಾರು ಶಂಕಿತರಿದ್ದಾರೋ ಅವರನ್ನು ಆಸ್ಪತ್ರೆಗೆ ಸೇರಿಸುವ ಕ್ರಮ ಕೈಗೊಳ್ಳಬೇಕು.

ಐದು, ದೇಶ, ರಾಜ್ಯ, ಜಿಲ್ಲೆ, ತಾಲ್ಲೂಕು, ಹಳ್ಳಿಗಳೆಲ್ಲ ಬೇಲಿ ಹಾಕಿಕೊಂಡು ಕೂತಿವೆ. ಇಂತಹ ಸ್ಥಿತಿಯಲ್ಲಿ ಜರೂರು ಚಿಕಿತ್ಸೆಗೆ ಪ್ರಯಾಣಿಸುವುದು ಕಷ್ಟವಾಗಿದೆ. ಅವುಗಳ ಜೊತೆಗೆ ಸರಕುಗಳ ಸಾಗಾಟ ಕೂಡ ಸ್ಥಗಿತಗೊಳ್ಳುವ ಸಾಧ್ಯತೆ ಇದೆ. ಸರಕುಗಳ ಸಾಗಾಟ ನಡೆಯದಿದ್ದರೆ ರೈತರು ಬೆಳೆಯುವುದಿಲ್ಲ. ಇದೇ ಚಕ್ರ ಮುಂದುವರಿದರೆ ಆಹಾರ ಕೊರತೆ ಸೃಷ್ಟಿಯಾಗುವುದರಲ್ಲಿ ಸಂದೇಹವೇ ಇಲ್ಲ. ಇದು ದೊಡ್ಡ ಮಟ್ಟದ ಸಾಮಾಜಿಕ ಅಶಾಂತಿಗೆ ಕಾರಣವಾಗಬಹುದು. ಆದುದರಿಂದ ಸರಕಾರಗಳು ಈ ಬೇಲಿ ಹಾಕುವ ಕ್ರಮವನ್ನು ಶಿಸ್ತುಬದ್ಧಗೊಳಿಸಿ ಸರಕು ಸಾಗಾಟ ಹಾಗೂ ಎಮರ್ಜನ್ಸಿ ಮೆಡಿಕಲ್ ಸೇವೆಗೆ ಓಡಾಡುವುದನ್ನು ಆದಷ್ಟು ಬೇಗ ಸರಾಗಗೊಳಿಸಬೇಕು.

ಆರು, ಮಾಧ್ಯಮಗಳು ಜನರನ್ನು ಭಯಭೀತರನ್ನಾಗಿಸುವುದನ್ನು ಕಡಿಮೆ ಮಾಡಿ, ವೈರಸ್ ಬಗ್ಗೆ ಶಿಕ್ಷಣ ಕೊಡುವುದನ್ನು ಕಲಿಯಬೇಕು. ಜೊತೆಗೆ ಪಂಚಾಯತ್, ತಾಲ್ಲೂಕು, ಜಿಲ್ಲಾ ಸ್ತರದಲ್ಲಿರುವ ಆರೋಗ್ಯ ವ್ಯವಸ್ಥೆ ಎದುರಿಸುತ್ತಿರುವ ಕುಂದುಕೊರತೆಗಳನ್ನು ಸರಕಾರದ ಗಮನಕ್ಕೆ ತರುವ ಅಗತ್ಯವಿದೆ. ಈ ಕುಂದುಕೊರತೆಗಳು ಪರಿಹಾರವಾದರೆ ರೋಗ ಹರಡಿದರೂ ಹತೋಟಿಗೆ ತರಬಹುದು. ದುಡಿಯುವ ಜನ ದೇಶದ ಆಸ್ತಿ ಹಿಂದೆ ಮತ್ತು ಇಂದೂ ನಮ್ಮ ಸಂಸ್ಕೃತಿಯಲ್ಲಿ ದೈಹಿಕ ಶ್ರಮ ಪಡುವವರಿಗೆ ಬೆಲೆ ಇರಲಿಲ್ಲ. ಹಿಂದೆ ಕೂಡ ಸಮಾಜದ ಕಟ್ಟಕಡೆಯ ವ್ಯಕ್ತಿಗಳ ಶ್ರಮದ ಮೇಲೆ ನಮ್ಮ ಕೃಷಿ ಮತ್ತು ಇತರ ಉತ್ಪಾದನೆಗಳು ನಿಂತಿದ್ದವು. ಆದರೆ ಅವರನ್ನು ಊರೊಳಗೆ ಬಿಟ್ಟುಕೊಳ್ಳಲಿಲ್ಲ. ಅವರನ್ನು ಹತ್ತಿರ ಸೇರಿಸಲಿಲ್ಲ. ಅವರನ್ನು ಮುಟ್ಟಿದರೆ ಮಡಿಮೈಲಿಗೆ ಆಗುತ್ತಿತ್ತು. ಇವತ್ತು ನಾವು ಕೊರೊನಾ ವೈರಸನ್ನು ನೋಡುವ ರೀತಿಯಲ್ಲಿ ಹಿಂದೆ ನಮ್ಮದೇ ದುಡಿಯುವ ಜನರನ್ನು ನೋಡುವ ಪಾಠವನ್ನು ನಮ್ಮ ಮಹಾನ್ ಸಂಸ್ಕೃತಿ ಕಲಿಸಿದೆ. ಈ ಪಾಠ ಇಂದೂ ಕೂಡ ಆಚರಣೆಯಲ್ಲಿದೆ. ವಲಸೆ ಕಾರ್ಮಿಕರಿಗೆ, ಬಡವರಿಗೆ, ಸಣ್ಣಪುಟ್ಟ ವ್ಯಾಪಾರಿ ಉದ್ಯಮಿಗಳಿಗೆ ಒಂದಿಷ್ಟು ವ್ಯವಸ್ಥೆ ಮಾಡದೆ ಏಕ್‌ದಂ ಲಾಕ್‌ಡೌನ್ ಮಾಡುವುದು ಇದೇ ಮಾನಸಿಕ ಸ್ಥಿತಿಯನ್ನು ತೋರಿಸುತ್ತದೆ.

ಕಾರ್ಮಿಕರು, ಬಡವರು, ಸಾಮಾನ್ಯ ಜನರು ಬೀದಿಗೆ ಬಂದಾಗ ಮನಸ್ಸೋ ಇಚ್ಛೆ ಲಾಠಿ ಬೀಸುವುದು ಪೋಲಿಸರ ಮಾನಸಿಕ ಸ್ಥಿತಿಯನ್ನು ತೋರಿಸುತ್ತಿಲ್ಲ; ಅಧಿಕಾರದಲ್ಲಿರುವವರ ಮಾನಸಿಕ ಸ್ಥಿತಿಯನ್ನು ತೋರಿಸುತ್ತಿದೆ. ಇಂತಹ ಘಟನೆಯನ್ನು ನಿಂದಿಸುವ ಬದಲು ಸರಕಾರ, ಪೋಲಿಸ್ ಮಾಡುವುದೇ ಸರಿ ಎಂದು ಬಿಂಬಿಸುವ ಮಾಧ್ಯಮ ಕೂಡ ಸೂಕ್ಷ್ಮತೆಯಿಲ್ಲದ ಸರಕಾರದ ಧೋರಣೆಯ ಮುಂದುವರಿಕೆಯೇ ಆಗಿದೆ. ಇವೆಲ್ಲ ಬದಲಾಗಬೇಕಾಗಿದೆ. ಮಸೀದಿ, ಮಂದಿರ, ಗುಡಿಗೋಪುರಗಳಲ್ಲಿ, ಹಳೇ ಧಾರ್ಮಿಕ ಗ್ರಂಥಗಳಲ್ಲಿ, ಸಂಸ್ಕೃತಿಯ ದೊಡ್ಡಸ್ತಿಕೆಯನ್ನು ನೋಡುವ ಚಟ ನಮಗೆ ಚರಿತ್ರೆಯಿಂದ ಬಂದಿದೆ. ಕಲ್ಲಲ್ಲಿ, ಮಣ್ಣಲ್ಲಿ, ಮರದಲ್ಲಿ, ನೀರಲ್ಲಿ, ಪ್ರಾಣಿಗಳಲ್ಲಿ ದೇವರನ್ನು ನೋಡುವ ಪಾಠ ಕೂಡ ಸಂಸ್ಕೃತಿಯಿಂದ ಬಂದಿದೆ. ಆದರೆ ನಮ್ಮ ಹಾಗೆ ಇರುವ ಮತ್ತೊಬ್ಬ ಮನುಷ್ಯನಲ್ಲಿ ದೇವರನ್ನು ನೋಡುವ ಪಾಠ ನಮಗೆ ಎಲ್ಲೂ ಸಿಕ್ಕಿಲ್ಲ. ಆದರೆ ಚರಿತ್ರೆಯಿಂದ ಬಂದ ಸಂಸ್ಕೃತಿ ಮತ್ತು ದೇವರ ಕಲ್ಪನೆಗಳು ಇಂದು ಏನೇನೂ ಉಪಯೋಗವಿಲ್ಲ ಎನ್ನುವ ಸತ್ಯ ನಮಗೆಲ್ಲ ಅರ್ಥವಾಗಬೇಕಾಗಿದೆ. ಮಹಾನ್ ಸಂಸ್ಕೃತಿಯ ಲಕ್ಷಣವನ್ನು ನೋಡುವ ಮಾನದಂಡವೇ ಬದಲಾಗಬೇಕಾಗಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಬದುಕು ಹೇಗಿದೆ ಮತ್ತು ಅವರನ್ನು ಸಮಾಜ ಹೇಗೆ ನೋಡುತ್ತಿದೆ ಎನ್ನುವುದು ಮಹಾನ್ ಸಂಸ್ಕೃತಿಯ ಲಕ್ಷಣವಾಗಬೇಕಾಗಿದೆ.

ಮತ್ತೊಬ್ಬರು ಚೆನ್ನಾಗಿದ್ದರೆ ಮಾತ್ರ ನಾವು ಚೆನ್ನಾಗಿರಲು ಸಾಧ್ಯ ಎನ್ನುವ ಪಾಠವನ್ನು ಈ ಮಹಾಮಾರಿ ಮಾಡುತ್ತಿದೆ. ಆದುದರಿಂದ ಎಲ್ಲ ವರ್ಗದ ಜನರನ್ನು ದೇಶದ ಆಸ್ತಿಯೆಂದು ಪರಿಗಣಿಸಿ ಅವರನ್ನು ರಕ್ಷಿಸಲು ಎಲ್ಲ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವುದು ಇಂದಿನ ಅನಿವಾರ್ಯತೆ.

ಕೃಪೆ : **ಜನಶಕ್ತಿ**



ಗಾಯಗೊಂಡ ಆರ್ಥಿಕತೆಗೆ ಇಲಾಜು ಮಾಡೋಣ

ಸಿ ರಂಗರಾಜನ್

ಅನುವಾದ: ಟಿ ಎಸ್ ವೇಣುಗೋಪಾಲ್

ಕೊರೋನ ವೈರಾಣು ಮಹಾಮಾರಿಯ ಪರಿಣಾಮ ಈಗ ಬಹುತೇಕ ಎಲ್ಲಾ ದೇಶಗಳ ಅನುಭವಕ್ಕೂ ಬಂದಿದೆ. ಮೊದಲಿಗೆ ವೈರಾಣುವಿನಿಂದ ಆರೋಗ್ಯದ ಮೇಲೆ ಆಗಿರುವ ಪರಿಣಾಮ. ಮತ್ತು ಎರಡನೆಯದು ವೈರಾಣುವನ್ನು ಬಗ್ಗು ಬಡಿಯಲು ತೆಗೆದುಕೊಂಡ ವಿಭಿನ್ನ ಕ್ರಮಗಳ ಆರ್ಥಿಕ ಪರಿಣಾಮ. ಈಗಾಗಲೇ ಕುಸಿಯುತ್ತಿದ್ದ ಆರ್ಥಿಕತೆ ಈಗ ಇನ್ನಷ್ಟು ಹಿನ್ನಡೆಯನ್ನು ಅನುಭವಿಸುತ್ತಿದೆ. ಭಾರತ ಇದಕ್ಕೆ ಹೊರತಲ್ಲ. ಭಾರತದ ಮೇಲೆ ಆರ್ಥಿಕ ಪರಿಣಾಮ ನಾಲ್ಕು ರೀತಿಯಲ್ಲಿ ಆಗುತ್ತದೆ: ವಿದೇಶಿ ಬೇಡಿಕೆ, ದೇಶಿಯ ಬೇಡಿಕೆ, ಪೂರೈಕೆಯಲ್ಲಿ ತೊಂದರೆ, ಹಾಗೂ ಹಣಕಾಸು ಮಾರುಕಟ್ಟೆಯ ಗೊಂದಲಗಳು.

ವಿದೇಶಿ ಹಾಗೂ ದೇಶೀಯ ಬೇಡಿಕೆ

ಮುಂದುವರೆದ ರಾಷ್ಟ್ರಗಳ ಆರ್ಥಿಕತೆ ನಿಧಾನಗೊಂಡಾಗ (ಕೆಲವರು ಹಿನ್ನಡೆ–ರಿಸೆಷನ್ ಅಂತ ಮಾತನಾಡುತ್ತಿದ್ದಾರೆ) ಸರಕುಗಳ ಆಮದಿಗೆ ಬೇಡಿಕೆ ಕಡಿಮೆಯಾಗುತ್ತದೆ. ಅದರಿಂದ ನಮ್ಮ ರಫ್ತಿಗೆ ಹೊಡೆತ ಬೀಳುತ್ತದೆ. ಅದು ಈಗಾಗಲೇ ದುಸ್ಥಿತಿಯಲ್ಲಿದೆ. ಆರು ತಿಂಗಳ ಋಣಾತ್ಮಕ ಬೆಳವಣಿಗೆಯಿಂದ ಚೇತರಿಸಿಕೊಂಡು ಜನವರಿಯಲ್ಲಷ್ಟೇ ಭಾರತದ ರಫ್ತು ಧನಾತ್ಮಕ ಬೆಳವಣಿಗೆಯನ್ನು ಕಂಡಿತ್ತು. ನಮ್ಮ ರಫ್ತು ಎಷ್ಟರ ಮಟ್ಟಿಗೆ ಕುಸಿಯಬಹುದು ಅನ್ನುವುದು ಬೇರೆ ದೇಶಗಳ ಆರ್ಥಿಕತೆಯ ಮೇಲೆ ಆಗುವ ಪರಿಣಾಮವನ್ನು ಅವಲಂಬಿಸಿದೆ. ಕೇವಲ ಸರಕುಗಳ ರಫ್ತು ಮಾತ್ರವಲ್ಲ, ಸೇವೆಯ ರಫ್ತು ಕೂಡ ಕುಸಿಯುತ್ತದೆ. ಒಂದೇ ನೆಮ್ಮದಿಯ ವಿಷಯವೆಂದರೆ ಪೆಟ್ರೋಲ್ ಬೆಲೆ ಇಳಿದಿರುವುದು. ಇದರಿಂದ ಭಾರತದ ಪೆಟ್ರೋಲ್ ಆಮದಿನ ಖರ್ಚು ಗಣನೀಯವಾಗಿ ಕಮ್ಮಿಯಾಗುತ್ತದೆ. ಆದರೆ ಇದರಿಂದ ಭಾರತದ ಕೆಲಸಗಾರರನ್ನು ನೇಮಿಸಿಕೊಳ್ಳುತ್ತಿರುವ ಪೆಟ್ರೋಲ್ ರಫ್ತು ಮಾಡುವ ದೇಶಗಳ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆ. ಅದರಿಂದ ಹಣದ ರವಾನೆ ಕಡಿಮೆಯಾಗುತ್ತದೆ.

ಕೊರೊನ ವೈರಾಣು ಹರಡುವುದನ್ನು ತಪ್ಪಿಸಲು ಸರ್ಕಾರ ದೇಶದಲ್ಲಿ ಲಾಕ್‌ಡೌನ್ ಘೋಷಿಸಿದೆ. ಪ್ರಯಾಣಿಕರ ಸಂಖ್ಯೆ ಕಡಿಮೆಯಾಗುತ್ತದೆ. ಅದರಿಂದ ಸಾರಿಗೆ ಕೈಗಾರಿಕೆಗೆ ಹಿನ್ನಡೆಯಾಗುತ್ತದೆ. ರಸ್ತೆ, ರೈಲು ಹಾಗೂ ವಾಯು ಪ್ರಯಾಣ ಕಡಿಮೆಯಾಗುತ್ತದೆ. ಕೆಲವೊಮ್ಮೆ ಅದು ತೀವ್ರವಾಗಿ ಕಮ್ಮಿಯಾಗುತ್ತದೆ. ಇದರ ಪರಿಣಾಮವಾಗಿ ಅದರ ಜೊತೆ ತೆಕ್ಕೆಹಾಕಿಕೊಂಡಿದ್ದ ಹಲವು ಪೂರಕ ಕ್ಷೇತ್ರಗಳು ತೀವ್ರ ನಷ್ಟಕ್ಕೆ ಸಿಲಕುತ್ತವೆ. ಖಾಯಂ ಅಲ್ಲದ ಉದ್ಯೋಗಿಗಳನ್ನು ಕೆಲಸದಿಂದ ತೆಗೆಯುವ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ. ಒಟ್ಟಾರೆಯಾಗಿ ಜನ ಕೊಳ್ಳುವುದು ಕಡಿಮೆಯಾಗುತ್ತದೆ. ಸ್ವಾಭಾವಿಕವಾಗಿಯೇ ಅಂಗಡಿಗಳಲ್ಲಿ ದಾಸ್ತಾನು ಸಂಗ್ರಹ ಕಡಿಮೆಯಾಗುತ್ತದೆ. ಇದರಿಂದ ಉತ್ಪಾದನೆ ಕಡಿಮೆಯಾಗುತ್ತದೆ. ಮೊದಲಿಗೆ ಚಿಲ್ಲರೆ ವ್ಯಾಪಾರಕ್ಕೆ ಪೆಟ್ಟು ಬೀಳುತ್ತದೆ. ಅದರ ಪರಿಣಾಮ ಉತ್ಪಾದನಾ ಘಟಕಗಳಿಗೆ ರವಾನೆಯಾಗುತ್ತದೆ. ಈ ಹಂತದಲ್ಲಿ ಆರ್ಥಿಕ ಚಟುವಟಿಕೆಯ ಮೇಲೆ ಆಗುವ ಪರಿಣಾಮದ ಪ್ರಮಾಣವನ್ನು ಅಂದಾಜು ಮಾಡುವುದಕ್ಕೆ ಆಗುವುದಿಲ್ಲ. ಪರಿಸ್ಥಿತಿ ಬದಲಾಗದೇ ಹೋದರೆ ಬೆಳವಣಿಗೆ ದರದಲ್ಲಿ 2020–21ರ ಅವಧಿಯಲ್ಲಿ ಗಂಭೀರವಾದ ಕುಸಿತ ಉಂಟಾಗಬಹುದು.

ನಮಗೆ ಆಮದು ಮಾಡಿಕೊಳ್ಳುವುದಕ್ಕೆ ಆಗದೇ ಹೋದಾಗ ಅಥವಾ ಉತ್ಪನ್ನವನ್ನು ಕೊಂಡುಕೊಳ್ಳುವುದಕ್ಕೆ ಆಗದೇ ಹೋದಾಗ ಪೂರೈಕೆಗೆ ತೊಂದರೆಯಾಗುತ್ತದೆ. ಈ ಸಂದರ್ಭದಲ್ಲಿ ಪೂರೈಕೆಯ ಕೊಂಡಿಯಲ್ಲಿ ತೀವ್ರವಾದ ಬಿರುಕು ಮೂಡಬಹುದು. ಅಂದಾಜಿನ ಪ್ರಕಾರ ನಾವು ಮಾಡಿಕೊಳ್ಳುತ್ತಿರುವ ಒಟ್ಟು ಆಮದಿನಲ್ಲಿ ಶೇಕಡ 60ರಷ್ಟು ಸರಕುಗಳ 'ಮಧ್ಯವರ್ತಿ ಸರಕುಗಳು'. ಜೊತೆಗೆ ವೈರಾಣುವಿನಿಂದ ಬಾಧಿತವಾಗಿರುವ ದೇಶಗಳಿಂದ ಆಮದು ಮಾಡುಕೊಳ್ಳುವುದು ಆತಂಕದ ವಿಷಯ. ರಾಜ್ಯಗಳ ನಡುವೆಯೂ ಸರಕುಗಳ ಚಲನೆಗೆ ತೊಂದರೆಯಾಗಿರುವುದರಿಂದ ದೇಶೀಯ ಪೂರೈಕೆಯಲ್ಲೂ ಸಮಸ್ಯೆಯಾಗಬಹುದು.

ಹಣಕಾಸು ಮಾರುಕಟ್ಟೆಯ ಸಮಸ್ಯೆಗಳು

ಕೊರೊನ ವೈರಸ್ ಮಹಾಮಾರಿಯಂತಹ ಸಾಂಕ್ರಮಿಕದ ವಿಷಯದಲ್ಲಿ ಹಣಕಾಸು ಮಾರುಕಟ್ಟೆಗಳು ತಕ್ಷಣ ಪ್ರತಿಕ್ರಿಯಿಸುತ್ತವೆ. ಅಷ್ಟೇ ಅಲ್ಲ ಅತಾರ್ಕಿಕವಾಗಿ ವರ್ತಿಸುತ್ತವೆ. ಅದರ ಇಡೀ ಪ್ರತಿಕ್ರಿಯೆ ಭೀತಿಯಿಂದ ಹುಟ್ಟಿಕೊಂಡಿದೆ. ಭಾರತದಲ್ಲಿ ಸ್ಟಾಕ್ ಮಾರುಕಟ್ಟೆ ಕುಸಿದಿದೆ. ಅದರ ಸೂಚ್ಯಂಕ ಮೂರು ವರ್ಷದಲ್ಲೇ ಕೆಳಮಟ್ಟದಲ್ಲಿದೆ. ವಿದೇಶಿ ಪೋರ್ಟ್‌ಫೋಲಿಯೊ ಹೂಡಿಕೆದಾರರು ದಿಗಿಲುಗೊಂಡಿದ್ದಾರೆ. ಸುರಕ್ಷಿತ ಸ್ವರ್ಗದ ನಿಯಮ ಚಾಲು ಆಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಡಾಲರ್ ಮುಂದೆ ರೂಪಾಯಿ ಬೆಲೆಯೂ ಕುಸಿದಿದೆ. ಸ್ಟಾಕ್ ಮಾರುಕಟ್ಟೆಯ ಕುಸಿತ ಸಂಪತ್ತಿನ ಮೇಲೂ ಪರಿಣಾಮ ಬೀರುತ್ತದೆ. ಶ್ರೀಮಂತರ ಮೇಲೆ ಅದರಲ್ಲೂ ವಿಶೇಷವಾಗಿ ಅತ್ಯಂತ ಸಂಪತ್ತನ್ನು

ಹೊಂದಿರುವವರ ವರ್ತನೆಯ ಮೇಲೆ ಇದರ ಪರಿಣಾಮ ಅಗಾಧವಾಗಿ ಆಗುತ್ತದೆ.

ಈಗಾಗಲೇ ಆರ್ಥಿಕತೆ ಹಿನ್ನಡೆ ಅನುಭವಿಸುತ್ತಿರುವ ಸಂದರ್ಭದಲ್ಲಿ, ಆರ್ಥಿಕ ಚಟುವಟಿಕೆಯ ಈ ದಿಢೀರ್ ಕುಸಿತವನ್ನು ಸರ್ಕಾರ ಹೇಗೆ ನಿಭಾಯಿಸುತ್ತದೆ? ಸರ್ಕಾರದ ಮುಂದಿರುವ ಎರಡು ಸಾಧನಗಳು:– ಹಣಕಾಸು ನೀತಿ ಮತ್ತು ವಿತ್ತೀಯ ಕ್ರಮಗಳು.

ಇಂತಹ ಸಂದರ್ಭದಲ್ಲಿ ತೆಗೆದುಕೊಳ್ಳಬಹುದಾದ ಹಣಕಾಸು ಕ್ರಮಗಳು ದ್ರವ್ಯತೆಯನ್ನು ಹಾಗೂ ಸಾಲವನ್ನು ಹೆಚ್ಚಿಸುವುದರ ಮೂಲಕ ಬೇಡಿಕೆಯನ್ನು ಉತ್ತೇಜಿಸಬಹುದು. ಈಗಾಗಲೇ ಕಳೆದ ಕೆಲ ತಿಂಗಳಲ್ಲಿ ರಿಪೋದರವನ್ನು 135 ಪಾಯಿಂಟ್ ಅಷ್ಟು ಇಳಿಸಲಾಗಿದೆ. ಇನ್ನಷ್ಟು ಇಳಿಸುವುದಕ್ಕೆ ಅವಕಾಶವಿದೆ. ಆದರೆ ಒಂದು ಮಟ್ಟದಿಂದ ಮುಂದಕ್ಕೆ ಇದು ಕೆಲಸಮಾಡುವುದಿಲ್ಲ ಅನ್ನುವುದು ನಮ್ಮ ಅನುಭವ ಮಾತ್ರವಲ್ಲ, ಬಹುಪಾಲು ಇತರ ದೇಶಗಳ ಅನುಭವವೂ ಹೌದು. ಒಟ್ಟಾರೆ ಆರ್ಥಿಕತೆಯ ಪರಿಸರ ಮುಖ್ಯ. ಸಾಲ ಸಿಗಬಹುದು. ಅದರೆ ಅದನ್ನು ತೆಗೆದುಕೊಳ್ಳುವರೇ ಇಲ್ಲದೆ ಹೋಗಬಹುದು. ನೀವು ಕುದುರೆಯನ್ನು ನೀರಿನ ಹತ್ತಿರಕ್ಕೆ ಕರೆದುಕೊಂಡು ಹೋಗಬಹುದು, ಆದರೆ ಕುಡಿಸುವುದಕ್ಕೆ ಆಗುವುದಿಲ್ಲ. ದರವನ್ನು ತುಂಬಾ ಇಳಿಸಿಬಿಟ್ಟರೆ ಅದು ಉಳಿತಾಯ ಮಾಡುವವರ ಮೇಲೆ ಪರಿಣಾಮ ಮಾಡುತ್ತದೆ. ಬಡ್ಡಿ ಅನ್ನುವುದು ಎರಡು ಅಲುಗಿನ ಕತ್ತಿ.

ರಿಪೋ ದರವನ್ನು ಕಡಿಮೆ ಮಾಡುವುದರ ಆಚೆಗೆ ಕೇಂದ್ರ ಬ್ಯಾಂಕ್ ಯೋಚಿಸಬೇಕು. ಬ್ಯಾಂಕುಗಳು ಸಾಲ ಕೊಡುವಂತೆ ಮಾಡಲು ಒಂದಿಷ್ಟು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಸಹನೆ ಇರಬೇಕು. ವಾಣಿಜ್ಯ ಬ್ಯಾಂಕುಗಳೂ ಕೂಡ ಉತ್ಪಾದನಾ ಘಟಕಗಳು ಇಟ್ಟುಕೊಳ್ಳಬೇಕಾದ ದಾಸ್ತಾನಿಗೆ ಸಂಬಂಧಿಸಿದಂತೆ ನಿಯಮಗಳನ್ನು ಮಾರ್ಪಡಿಸುವ ನಿಟ್ಟಿನಲ್ಲಿ ಯೋಚಿಸಬೇಕು. ಬ್ಯಾಂಕುಗಳಿಗೆ ಕೊಡಬೇಕಾದ್ದನ್ನು ತಡವಾಗಿ ಕೊಡುವುದಕ್ಕೆ ಕಾನೂನುಗಳನ್ನು ಸಡಿಲ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಯೋಚಿಸಬೇಕು. ಇದು ಇಡೀ ವಾಣಿಜ್ಯ ಕ್ಷೇತ್ರಕ್ಕೆ ಅನ್ವಯವಾಗಬೇಕು. ಪರಿಸ್ಥಿತಿ ಸುಧಾರಿಸಿದ ಕೂಡಲೆ ಕಾನೂನನ್ನು ಬಿಗಿಗೊಳಿಸಲು ಅಧಿಕಾರಿಗಳು ಸಿದ್ಧರಿರಬೇಕು. ಇದು ಕೇವಲ ತಾತ್ಕಾಲಿಕ ಸಡಿಲಿಕೆ. ಬ್ಯಾಂಕುಗಳು ಹಾಗು ಸಾಲ ಪಡೆದವರು ಇದನ್ನು ತಾತ್ಕಾಲಿಕ ರಿಯಾಯಿತಿ ಎಂದೇ ನೋಡಬೇಕು.

ವಿತ್ತೀಯ ಕ್ರಮಗಳು ತುಂಬಾ ಮುಖ್ಯವಾಗುತ್ತವೆ. ಆದರೆ ಸರ್ಕಾರ ಇಲ್ಲೂ ಕೂಡ ಈಗಾಗಲೇ ಕಷ್ಟದ ಸ್ಥಿತಿಯಲ್ಲಿದೆ. ಹಾಗಾಗಿ ದೊಡ್ಡ ಮಟ್ಟದಲ್ಲಿ ಸರ್ಕಾರಕ್ಕೆ ಕ್ರಮತೆಗೆದುಕೊಳ್ಳುವುದು ಕಷ್ಟ. ಈ ಮಾಹಾಮಾರಿಯ ಪಿಡುಗು ಇಲ್ಲದೇ ಹೋಗಿದ್ದರೂ ಕೇಂದ್ರ ಸರ್ಕಾರದ ವಿತ್ತೀಯ ಕೊರತೆ 2019–20 ಹಾಗೂ 2020–21ರ ಬಜೆಟ್ಟಿನಲ್ಲಿ ಸೂಚಿಸಿದ್ದಕ್ಕಿಂತ ಹೆಚ್ಚಾಗುತ್ತಿತ್ತು. ವೈರಾಣುವಿನಿಂದ ಆರ್ಥಿಕ ಚಟುವಟಿಕೆಯಲ್ಲಿ ಆಗಿರುವ ಹಿನ್ನಡೆಯಿಂದಾಗಿ ಕಂದಾಯದ ಸಂಗ್ರಹ ಇನ್ನಷ್ಟು ಕಮ್ಮಿಯಾಗುತ್ತದೆ. ಸರ್ಕಾರದ ದೊಡ್ಡ ಪ್ರಮಾಣದ ಹೂಡಿಕೆಯ ಸಾಮರ್ಥ್ಯ ಕಡಿಮೆಯಾಗುತ್ತದೆ. ಆದರೆ ಕೆಲವನ್ನು 'ಮಾಡಲೇಬೇಕಾಗುತ್ತದೆ'. ವೈರಸ್ ವಿರುದ್ಧ ಹೋರಾಡಲೇ ಬೇಕು. ಅದನ್ನು ಮಣಿಸಲೇಬೇಕು. ರೋಗಿಗಳನ್ನು ಪರೀಕ್ಷಿಸುವ (ಈಗ ಪರೀಕ್ಷೆ ಮಾಡುತ್ತಿರುವ ಪ್ರಮಾಣ ಕಡಿಮೆ ಎಂದು ಕೆಲವರು ಆತಂಕ ವ್ಯಕ್ತಪಡಿಸಿದ್ದಾರೆ) ಹಾಗೂ ಚಿಕಿತ್ಸೆ ನೀಡುವ ಖರ್ಚನ್ನು ಭರಿಸಲೇಬೇಕು. ಈಗ ಖಾಸಗೀ ಆಸ್ಪತ್ರೆಗಳಿಗೆ ಪರೀಕ್ಷಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಪರೀಕ್ಷೆಗೆ 4500 ರೂಪಾಯಿ ಆಗುತ್ತದೆ ಎಂದು ಹೇಳಲಾಗಿದೆ. ಹಾಗೆ ಪರೀಕ್ಷೆ ಮಾಡಿಸಿಕೊಳ್ಳಬೇಕಾದವರ ಸಂಖ್ಯೆ ಸಾವಿರಾರು ಆದರೆ ಒಟ್ಟು ಖರ್ಚು ಗಣನೀಯವಾಗುತ್ತದೆ. ಅದು ಉತ್ಪ್ರೇಕ್ಷೆ ಅನ್ನಿಸಬಹುದು. ಇಟಲಿಯಲ್ಲಿ ಆದ ದುರಂತವನ್ನು ತಪ್ಪಿಸಿಕೊಳ್ಳಲು ನಾವು ಸಿದ್ಧರಿರಬೇಕು. ನಮ್ಮ ಮೊದಲ ಆದ್ಯತೆ ಆರೋಗ್ಯ ಸಂಬಂಧೀ ಖರ್ಚುಗಳನ್ನು ಭರಿಸಲು ಎಲ್ಲಾ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಾಗಬೇಕು. ಅದರಲ್ಲಿ ಅದಕ್ಕೆ ಪೂರಕವಾದ ಮಾಸ್ಕ್‌ಗಳು, ಸ್ಯಾನಿಟೈಸರುಗಳು ಹಾಗೂ ಪರೀಕ್ಷೆಗೆ ಬೇಕಾದ ವಸ್ತುಗಳು ಇವೆಲ್ಲಾ ಸೇರಿರುತ್ತವೆ. ನಮ್ಮ ಮುಂದಿರುವ ಸವಾಲು ಕೇವಲ ವಿತ್ತೀಯ ಸವಾಲಲ್ಲ. ಅದು ಸಂಘಟನಾತ್ಮಕ ಸವಾಲು ಕೂಡ.

ಉದ್ಯೋಗ ಕ್ಷೇತ್ರ

ಕೆಲಸ ಕಳೆದುಕೊಂಡವರ ಬಗ್ಗೆ ತೀವ್ರ ಕಾಳಜಿಯನ್ನು ವ್ಯಕ್ತಪಡಿಸಲಾಗಿದೆ. ಅವರೆಲ್ಲಾ ಹೆಚ್ಚಾಗಿ ದಿನಗೂಲಿ ನೌಕರರು ಮತ್ತು ಹಂಗಾಮಿ ನೌಕರರು. ಹಲವು ವಲಸೆ ಕಾರ್ಮಿಕರು ಈಗಾಗಲೇ ತಮ್ಮ ರಾಜ್ಯಗಳಿಗೆ ಮರಳಿದ್ದಾರೆ. ನಾವು ವಾಣಿಜ್ಯ ಉದ್ದಿಮೆಗಳನ್ನು ಹಂಗಾಮಿ ಕಾರ್ಮಿಕರೂ ಸೇರಿದಂತೆ ಎಲ್ಲರನ್ನು ಹಾಗೆ ಉಳಿಸಿಕೊಂಡ ಕನಿಷ್ಠ ಹಣವನ್ನಾದರೂ ನೀಡಬೇಕು ಎಂದು ಮನವಿ ಮಾಡಿಕೊಳ್ಳಬೇಕು. ಸರ್ಕಾರ ಅಂತಹ ವಾಣಿಜ್ಯ ಘಟಕಗಳಿಗೆ ಒಂದಿಷ್ಟು ಪರಿಹಾರ ಕೊಡುವ ನಿಟ್ಟಿನಲ್ಲಿ ಯೋಚಿಸಬಹುದು. ನಿಜ, ಇದು ಅಪಬಳಕೆ ಆಗುವ ಸಾಧ್ಯತೆ ಇದೆ. ಪ್ರಯಾಣದಂತಹ ಕ್ಷೇತ್ರಗಳಲ್ಲಿ ಸರ್ಕಾರಕ್ಕೆ ಬರಬೇಕಾದ ಬಾಕಿಯನ್ನು ತಡವಾಗಿ ಕೊಡಲು ಅವಕಾಶ ಮಾಡಿಕೊಡಬಹುದು.

ವ್ಯಕ್ತಿಗಳಿಗೆ ನಗದನ್ನು ವರ್ಗಾಯಿಸುವುದಕ್ಕೆ ಸಂಬಂಧಿಸಿದಂತೆ ಚರ್ಚೆಗಳು ನಡೆದಿವೆ. ಗ್ರಾಮೀಣ ರೈತರಿಗೆ ಸಂಬಂಧಿಸಿದಂತೆ ಈಗಾಗಲೇ ಅಂತಹ ಒಂದು ಕಾರ್ಯಕ್ರಮ ಇದೆ. ನಿಜ, ಅವುಗಳಿಗೆ ಒಂದಿಷ್ಟು ಮಿತಿಗಳಿವೆ. ಆದರೂ ಜಾರಿಯಲ್ಲಿದೆ. ನಗದು ವರ್ಗಾವಣೆಯ ವ್ಯವಸ್ಥೆ ಪರಿಣಾಮಕಾರಿಯಾಗಬೇಕಾದರೆ ಅದು ಸಾರ್ವತ್ರಿಕವಾಗಿರಬೇಕು. ಆದರೆ ಸರ್ಕಾರದ ಎಲ್ಲಾ ಶಕ್ತಿಯೂ ವೈರಾಣವನ್ನು ಮಣಿಸುವುದಕ್ಕೆ ವ್ಯಯಿಸಬೇಕಾಗಿರುವುದರಿಂದ ಸಾರ್ವತ್ರಿಕ ನಗದು ವರ್ಗಾವಣೆಗೆ ಒಂದು ವ್ಯವಸ್ಥೆಯನ್ನು ಸ್ಥಾಪಿಸುವುದು ಪ್ರಯತ್ನದ ಡೈವರ್ಷನ್ ಆಗಬಹುದು. ಒಟ್ಟಾರೆಯಾಗಿ ನಗದು ವರ್ಗಾವಣೆಯಿಂದ ಸರ್ಕಾರಕ್ಕೆ ಆಗಬಹುದಾದ ಹೊರೆ ಪ್ರತಿಯೊಬ್ಬರಿಗೆ ಕೊಡಬೇಕಾದ ಹಣ ಹಾಗೂ ಅದರ ಅವಧಿಯನ್ನು ಅವಲಂಬಿಸಿರುತ್ತದೆ.

ಈಗಾಗಲೇ ಸೂಚಿಸಿದಂತೆ, ಕೆಲಸಗಾರರನ್ನು ಕೆಲಸದಿಂದ ತೆಗೆಯಬೇಡಿ ಎಂದು ಸರ್ಕಾರ ಎಲ್ಲಾ ವಾಣಿಜ್ಯ ಘಟಕಗಳಿಗೆ ಸಲಹೆ ನೀಡಬೇಕು. ಅಂತಹ ಉದ್ದಿಮೆಗಳಿಗೆ ಸ್ವಲ್ಪ ಪ್ರಮಾಣದ ನೆರವನ್ನು ಸರ್ಕಾರ ನೀಡಬೇಕು. ಎಲ್ಲಾ ಬಡವರಿಗೆ ಹೆಚ್ಚಿನ ಆದಾಯ ಕೊಡುವ ಯೋಜನೆಯನ್ನು ತಕ್ಷಣದ ಸಮಸ್ಯೆ ಪರಿಹಾರವಾದೊಡನೆ ಯೋಚಿಸಬಹುದು. ಪ್ರವಾಹ ಹಾಗೂ ಕ್ಷಾಮದ ಸಮಯದಲ್ಲಿ ಮಾಡುವಂತೆ ನೊಂದವರಿಗೆ ಆಹಾರ ಹಾಗೂ ಇತರ ಅವಶ್ಯಕತೆಗಳನ್ನು ಪೂರೈಸಬೇಕು.

ವಿತ್ತೀಯ ಕೊರತೆ ಗಣನೀಯವಾಗಿ ಏರುವುದು ಅನಿವಾರ್ಯ. ಬಡ್ಡಿಯ ದರ ಕಡಿಮೆ ಉಳಿಯಬೇಕಾದರೆ ಹೆಚ್ಚು ಸಾಲ ಪಡೆದುಕೊಳ್ಳಬೇಕು. ಇದಕ್ಕೆ ಕೇಂದ್ರ ಬ್ಯಾಂಕಿನ ನೆರವು ಬೇಕು. ಕೊರತೆಯ ನಗದೀಕರಣ ಅನಿವಾರ್ಯ. ದ್ರವ್ಯತೆಯನ್ನು ಹೆಚ್ಚಿಸುವುದರಿಂದ ಬರುವ ವರ್ಷಕ್ಕೆ ಸಮಸ್ಯೆಗಳು ಹೆಚ್ಚಾಗುತ್ತವೆ. ಹಣದುಬ್ಬರ ಏರಬಹುದು. ಸರ್ಕಾರ ಇವೆಲ್ಲವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆದರೂ ಸರ್ಕಾರ ಹಿಂಜರಿಯಬಾರದು. ವೈರಾಣುವನ್ನು ಎದುರಿಸುವಲ್ಲಿ ದೊಡ್ಡ ಪ್ರಮಾಣದಲ್ಲಿ ಮುನ್ನುಗ್ಗಬೇಕು. ಇದು ಸರ್ಕಾರದ ಮೊದಲ ಆದ್ಯತೆ.

C. Rangarajan is Former Chairman of the Economic Advisory Council to the Prime Minister and Former Governor, Reserve Bank of India

ಜನ-ಕೇಂದ್ರಿತ ಸ್ಪಂದನ ಬೇಕು

ಪಿನರಾಯಿ ವಿಜಯನ್
ಮುಖ್ಯ ಮಂತ್ರಿಗಳು, ಕೇರಳ



ಕೋವಿಡ್-19 ಮಹಾಮಾರಿಯ ವಿರುದ್ಧದ ಹೋರಾಟದಲ್ಲಿ ಭಾರತ ಇಂದು ಅತ್ಯಂತ ಸಂಕಷ್ಟದ ಹಂತದಲ್ಲಿದೆ. ಲಾಕ್‌ಡೌನ್ ಅನಿವಾರ್ಯವಾಗಿದೆ. ಪ್ರಧಾನ ಮಂತ್ರಿಯವರು ಘೋಷಿಸುವುದಕ್ಕೂ ಮೊದಲೇ ಕೇರಳವೂ ಸೇರಿದಂತೆ ಸುಮಾರು 21 ರಾಜ್ಯಗಳು ಲಾಕ್ ಡೌನ್ ಘೋಷಿಸಿದ್ದವು. ಈ ಭೀಕರ ಬಿಕ್ಕಟ್ಟನ್ನು ಎದುರಿಸುವಲ್ಲಿ ನಾವೆಲ್ಲರೂ ಒಂದಾಗಿ ನಿಲ್ಲುವುದು ತಂಬಾ ಮುಖ್ಯ.

ನಾವು ಲಾಕ್‌ಡೌನ್ ಹಾದಿಯಲ್ಲಿ ಸಾಗುತ್ತಿರುವ ಸಂದರ್ಭದಲ್ಲಿ ರಾಜ್ಯಕ್ಕೆ ಬಹಳವಾದ ಮುಖ್ಯವಾದ ಜವಾಬ್ದಾರಿಗಳಿವೆ. ಜನರ ಘನತೆ ಹಾಗೂ ಅವರ ಹಕ್ಕನ್ನು ರಕ್ಷಿಸುತ್ತಲೇ ಲಾಕ್‌ಡೌನ್ ಅನ್ನು ಜಾರಿಗೊಳಿಸುವುದರಲ್ಲಿ ಅದು ಮುಂದಾಳತ್ವ ವಹಿಸಬೇಕು. ಜನರಲ್ಲಿ ಲಾಕ್‌ಡೌನ್ ಸಮಯದಲ್ಲಿ ಏನು ಮಾಡಬೇಕು ಏನು ಮಾಡಬಾರದು ಎಂಬುದರ ಬಗ್ಗೆ ಅರಿವು ಮೂಡಿಸಬೇಕು. ಸಮಾಜದ ಎಲ್ಲಾ ವರ್ಗದ ಜನರನ್ನು ತನ್ನೊಟ್ಟಿಗೆ ತೆಗೆದುಕೊಂಡು ಹೋಗುವುದಕ್ಕೆ ಅದಕ್ಕೆ ಸಾಧ್ಯವಾಗಬೇಕು.

ಆರೋಗ್ಯ ವ್ಯವಸ್ಥೆ 24 ಗಂಟೆಯೂ ಕೆಲಸ ಮಾಡುತ್ತಿರಬೇಕು. ಅದೇ ಸಮಯದಲ್ಲಿ ಜನತೆ ಕೂಡ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕು. ಲಾಕ್‌ಡೌನ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಒಂದೊಂದು ಜೀವವೂ ಮುಖ್ಯ. ನಾವು ಸ್ವಲ್ಪ ಎಚ್ಚರ ತಪ್ಪಿದರೂ ಸೋಂಕಿತರ ಸಂಖ್ಯೆ ತಕ್ಷಣ ಏರಿಬಿಡಬಹುದು. ನಾವು ಈವರೆಗೆ ಸಾಧಿಸಿದ್ದೆಲ್ಲಾ ವ್ಯರ್ಥವಾಗಿಬಿಡಬಹುದು.

ಲಾಕ್‌ಡೌನ್ ಸಮಯವನ್ನು ಕೇಂದ್ರ ಕೇವಲ ಸೋಂಕಿನ ಸರಪಳಿಯನ್ನು ತುಂಡರಿಸುವುದಕ್ಕೆ ಮಾತ್ರವಲ್ಲ ಸೊಂಕಿತರನ್ನು ಒಟ್ಟಾರೆ ಜನರಿಂದ ಪ್ರತ್ಯೇಕಿಸಿಟ್ಟು ನೋಡಿಕೊಳ್ಳುವುದಕ್ಕೆ ಗಮನಕೊಡಬೇಕು. ತೀವ್ರ ನಿಗಾ ಬೇಕಾದವರೂ ಸೇರಿದಂತೆ ವಿವಿಧ ಹಂತದಲ್ಲಿರುವ ಸೋಂಕಿತರಿಗೆ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಕೇಂದ್ರ ಕಾರ್ಯೋನ್ಮುಖವಾಗಬೇಕು. ಪ್ರಧಾನ ಮಂತ್ರಿಯವರು 15,000 ಕೋಟಿ ರೂಪಾಯಿಗಳನ್ನು ತುರ್ತು ಸಂದರ್ಭಕ್ಕೆ ಮೀಸಲಿಟ್ಟಿರುವುದನ್ನು ಸ್ವಾಗತಾರ್ಹ. ಆದರೆ ಈ ಹಣವನ್ನು ಹೇಗೆ ಖರ್ಚು ಮಾಡಲಾಗುತ್ತದೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ಮೂಲಭೂತ ಸೌಲಭ್ಯವನ್ನು ಹೆಚ್ಚಿಸುವುದರಲ್ಲಿ ರಾಜ್ಯಗಳಿಗೆ ಹೇಗೆ ನೆರವು ನೀಡಲಾಗುತ್ತದೆ ಎನ್ನುವುದು ಸ್ಪಷ್ಟವಾಗಬೇಕು.

ಆರೋಗ್ಯಕ್ಕಾಗಿ ಒಟ್ಟಾಗಿ ಕೆಲಸ ಮಾಡೋಣ

ಕೇಂದ್ರ ಸರ್ಕಾರ ಮಾರ್ಚ್ 26ರಂದು ಹಲವು ಪ್ರಮುಖ ಕ್ರಮಗಳನ್ನು ಘೋಷಿಸಿದೆ. ನಾನು ಈ ಪರಿಹಾರ ಕ್ರಮಗಳನ್ನು ಸ್ವಾಗತಿಸುತ್ತೇನೆ. ಬರುವ ದಿನಗಳಲ್ಲಿ ಇದನ್ನು ಮತ್ತಷ್ಟು ವಿಸ್ತರಿಸಬೇಕೆಂದು ಒತ್ತಾಯಿಸುತ್ತೇನೆ.

ನಾವು ರಾಷ್ಟ್ರ ಮಟ್ಟದಲ್ಲಿ ಇದಕ್ಕೆ ಸಾಕಷ್ಟು ತಯಾರಿಯನ್ನು ಮಾಡಿಕೊಳ್ಳಬೇಕು. ಅದೇ ಸಮಯದಲ್ಲಿ ಆರೋಗ್ಯ ರಾಜ್ಯದ ವಿಷಯ ಅನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ವಿತ್ತೀಯ ಫೆಡರಿಲಿಸಂ, ವಿಕೇಂದ್ರಿತ ಆಡಳಿತ ಮತ್ತು ತಮ್ಮ ಅವಶ್ಯಕತೆ ಹಾಗೂ ಬೇಕುಗಳನ್ನು ನೋಡಿಕೊಳ್ಳಲು ರಾಜ್ಯಗಳಿಗೆ ನಮ್ಯತೆ ಬೇಕು. ಇವೆಲ್ಲಾ ವೈರಾಣು ವಿರುದ್ಧದ ಹೋರಾಟದ ಭಾಗವಾಗಬೇಕು. ಲಾಕ್‌ಡೌನ್ ನಿಭಾಯಿಸುವುದು ಮತ್ತು ನಂತರದ ಆರ್ಥಿಕ ಮರುಚೇತರಿಕೆ ಕೂಡ ಈ ಹೋರಾಟದ ಭಾಗವೇ. ಕೇಂದ್ರ ಸರ್ಕಾರವು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಂತ್ರಿಗಳನ್ನೊಳಗೊಂಡ ಸಲಹಾ ಸಮಿತಿಯನ್ನು ಸ್ಥಾಪಿಸಬೇಕು. ಎದುರಾಗುತ್ತಿರುವ ತೊಂದರೆಗಳನ್ನು ಹಾಗೂ ಪ್ರಗತಿಯನ್ನು ಪರಿಶೀಲಿಸುವುದು ಅದರ ಕೆಲಸವಾಗಬೇಕು. ವಿವಿಧ ರಾಜ್ಯಗಳ ನನ್ನ ಸಹದ್ಯೋಗಿಗಳು ವಿಭಿನ್ನ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ನಮಗೆ ಒಬ್ಬರಿಂದ ಒಬ್ಬರಿಗೆ ಪರಸ್ಪರ ಕಲಿಯುವುದಕ್ಕೆ ಹಲವು ಅಂಶಗಳಿರಬಹುದು.

ಕೇರಳದಲ್ಲಿ ನಾವು ಅವಶ್ಯಕ ವಸ್ತುಗಳು ದೊರೆಯುವಂತೆ ಮಾಡಲು ಬಹಳ ಪ್ರಯತ್ನ ಮಾಡುತ್ತಿದ್ದೇವೆ. ಅದರಲ್ಲೂ ವಿಶೇಷವಾಗಿ ಆಹಾರ ಮತ್ತು ಔಷಧಿಗಳು ಸಿಗುವಂತೆ ಮಾಡಲು ತುಂಬಾ ಪ್ರಯತ್ನಿಸುತ್ತಿದ್ದೇವೆ. ವಿಶೇಷವಾಗಿ ದುರ್ಬಲ ವರ್ಗದ ಜನರನ್ನು ರಕ್ಷಿಸುವ ಪ್ರಯತ್ನ ನಡೆದಿದೆ. ಶಾಲೆಗಳನ್ನು ಮಾರ್ಚ್ 10ರಂದು ಕೇರಳದ ಸರ್ಕಾರ ಮುಚ್ಚಿದ ಕೂಡಲೆ ನಮ್ಮ ಮಹಿಳಾ ಹಾಗು ಶಿಶು ಅಭಿವೃದ್ಧಿ ಇಲಾಖೆಯು ಪ್ರತಿಯೊಬ್ಬ ಶಾಲಾ ಪೂರ್ವ ವಿದ್ಯಾರ್ಥಿಗಳಿಗೆ ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ಅಕ್ಕಿ, ಬೇಳೆ, ಗೋಧಿ ತರಿ, ಕಡಲೆಕಾಯಿ, ಬೆಲ್ಲ, ಎಣ್ಣೆ ಇವುಗಳನ್ನು ದೊರಕುವಂತೆ ವ್ಯವಸ್ಥೆ ಮಾಡಿತು. ಗರ್ಭಿಣಿ ಹಾಗು ಹಾಲುಕುಡಿಸುತ್ತಿರುವ ತಾಯಂದಿರಿಗೆ ಮತ್ತು ಆರು ತಿಂಗಳಿನಿಂದ ಮೂರು ವರ್ಷದ ಮಕ್ಕಳಿಗೆ ಆರು ತಿಂಗಳಿಗೆ ಬೇಕಾಗುವ “ಮನೆಗೆ ರೇಷನ್” ವಿತರಿಸಲು ಕ್ರಮ ತೆಗೆದುಕೊಳ್ಳಲಾಯಿತು.

ಈ ಯೋಜನೆಯನ್ನು 33,115 ಕೇಂದ್ರಗಳಲ್ಲಿ ತರಲಾಗಿದೆ. ನಮಗೆ 8.3 ಲಕ್ಷ ಜನರ ಪೋಷಕಾಂಶಗಳ ಅವಶ್ಯಕೆಯನ್ನು ಪೂರೈಸಲು ಸಾಧ್ಯವಾಗಿದೆ. ಕೆಲವು ಅಂಗನವಾಡಿಗಳಲ್ಲಿ ತರಕಾರಿ ಹಾಗೂ ಮೊಟ್ಟೆಗಳನ್ನು ಕೂಡ ವಿತರಿಸಲಾಗಿದೆ. ಭಾರತದ ಸುಪ್ರೀಂ ಕೋರ್ಟು ಕೂಡ ಈ ದಿಕ್ಕಿನಲ್ಲಿ ನಮ್ಮ ರಾಜ್ಯ ಮಾಡಿರುವ ಪ್ರಯತ್ನವನ್ನು ಮೆಚ್ಚಿಕೊಂಡಿದೆ. ಇದು

ನಮಗೆ ಸಂತೋಷದ ವಿಷಯ.

ಕೇರಳ ಮಾದರಿ

ಕೇರಳ ಪ್ರತಿಯೊಬ್ಬರಿಗೂ ಅವಶ್ಯಕ ಸಾಮಾನುಗಳು ಹಾಗೂ ಸೇವೆಗಳು ದೊರಕುವ ಹಾಗೆ ನೋಡಿಕೊಳ್ಳುತ್ತದೆ. ಲಾಕ್‌ಡೌನ್ ಸಮಯದಲ್ಲಿ ಒಬ್ಬನೇ ಒಬ್ಬ ವ್ಯಕ್ತಿಯೂ ಹಸಿದುಕೊಂಡು ಇರುವುದಕ್ಕೆ ನಮ್ಮ ಸರ್ಕಾರ ಬಿಡುವುದಿಲ್ಲ. ನಮ್ಮ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಿದ್ದೇವೆ. ಆದ್ಯತೆಯ ಪಟ್ಟಿಯಲ್ಲಿ ಬಾರದ ಎಲ್ಲಾ ಕುಟುಂಬಗಳಿಗೂ ಪ್ರತಿತಿಂಗಳು ಪುಕ್ಕಟೆ 15 ಕೆಜಿ ಆಹಾರ ಪದಾರ್ಥ ಸಿಗುವಂತೆ ನೋಡಿಕೊಳ್ಳಲಾಗಿದೆ. ಇದನ್ನು ಆದ್ಯತೆಯ ಗುಂಪಿನಲ್ಲಿ ಬರುವ ಪ್ರತಿ ಕುಟುಂಬಗಳಿಗೆ ನೀಡುವ 35 ಕೆಜಿ ಜೊತೆಗೆ ಹೆಚ್ಚುವರಿಯಾಗಿ ನೀಡಲಾಗುತ್ತದೆ. ಕ್ವಾರಂಟೈನಲ್ಲಿರುವ ಜನರಿಗೆ ಅವಶ್ಯಕತೆ ಬಂದ ಸಂದರ್ಭದಲ್ಲಿ ಸರ್ಕಾರ ಈಗಾಗಲೇ ಅಂತಹ ಕಿಟ್ಟನ್ನು ವಿತರಿಸುತ್ತಿದೆ. ಪಡಿತರ ಅಂಗಡಿಗಳಲ್ಲಿ ಹಾಗೂ ದಿನಸಿ ಅಂಗಡಿಗಳಲ್ಲಿ ಜನ ಗುಂಪು ಸೇರುವುದನ್ನು ತಪ್ಪಿಸಲು ಮನೆಮನೆಗೆ ಅವುಗಳನ್ನು ವಿತರಿಸಲು ವ್ಯವಸ್ಥೆ ಮಾಡಲಾಗಿದೆ. ಅದನ್ನು ತಳಮಟ್ಟದಲ್ಲಿ ಜಾರಿಗೊಳಿಸಲು ನಾವು ನಮ್ಮ ಸ್ಥಳೀಯ ಸಂಘಟನೆಗಳನ್ನು ಬಳಸಿಕೊಳ್ಳಲು ಯೋಚಿಸುತ್ತಿದ್ದೇವೆ. ರಾಜ್ಯ ಸರ್ಕಾರದ ಕ್ಯಾಂಟೀನ್ ಮೂಲಕ ಪ್ಲೇಟಿಗೆ 20 ರೂಪಾಯಿಯಂತೆ ಪೌಷ್ಟಿಕ ಊಟವನ್ನು ಕೊಡಲಾಗುತ್ತಿದೆ.

ನಮ್ಮ ಕೈಗಾರಿಕಾ ಇಲಾಖೆಯು ತನ್ನ ಸರ್ಕಾರಿ ವಲಯದ ಉದ್ದಿಮೆಗಳಿಗೆ ಹ್ಯಾಂಡ್ ಸ್ಯಾನಿಟೈಸರ್ ಬಾಟಲ್ಲುಗಳ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸಲು ಸೂಚಿಸಲಾಗಿದೆ. ಅವು ನಮ್ಮ ಕರೆಗೆ ತಕ್ಷಣ ಸ್ಪಂದಿಸಿ ಪ್ರತಿ ದಿನ ಒಂದು ಲಕ್ಷ ಬಾಟಲ್ಲುಗಳನ್ನು ಹೆಚ್ಚುವರಿಯಾಗಿ ತಯಾರಿಸುತ್ತಿವೆ. ಕೋವಿಡ್–17 ಚಿಕಿತ್ಸೆಗೆ ಬೇಕಾದ ಔಷಧಿಗಳ ಕೊರತೆ ಬೀಳದಂತೆ ನೋಡಿಕೊಳ್ಳಲು ಕೇರಳ ಸರ್ಕಾರದ ಡ್ರಗ್ಸ್ ಅಂಡ್ ಫಾರ್ಮಸ್ಯುಟಿಕಲ್ ಲಿಮಿಟೆಡ್ ಅವರಿಗೆ 25 ಕೋಟಿ ರೂಪಾಯಿಗಳನ್ನು ನೀಡಿದೆ. ನಮ್ಮ ಜೈಲುವಾಸಿಗಳನ್ನು, ಸರ್ಕಾರದ ಕುಟುಂಬಶ್ರೀ ಯೋಜನೆಯಡಿಯಲ್ಲಿ ಬರುವ ಸ್ವಸಹಾಯ ಗುಂಪುಗಳನ್ನು, ನಮ್ಮ ರಬ್ಬರ್ ಪಾರ್ಕಿನಿಂದ ಕೆಲಸ ಮಾಡುತ್ತಿರುವ ಉದ್ದಿಮೆಗಳನ್ನು ಎನ್95, ಎರಡು ಪದರದ ಮತ್ತು ಮೂರು ಪದರದ ಮಾಸ್ಕ್‌ಗಳನ್ನು ಮತ್ತು ಸರ್ಜಿಕಲ್ ಗ್ಲೌಸುಗಳನ್ನು ತಯಾರಿಸಲು ಸಂಘಟಿಸಲಾಗಿದೆ. ನಮ್ಮ ಖಾದೀ ಸರ್ಕಾರಿ ಉದ್ದಿಮೆಗಳನ್ನು ಸಾಕಷ್ಟು ಪ್ರಮಾಣದ ಬೆಡಶೀಟುಗಳನ್ನು ಮತ್ತು ಟವೆಲ್ಲುಗಳನ್ನು ಆಸ್ಪತ್ರೆಗಳಲ್ಲಿ ಬಳಸಲು ತಯಾರಿಸಲು ಕೇಳಿಕೊಳ್ಳಲಾಗಿದೆ. ಅವುಗಳನ್ನು ಒಮ್ಮೆ ಮಾತ್ರ ಬಳಸಲಾಗುತ್ತದೆ. ರಾಜ್ಯದಲ್ಲಿ ಇಂಟರ್‌ನೆಟ್ ಸೇವಾದಾರರನ್ನು ಅವರ ಜಾಲದ ಸಾಮರ್ಥ್ಯವನ್ನು ಶೇಕಡ 30ರಿಂದ 40ರಷ್ಟು ಹೆಚ್ಚಿಸಲು ಕೇಳಿಕೊಂಡಿದ್ದೇವೆ. ಇದರಿಂದ ಜನ ಮನೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಲಾಕ್‌ಡೌನನ್ನು ಪೂರ್ಣ ಪ್ರಮಾಣದಲ್ಲಿ ಗಂಭೀರವಾಗಿ ಜಾರಿಗೊಳಿಸುವ ಸಮಯದಲ್ಲಿ, ನಮ್ಮ ಮುಂದಿರುವ ಉಳಿದ ಪ್ರಮುಖ ಸವಾಲುಗಳನ್ನು ನಾವು ಕಡೆಗಣಿಸಬಾರದು. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಬಡವರ ಸಂಖ್ಯೆ ತುಂಬಾ ಹೆಚ್ಚಿದೆ. ಅವರಲ್ಲಿ ಹೆಚ್ಚಿನವರು ಹಲವು ಆರ್ಥಿಕ ಹಾಗೂ ಸಾಮಾಜಿಕ ಶೋಷಣೆಗೆ ಒಳಗಾದವರು. ಅವರು ಅನೌಪಚಾರಿಕ ಹಾಗೂ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿದು ಜೀವನ ಸಾಗಿಸುತ್ತಿದ್ದಾರೆ. ಅಲ್ಲಿ ಅವರಿಗೆ ಉದ್ಯೋಗದ ರಕ್ಷಣೆಯಾಗಲಿ, ವರಮಾನದ ನಿರಂತರತೆಯಾಗಲಿ ಇಲ್ಲ. ಲಾಕ್‌ಡೌನ್ ಅವಧಿಯಲ್ಲಿ ಅವರ ಬದುಕನ್ನು ನಾವು ರಕ್ಷಿಸಬೇಕು.

ಆರ್ಥಿಕ ಕ್ರಮಗಳು

ಇದಕ್ಕೆ ಸಂಬಂಧಿಸಿದಂತೆ ಕೇರಳ ಸರ್ಕಾರವೂ 20,000 ಕೋಟಿ ರೂಪಾಯಿಯ ಆರ್ಥಿಕ ಮರುಚೇತರಿಕೆಯ ಪ್ಯಾಕೇಜನ್ನು ಘೋಷಿಸಿದೆ. ನಮಗೆ 2020 ಹಣಕಾಸು ವರ್ಷದಲ್ಲಿ 25,000 ಕೋಟಿ ರೂಪಾಯಗಳಷ್ಟು ಸಾಲ ಪಡೆದುಕೊಳ್ಳಲು ಅವಕಾಶವಿದೆ. ನಾವು ಕೇಂದ್ರ ಸರ್ಕಾರವನ್ನು ಈ ಸಾಲದ ಅರ್ಧ ಭಾಗವನ್ನು ಏಪ್ರಿಲ್ ತಿಂಗಳಲ್ಲೇ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದೇವೆ. ಅದು ಸರ್ಕಾರ ಘೋಷಿಸಿರುವ 20,000 ಕೋಟಿ ರೂಪಾಯಿಯ ಪ್ಯಾಕೇಜಿನ ಪ್ರಮುಖ ಮೂಲ. ಹೀಗೆ ಮೊದಲೇ ಖರ್ಚು ಮಾಡಿಬಿಡುವುದರಿಂದ ವರ್ಷದ ನಂತರದ ಭಾಗದಲ್ಲಿ ಖರ್ಚನ್ನು ಕಡಿಮೆ ಮಾಡಲಾಗುತ್ತದೆ ಎಂದು ಅರ್ಥವಲ್ಲ. ಅದಕ್ಕಾಗಿಯೇ ನಾವು ಕೇಂದ್ರ ಸರ್ಕಾರವನ್ನು ವಿತ್ತೀಯ ಜವಾಬ್ದಾರಿ ಹಾಗೂ ಬಜೆಟ್ ನಿರ್ವಹಣೆ ಕಾಯ್ದೆಯಡಿ ನಮ್ಯತೆಯನ್ನು ಒದಗಿಸಲು ಕೇಳಿಕೊಂಡಿದ್ದೇವೆ. ಕೇಂದ್ರವೂ ಅದಕ್ಕೆ ಅವಕಾಶ ಮಾಡಿಕೊಡುತ್ತದೆ ಎಂಬ ನಿರೀಕ್ಷೆಯಲ್ಲಿದ್ದೇವೆ.

ನಮ್ಮ 20,000 ಕೋಟಿ ರೂಪಾಯಿಯ ಆರ್ಥಿಕ ಪ್ಯಾಕೇಜನ್ನು ಸುಮಾರಾಗಿ ಕೆಳಕಂಡಂತೆ ಖರ್ಚುಮಾಡಲಾಗುತ್ತದೆ. ಪಿಂಚಣಿದಾರರ ಅನುಕೂಲಕ್ಕಾಗಿ ಎರಡು ತಿಂಗಳ ಭದ್ರತಾ ಪಿಂಚಣಿಯನ್ನು ಮುಂಗಡವಾಗಿ ನೀಡಲಾಗುತ್ತದೆ. ಬಿಪಿಎಲ್ ಮತ್ತು ಅಂತ್ಯೋದಯ ವಿಭಾಗಕ್ಕೆ ಪ್ರತಿ ಕುಟುಂಬಕ್ಕೆ 1000 ರೂಪಾಯಿ ನೀಡುವುದಕ್ಕಾಗಿ 1,320 ಕೋಟಿ ರೂಪಾಯಿಯನ್ನು ಮೀಸಲಿಡಲಾಗಿದೆ. 100 ಕೋಟಿ ರೂಪಾಯಿಗಳನ್ನು ಅವಶ್ಯಕತೆಯಿರುವ ಕುಟುಂಬಗಳಿಗೆ ಆಹಾರ ಪದಾರ್ಥಗಳನ್ನು ನೀಡಲು ಇಡಲಾಗಿದೆ. 50 ಕೋಟಿ ರೂಪಾಯಿಗಳನ್ನು ಪೌಷ್ಟಿಕ ಊಟಕ್ಕೆ 20 ರೂಪಾಯಿಯಂತೆ ರಿಯಾಯತಿಯಲ್ಲಿ ನೀಡಲು ಖರ್ಚುಮಾಡಲಾಗುತ್ತದೆ. ಸುಮಾರು 500 ಕೋಟಿ ರೂಪಾಯಿಯನ್ನು ಸಮಗ್ರ ಆರೋಗ್ಯ ಪ್ಯಾಕೇಜಿಗಾಗಿ ಮೀಸಲಿಡಲಾಗಿದೆ. ಅದರಲ್ಲಿ ಸಾರ್ವಜನಿಕ ಆರೋಗ್ಯ ಸೌಲಭ್ಯವನ್ನು ಸುಧಾರಿಸಲು ಮತ್ತು ರಾಜ್ಯವನ್ನು ಅಂತಹ ಸೋಂಕನ್ನು ಎದುರಿಸಲು ಸನ್ನದ್ದುಗೊಳಿಸಲು ಬಳಸಲಾಗುತ್ತದೆ. 2000 ಕೋಟಿ ಮೊತ್ತವನ್ನು ಕುಟುಂಬಶ್ರೀ ಯೋಜನೆಯಡೀ ಸಾಲವನ್ನು ವಿತರಿಸಲು ಇಡಲಾಗಿದೆ. 2000 ಕೋಟಿ ರೂಪಾಯಿಗಳನ್ನು ಉದ್ಯೋಗ ಖಾತ್ರಿ ಕಾರ್ಯಕ್ರಮವನ್ನು ವಿಸ್ತರಿಸಲು ಬಳಸಿಕೊಳ್ಳಲಾಗುತ್ತದೆ. ಇನ್ನು 14,000 ಕೋಟಿ ರೂಪಾಯಿಗಳನ್ನು ಏಪ್ರಿಲ್ 2020 ರವರೆಗೆ ರಾಜ್ಯ ಸರ್ಕಾರದ ಎಲ್ಲಾ ಬಾಕಿಗಳನ್ನು ಚುಕ್ತಾ







ಮಾಡಲು ಬಳಸಿಕೊಳ್ಳಲಾಗುತ್ತದೆ.

ಸಾರಿಗೆ ವಾಹನಗಳಿಗೂ ತೆರಿಗೆ ಕಟ್ಟಲು ಸಮಯ ಮಿತಿಯಲ್ಲಿ ರಿಯಾಯಿತಿಯನ್ನು ನೀಡಲಾಗಿದೆ. ಆಟೋ ಹಾಗೂ ಟ್ಯಾಕ್ಸಿಗಳಿಗೆ ಫಿಟ್‌ನೆಸ್ ಚಾರ್ಜ್ ಕಟ್ಟಲು ಕೂಡ ಇದೇ ರೀತಿಯ ರಿಯಾಯಿತಿ ತೋರಲಾಗಿದೆ. ತೊಂದರೆಗೊಳಗಾದ ಉದ್ದಿಮೆಗಳಿಗೆ ಕೂಡ ನೀರು ಹಾಗೂ ವಿದ್ಯುತ್ ಬಿಲ್ ಪಾವತಿಸಲು ಕೊನೆಯ ದಿನವನ್ನು ವಿಸ್ತರಿಸಲಾಗಿದೆ. ಸಿನಿಮಾ ಮಂದಿರಗಳಿಗೆ ಮನೋರಂಜನೆ ತೆರಿಗೆಯಲ್ಲಿ ಕಡಿತ ಮಾಡಲಾಗಿದೆ.

ಈ ಅವಧಿಯಲ್ಲಿ ವಿತ್ತೀಯ ಸಾಂಪ್ರದಾಯಿಕತೆಯನ್ನು ಕೈ ಬಿಡೋಣ. ವಿಶೇಷ ಸಂದರ್ಭದಲ್ಲಿ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿತ್ತೀಯ ಜವಾಬ್ದಾರಿ ಹಾಗೂ ಬಜೆಟ್ ನಿರ್ವಹಣೆ ಕಾಯ್ದೆಯ ನಿಯಮಗಳನ್ನು ಬದಿಗಿಡಬೇಕಾಗುತ್ತದೆ. ಜನರ ಹಾಗೂ ಅವರ ಜೀವನೋಪಾಯವನ್ನು ಲಾಕ್‌ಡೌನ್ ಅವಧಿಯಲ್ಲಿ ರಕ್ಷಿಸುವುದಕ್ಕಾಗಿ ಆರ್ಥಿಕ ಉತ್ತೇಜನ ತುಂಬಾ ತುರ್ತಾಗಿ ಆಗಬೇಕು.

ಇಂದು ಮಾನವೀಯತೆಯ ಉಳಿತು ಮತ್ತು ರಕ್ಷಣೆಗಾಗಿ ನಡೆಯುತ್ತಿರುವ ಸಮರದಲ್ಲಿ ಜಗತ್ತು ಒಟ್ಟಾಗಿ ನಿಲ್ಲಬೇಕು. ನಾವು ಜಾಗತಿಕ ಹಾಗೂ ರಾಷ್ಟ್ರಗಳ ಅನುಭವದಿಂದ ಪಾಠ ಕಲಿಯಬೇಕು, ಶಕ್ತಿ ಪಡೆದುಕೊಳ್ಳಬೇಕು. ಅಷ್ಟೇ ಅಲ್ಲ ಕೋವಿಡ್ –19 ಮಹಾಮಾರಿಯ ಸವಾಲನ್ನು ಎದುರಿಸಲು ಜನ–ಕೇಂದ್ರಿತ ಪ್ರತಿಸ್ಪಂದನವನ್ನು ಸಂಘಟಿಸುವ ದಿಕ್ಕಿನಲ್ಲಿ ನಮ್ಮ ಪ್ರಯತ್ನವನ್ನು ದುಪ್ಪಟಗೊಳ್ಳಬೇಕು.

ಏನು ಮಾಡಬೇಕು?
9 ಸಲಹೆಗಳು

ಅಭಿಜಿತ್ ಬ್ಯಾನರ್ಜಿ ಹಾಗೂ ಡಫ್ಲೋ
ಮೂಲ : ಇಂಡಿಯನ್ ಎಕ್ಸ್‌ಪ್ರೆಸ್



ಭಾರತದ ವ್ಯಾಪಾರ ಮುಂದಿನ 21ದಿನ ಬಂದಾಗಿದೆ. ಇದು ಸಾಕಾಗದಿದ್ದರೆ ಇನ್ನಷ್ಟು ದಿನ ಮುಂದುವರಿಯುತ್ತದೆ. ಪ್ರತಿಯೊಬ್ಬರು ಮನೆಯಲ್ಲಿ ಉಳಿಯಬೇಕು. ಇದರರ್ಥ ನಿಜವಾಗಿ ಏನು ಅಂತ ಅರ್ಥಮಾಡಿಕೊಳ್ಳಲು ಹೆಣಗುತ್ತಿದ್ದೇವೆ. ಕಟ್ಟಡ ನಿರ್ಮಿಸುವ ವಲಸೆ ಕಾರ್ಮಿಕರು ಈಗ ಮುಚ್ಚಿರುವ ಕೆಲಸದ ಸ್ಥಳಗಳಲ್ಲಿ, ನಿರ್ಮಾಣದ ಸಮಯದಲ್ಲಿ ಕಟ್ಟಿಕೊಂಡಿದ್ದ ತಾತ್ಕಾಲಿಕ ಮನೆಗಳಲ್ಲಿ ಹೇಗೆ ಉಳಿಯುತ್ತಾರೆ? ಅಥವಾ ಈಗ ಅವರೆಲ್ಲಾ ಮನೆಗೆ ಹಿಂತಿರುಗಿ ಹೋಗಬೇಕಾ? ಈಗ ರೈಲುಗಳು ಬೇರೆ ಸಂಚರಿಸುತ್ತಿಲ್ಲ. ನೂರಾರು ಜನ ದೆಹಲಿಯಿಂದ ಬಿಹಾರಿಗೆ ನಡೆದುಕೊಂಡೇ ಹೋಗುತ್ತಿದ್ದಾರೆ ಅಂತ ಹೇಳುತ್ತಿದ್ದಾರೆ. ಅವರೆಲ್ಲಾ ದಾರಿಯಲ್ಲಿ ರಾತ್ರಿಯ ಹೊತ್ತು ಎಲ್ಲೋ ಗೊತ್ತಿಲ್ಲದ ಪುಟ್ಟ ಅನಧಿಕೃತ ಜಾಗದಲ್ಲಿ, ಇಕ್ಕಟ್ಟಿನಲ್ಲಿ ಮಲಗುತ್ತಾರೆ. ಆಗ ಅವರು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುತ್ತಾರೆ ಅಂತ ಭಾವಿಸಿಕೊಳ್ಳಬೇಕಾ? ದೆಹಲಿಯಿಂದ ದರ್ಭಂಗಾಕ್ಕೆ 25 ಚದುರ ಅಡಿ ಜಾಗವಿರುವ ಟ್ರಕ್ಕಿನಲ್ಲಿ 25ಜನ ಕುಳಿತುಕೊಂಡು ಹೋಗುವ ಬದಲು ನಡೆದುಕೊಂಡು ಹೋದರಲ್ಲಾ ಎಂದು ಅವರನ್ನು ದೂಷಿಸಬೇಕಾ?

ಮುಂಬೈನಲ್ಲಿ ಬಿಸಿಲು ಈಗಾಗಲೇ 30 ಡಿಗ್ರಿ ದಾಟಿದೆ, ಇನ್ನೂ ಏರುತ್ತಲೇ ಇದೆ. ಇಂತಹ ಪರಿಸ್ಥಿತಿಯಲ್ಲಿ ಈಗ ಅವರಿರುವ ಹತ್ತು ಅಡಿ ಅಗಲದ ಟಿನ್ ಗೂಡಿನಲ್ಲಿ 6 ಜನ ಒಟ್ಟೊಟ್ಟಿಗೆ ಮಲಗುವುದಕ್ಕೆ ಸಾಧ್ಯವೇ? ಅಷ್ಟರಲ್ಲೇ ಅವರು ಅಡುಗೆ ಮಾಡಿಕೊಳ್ಳಬೇಕು, ಅಲ್ಲೇ ಮಲಗಬೇಕು? ಸಂಜೆ ತಂಪಾದ ಮೇಲೆ ಹತ್ತಿರದ ಪಾರ್ಕಿಗೆ ಹೋಗುವ ಅವಕಾಶವೂ ಇಲ್ಲ, ಅಥವಾ ಫೋನ್ ಬಂದಾಗ ಹತ್ತಿರವಿರುವ ಮರದ ನೆರಳಿನಲ್ಲಿ ನಿಂತು ಮಾತನಾಡುತ್ತಿದ್ದ ಸುಖವೂ ಇಲ್ಲದಿರುವ ಈ ಹೊತ್ತಿನಲ್ಲಿ ಮುಂಬಯಿನಲ್ಲಿ ಧಾರವಿಯ ನಿವಾಸಿಗಳು ಊರಿಗೆ ಹೋಗಬೇಕೆಂದುಕೊಂಡರೆ ತಪ್ಪಾ?

ಇಟ್ಟುಕೊಂಡಿರುವ ಅಲ್ಪಸ್ವಲ್ಪ ಹಣ ಖಾಲಿಯಾದಾಗ ಏನು ಮಾಡುವುದು? ಬಹುಪಾಲು ಭಾರತೀಯರಿಗೆ ಕೆಲಸವಿಲ್ಲದೇ ಹೋದಾಗ ಖಾತರಿಯಾದ ವರಮಾನವಿರುವುದಿಲ್ಲ. ಉಳಿಸಿದ್ದೆಲ್ಲಾ ಖಾಲಿಯಾಗಿಬಿಟ್ಟ ಮೇಲೆ ಅವನೇನು ಮಾಡಬೇಕು? ಮನೆಯವರಿಗೆ ಊಟದ ಖರ್ಚಿಗಾಗಿಯೇ ಒಂದಿಷ್ಟು ಹಣ ಹುಡುಕಿಕೊಂಡು ಮನೆಯಿಂದಾಚೆಗೆ ಹೋದರೆ ಯಾರನ್ನು ಬಯ್ಯೋಣ? ಆಗ ಕೇವಲ ಗೊಂದಲವಷ್ಟೇ ಸಾಧ್ಯ? ಕರ್ನಾಟಕದಲ್ಲಿ ನಡೆಸಿದ ಒಂದು ದಿಢೀರ್ ಸಮೀಕ್ಷೆಯಿಂದ ಖಾಯಿಲೆಯ ಬಗ್ಗೆ ಜನರಿಗೆ ಸಾಕಷ್ಟು ಮಾಹಿತಿ ಇದೆ ಅನ್ನೋದು ತಿಳಿಯಿತು. ಆದರೆ ಏನು ಮಾಡಬಾರದು ಅನ್ನುವುದರ ಬಗ್ಗೆ ಮಾತ್ರ ಒಂದೇ ರೀತಿಯ ತಿಳುವಳಿಕೆ ಇಲ್ಲ. ಇದರರ್ಥ ಈಗ ಅನುಸರಿಸುತ್ತಿರುವ ಕ್ರಮ ತಪ್ಪು ಅಂತಲ್ಲ. ಆದರೆ ಈ ಕ್ರಮಗಳು ಪರಿಪೂರ್ಣವಾಗಿ ಅಥವಾ ಸರಿಯಾಗಿ ಜಾರಿಯಾಗದೇ ಇರಬಹುದು ಅಂತ ಅಷ್ಟೆ.

ಮುಂಬರುವ ದಿನಗಳಲ್ಲಿ ಪರಿಸ್ಥಿತಿ ಏನಗಬಹುದು, ಅದಕ್ಕೆ ಯಾವ ಕ್ರಮ ತೆಗೆದುಕೊಳ್ಳಬಹುದು ಎನ್ನುವುದಕ್ಕೆ ಸಂಬಂಧಿಸಿದಂತೆ ಆಚರಣೆಯಲ್ಲಿ ಕೆಲವು ಸಮಸ್ಯೆಗಳಿವೆ. ಅದರಿಂದ ಹಲವು ಪ್ರಮುಖ ಪರಿಣಾಮಗಳಾಗುತ್ತವೆ.

ಮೊದಲನೆಯದಾಗಿ ಲಾಕ್‌ಡೌನ್ ಪರಿಣಾಮಕಾರಿಯಾದರೂ ಮತ್ತು ಸೋಂಕಿನ ಏರಿಕೆಯ ರೇಖೆ ಸ್ಥಗಿತಗೊಂಡರೂ, ಖಾಯಿಲೆ ಹರಡುವುದು ನಿಂತರೂ, ಖಾಯಿಲೆ ತನ್ನ ಪರಿಧಿಯನ್ನು ವಿಸ್ತರಿಸುವುದು ನಿಲ್ಲುವುದಿಲ್ಲ. ಯಾಕೆಂದರೆ ನಮಗೆ ಗೊತ್ತಿಲ್ಲದ ಸೋಂಕಿಗೆ ಒಳಗಾದವರು ಇದ್ದಾರೆ. ಅವರು ಅದನ್ನು ಹೊಸಬರಿಗೆ ತಗಲಿಸುವ ಸಾಧ್ಯತೆ ಇದೆ. ಖಾಯಿಲೆ ಸುಮಾರು ಎರಡು ವಾರ ಸುಪ್ತವಾಗಿಯೇ (ಡಾರ್ಮೆಂಟ್) ಉಳಿದಿರಬಹುದೆಂಬ ಅಂದಾಜಿದೆ. ಖಾಯಿಲೆಯ ನೇರ ಸಂಪರ್ಕವಿರುವವರನ್ನು ಮಾತ್ರ ಪರೀಕ್ಷಿಸಲಾಗುತ್ತಿದೆ. ಅಗೋಚರ ವಾಹಕರನ್ನು ಗುರುತಿಸುವುದು ಸುಲಭವಲ್ಲ. ಹೀಗೆ ಅಗೋಚರವಾಗಿ ಉಳಿದಿರುವ ವಾಹಕರು ಹೆಚ್ಚಾಗಿಯೇ ಇರಬಹುದು. ದೆಹಲಿಯಿಂದ ಊರಿಗೆ ಬಂದವನಿಗೆ ಅದು ಇದೆ ಎಂದು ಗೊತ್ತಾಗುವ ಮೊದಲೇ ಮನೆಯವರಿಗೆಲ್ಲಾ ಹರಡಿಬಿಡಬಹುದು.

ಎರಡನೆಯದಾಗಿ ಕೆಲವು ಕಡೆಗಳಲ್ಲಿ ಒಮ್ಮೆ ಸೋಂಕು ಬಂದುಬಿಟ್ಟರೆ ಅದು ಹರಡುವುದನ್ನು ತಪ್ಪಿಸುವುದು ತುಂಬಾ ಕಷ್ಟವಾಗಬಹುದು. ಪರಿಣಾಮಕಾರಿಯಾಗಿ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದಾಗಲಿ, ಸಂಪೂರ್ಣ ಲಾಕ್‌ಡೌನ್ ಆಗಲಿ ಸಾಧಿಸುವುದು ಕಠಿಣವಾಗುತ್ತದೆ. ಉದಾಹರಣೆಗೆ ನಗರದಲ್ಲಿನ ಸ್ಲಮ್ಮುಗಳು.

ಮೂರನೆಯದಾಗಿ ಸೋಂಕು ಹಲವರಿಗೆ ತಗಲುವ ಮೊದಲೇ ಲಾಕ್‌ಡೌನ್ ಪ್ರಾರಂಭವಾಗಿರುವುದರಿಂದ ಹೆಚ್ಚು ಕಮ್ಮಿ ಯಾರಿಗೂ ಇಮ್ಯೂನಿಟಿ ಬೆಳೆದಿರುವ ಸಾಧ್ಯತೆ ಕಡಿಮೆ. ಅಂದರೆ ಮುಂದಿನ



ಮೂರು ವಾರಗಳಲ್ಲಿ ಸೋಂಕನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡದೇ ಹೋದರೆ ಕರ್ಫ್ಯೂ ತೆಗೆದ ತಕ್ಷಣ ಸೋಂಕು ವೇಗವಾಗಿ ಹರಡುವ ಸಾಧ್ಯತೆ ಹೆಚ್ಚು. ಅಂದರೆ ಕರ್ಫ್ಯೂ ಉಪಯೋಗವಿಲ್ಲ ಅಂತ ಅರ್ಥವಲ್ಲ. ಇದರಿಂದ ಸರಿಯಾಗಿ ಯೋಜನೆ ಮಾಡಿಕೊಳ್ಳುವುದಕ್ಕೆ ಸಮಯಾವಕಾಶ ಸಿಕ್ಕಿದೆ. ಮುಂದಿನ ಕೆಲವು ವಾರ ಸೋಂಕಿನ ಸಂಖ್ಯೆಯನ್ನು ಮಿತಗೊಳಿಸುವುದಕ್ಕೆ ಸಹಾಯವಾಗಿದೆ. ಆದರೆ ಸಮಸ್ಯೆ 21ದಿನವೂ ನಮ್ಮೊಂದಿಗೇ ಇರುತ್ತದೆ. ಅದರಿಂದ ನಾವು ಮುಂದಿನ ಕೆಲತಿಂಗಳಲ್ಲಿ ದೂರದ ಗ್ರಾಮೀಣ ಪ್ರದೇಶಗಳು ಸೇರಿದಂತೆ ದೇಶದ ಎಲ್ಲಾ ಕಡೆಗಳಲ್ಲಿ ಸೊಂಕು ಸ್ಫೋಟಗೊಳ್ಳುವ ಪರಿಸ್ಥಿತಿಯನ್ನು ಎದುರಿಸಲು ನಾವು ಸಿದ್ಧರಿರಬೇಕು. ಅದಕ್ಕಿಂತ ಹೆಚ್ಚಾಗಿ ಸೋಂಕು ಹರಡುವ ಸಾಧ್ಯತೆ ಇರುವ ಈ ಅಪಾಯಕಾರಿ ಪ್ರದೇಶಗಳೆಲ್ಲವೂ ಆರೋಗ್ಯ ವ್ಯವಸ್ಥೆ ತುಂಬಾ ದುರ್ಬಲವಾಗಿರುವ ಪ್ರದೇಶಗಳು. ಚೀನಾಗೆ ಹೋಲಿಸಿದರೆ ನಮ್ಮಲ್ಲಿ ಸರಾಸರಿ ತಲಾ 1/8 ಆಸ್ಪತ್ರೆಗಳಿವೆ. ಅದೇ ತುಂಬಾ ಆತಂಕಕಾರಿಯಾಗಿರುವ ವಿಷಯ. ಆದರೆ ಈ ಆರೋಗ್ಯ ಕೇಂದ್ರಗಳು ಕೂಡ ಮುಂದುವರಿದ ಪ್ರದೇಶಗಳಲ್ಲೇ ಕೇಂದೀಕೃತವಾಗಿವೆ.

ಭಾರತದಲ್ಲಿ ಇಂದಿಗೂ ಹೆಚ್ಚಿನಂಶ ಸೂಕ್ತ ವೈದ್ಯಕೀಯ ಶಿಕ್ಷಣವಿಲ್ಲದ ವೈದ್ಯರೇ ದಿನನಿತ್ಯದ ಆರೋಗ್ಯ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದಾರೆ. ಅವರಿಗೆ ಕನಿಷ್ಠ ಕೆಲವು ಪರಿಚಿತ ಖಾಯಿಲೆಗಳಿಗೆ ಏನು ಮಾಡಬೇಕೆಂಬುದು ಗೊತ್ತಿದೆ. ಕೋವಿಡ್–19 ಇರುವ ರೋಗಿಗಳು ಅವರ ಬಳಿಗೆ ಹೋಗುತ್ತಾರೆ. ಅವರಿಗೆ ಅದನ್ನು ಗುರುತಿಸುವುದಕ್ಕೇ ಆಗಲಿ ಅಥವಾ ಅದಕ್ಕೆ ಚಿಕಿತ್ಸೆಯಾಗಲೀ ಗೊತ್ತಿರುವುದಿಲ್ಲ. ಕೊನೆಗೆ ಅವರು ಆಸ್ಪತ್ರೆಗಳಿಗೆ ಹೋಗುತ್ತಾರೆ. ಹೋಗುವಾಗ ದಾರಿಯಲ್ಲಿ ಹಲವರಿಗೆ ಖಾಯಿಲೆ ಹರಡಿರುತ್ತಾರೆ.

ದುರಂತವನ್ನು ತಪ್ಪಿಸುವುದಕ್ಕೆ ಏನು ಮಾಡಬಹುದು?


ಮೊದಲನೆಯದಾಗಿ ಕುಟುಂಬದಲ್ಲಿ ಒಬ್ಬನಿಗಾದರೂ ಖಾಯಿಲೆಯ ಲಕ್ಷಣಗಳು ಗೊತ್ತಿರುವಂತೆ ನೋಡಿಕೊಳ್ಳಬೇಕು. ಎಲ್ಲಾ ರೀತಿಯ ಕ್ರಮಗಳನ್ನೂ, ಎಚ್ಚರಿಕೆಗಳನ್ನೂ ತೆಗೆದುಕೊಂಡರೂ ಕೆಲವರಿಗೆ ಸೋಂಕು ತಗುಲಬಹುದು ಎಂಬ ತಿಳುವಳಿಕೆ ಎಲ್ಲರಲ್ಲೂ ಮೂಡಬೇಕು. ಅವರನ್ನು ಹೊರಗಿಡುವುದಾಗಲಿ, ಮುಚ್ಚಿಡುವುದಾಗಲಿ ಆಗಬಾರದು. ಈಗ ಮುಖ್ಯವಾಗಿ ಬೇಕಾಗಿರುವುದು ನಿಷ್ಠಾವಂತ ವರದಿ.

ಮೂರನೆಯದಾಗಿ ವರದಿ ಮಾಡುವುದಕ್ಕೆ ವಿಭಿನ್ನ ದಾರಿಗಳು ಇರಬೇಕು. ಉದಾಹರಣೆಗೆ ಹಾಟ್‌ಲೈನ್, ಆಶಾ ಹೀಗೆ ಹಲವು ದಾರಿಗಳನ್ನು ಕಂಡುಕೊಳ್ಳಬೇಕು.

ನಾಲ್ಕನೆಯದಾಗಿ, ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೇವೆ ಸಲ್ಲಿಸುತ್ತಿರುವ ಎಲ್ಲರಿಗೂ ರೋಗಲಕ್ಷಣ ಗುರುತಿಸುವುದಕ್ಕೆ ತರಬೇತಿ ನೀಡಬೇಕು. ಮತ್ತು ಸೋಂಕಿನ ಸೂಚನೆಗಳು ಕಂಡೊಡನೆ ಅವರು ಸೂಕ್ತ ಅಧಿಕಾರಿಗಳಿಗೆ ವರದಿ ಮಾಡಬೇಕು.

ಐದನೆಯದಾಗಿ, ಹಾಗೆ ವರದಿಯಾದ ಪ್ರಕರಣಗಳನ್ನು ತಕ್ಷಣ ಕ್ರೋಢೀಕರಿಸಬೇಕು. ಆಗ ನಮಗೆ ಹೊಸ ಅಪಾಯಕಾರಿ ಸ್ಥಳಗಳು ಯಾವುವು ಎಂಬುದು ತಿಳಿಯುತ್ತದೆ. ದೇಶಾದ್ಯಂತ ದೊರೆತ ಅಂತಹ ಪುರಾವೆಗಳನ್ನು ಕ್ರೋಢೀಕರಿಸಿದಾಗ ಒಟ್ಟಾರೆ ಸೋಂಕು ಯಾವ ಹಾದಿಯಲ್ಲಿ ಸಾಗುತ್ತಿದೆ ಎಂಬುದು ತಿಳಿಯುತ್ತದೆ.

ಆರನೆಯದಾಗಿ, ಪ್ರತಿ ರಾಜ್ಯದಲ್ಲೂ ಆರೋಗ್ಯ ವೃತ್ತಿನಿರತರ, ವೈದ್ಯರ ಹಾಗೂ ನರ್ಸ್‌ಗಳ ಒಂದು ತಂಡವನ್ನು ಕಟ್ಟಬೇಕು. ಪ್ರತಿಯೊಂದು ತಂಡದಲ್ಲೂ ಸಾಕಷ್ಟು ಪರೀಕ್ಷೆಯ ಕಿಟ್ಟುಗಳು, ಸಾಧ್ಯವಾದರೆ ವೆಂಟಿಲೇಟರುಗಳು ಮತ್ತು ಇತರ ಉಪಕರಣಗಳು ಇರಬೇಕು. ಇದರ ಉದ್ದೇಶವೆಂದರೆ ಪಕ್ಕದ ಪ್ರದೇಶಗಳು ಮತ್ತು ರಾಜ್ಯಗಳು ಸೇರಿದಂತೆ ಎಲ್ಲಿ ಸೋಂಕು ಹೆಚ್ಚು ವೇಗವಾಗಿ ಹರಡುತ್ತಿದೆ ಎಂಬ ವರದಿ ಬರುತ್ತದೆಯೋ ಅಲ್ಲೆಲ್ಲಾ ತಕ್ಷಣ ಈ ತಂಡದ ಒಂದು ಭಾಗವನ್ನು ಕಳಿಸಿಕೊಡುವುದಕ್ಕೆ ನೇಮಿಸುವುದಕ್ಕೆ ಸಾಧ್ಯವಾಗಬೇಕು.



ಈಗಿನ ಲಾಕ್‌ಡೌನ್ ಯಶಸ್ವಿಯಾದರೆ, ಒಂದು ದೊಡ್ಡ ದುರಂತ ಸಂಭವಿಸದೇ ಹೋಗಬಹುದು. ಅದರ ಬದಲು ಬೇರೆ ಬೇರೆ ಸಮಯದಲ್ಲಿ ಸಣ್ಣ ಪ್ರಮಾಣದಲ್ಲಿ ಸೋಂಕು ಕಾಣಿಸಿಕೊಳ್ಳಬಹುದು. ಈ ಸಾಧ್ಯತೆ ತುಂಬಾ ಹೆಚ್ಚು. ಈ ಸಮಯದಲ್ಲಿ ಒಂದೇ ತಂಡವನ್ನು ವಿಭಿನ್ನ ಸ್ಥಳಗಳಲ್ಲಿ ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಏಳನೆಯದಾಗಿ, ಇಂತಹ ಒಂದು ತಂಡವನ್ನು ಕಟ್ಟುವುದಕ್ಕೆ, ಮತ್ತು ಅದರಲ್ಲಿ ಎಲ್ಲಾ ಅವಶ್ಯಕ ಸಾಧನಗಳನ್ನು ಇರುವಂತೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗಬೇಕಾದರೆ ಎಲ್ಲಾ ಆರೋಗ್ಯ ವೃತ್ತಿನಿರತರನ್ನು ಸೇರಿಸಿಕೊಳ್ಳಬೇಕು. ಕೇವಲ ಸರ್ಕಾರದ ಸೇವೆಯಲ್ಲಿ ಇರುವವರು ಮಾತ್ರವಲ್ಲ. ಅವಶ್ಯಕತೆಗೆ ತಕ್ಕಂತೆ ಎಲ್ಲಾ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳನ್ನು ಬಳಸಿಕೊಳ್ಳುವ ಹಕ್ಕು ಆ ತಂಡಕ್ಕೆ ಇರಬೇಕು.

ಎಂಟನೆಯದಾಗಿ, ಸಾಮಾಜಿಕ ವರ್ಗಾವಣೆ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಹೆಚ್ಚೆಚ್ಚು ಧೈರ್ಯ ತೋರಬೇಕು. ಇಲ್ಲದೇ ಹೋದರೆ ಬೇಡಿಕೆಯ ಬಿಕ್ಕಟ್ಟು ಒಂದು ದೊಡ್ಡ ಆರ್ಥಿಕ ಪ್ರಪಾತಕ್ಕೆ ನಮ್ಮನ್ನು ತಳ್ಳುತ್ತದೆ. ಆಗ ಜನರಿಗೆ ಆಜ್ಞೆಗಳನ್ನು ಮೀರುವುದನ್ನು ಬಿಟ್ಟು ಬೇರೆ ದಾರಿಯೇ ಉಳಿಯುವುದಿಲ್ಲ. ಈಗ ಸರ್ಕಾರ ನೀಡುತ್ತಿರುವ ಧನಸಹಾಯ ತೀರಾ ಕಡಿಮೆ. ಹೆಚ್ಚೆಂದರೆ ಕೆಲವು ಸಾವಿರ ರೂಪಾಯಿಗಳು. ಆ ಜನ ಈಗಾಗಲೇ ಅದಕ್ಕಿಂತ ಹೆಚ್ಚನ್ನು ಕೆಲವೇ ದಿನಗಳಲ್ಲಿ ಖರ್ಚು ಮಾಡಿದ್ದಾರೆ. ಅವರು ಕೆಲಸಕ್ಕೆ ಹೊರಗೆ ಹೋಗದಂತೆ ಮಾಡಲು ಮತ್ತು ಆ ಮೂಲಕ ಖಾಯಿಲೆ ಹರಡುವುದನ್ನು ತಪ್ಪಿಸಬೇಕಾದರೆ ಬಹುಶಃ ಅವರಿಗೆ ಹೆಚ್ಚಿನ ಹಣವನ್ನು ನೀಡಬೇಕಾಗುತ್ತದೆ.

ಜೊತೆಗೆ ಯೋಜನೆಗಳಿಗೆ ಸಂಬಂಧಿಸಿದಂತೆ ಹಲವು ಗೊಂದಲಗಳಿವೆ (ರೈತರು ಅಂದರೆ ಯಾರು?), ಬಿಸಿನೆಸ್ ಆಸ್ ಯೂಷುವಲ್ ಯೋಜನೆಗೆ, ಅರ್ಹತೆಗೆ ಸಂಬಂದಿಸಿದಂತೆ ಹಲವು ಸಮಸ್ಯೆಗಳಿವೆ. ಯೋಜನೆಗಳನ್ನು ಕೆಲವರಿಗಷ್ಟೇ ಸೀಮಿತಗೊಳಿಸದೆ ಸಾರ್ವತ್ರಿಕವಾಗಿ ಎಲ್ಲರಿಗೂ ಅದರ ಸೌಲಭ್ಯ ಸಿಗುವಂತೆ ನೋಡಿಕೊಳ್ಳಬೇಕು. ದುರುಪಯೋಗ ಆಗುವುದನ್ನು ತಪ್ಪಿಸಬೇಕು. (ಹಾಗೆ ಅನುಕೂಲ ಪಡೆದುಕೊಂಡವರ ಪಟ್ಟಿಯನ್ನು ಪ್ರಕಟಿಸಬೇಕು. ಆಗ ಫಲಾನುಭವಿಗಳು ಯಾರು ಎಂದು ಎಲ್ಲರಿಗೂ ತಿಳಿಯುತ್ತದೆ.). ಸರ್ಕಾರ ಹೆಮ್ಮೆ ಪಡುವ ಜಾಮ್ (ಜನ್‌ಧನ್, ಆಧಾರ್, ಮೊಬೈಲ್) ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಇದು ಖಂಡಿತವಾಗಿಯೂ ಸಕಾಲ. ನಗದನ್ನು ನೇರವಾಗಿ ಜನರ ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕು. ಅದರ ಮಾಹಿತಿ ಪಡೆದವರಿಗೆ ತಲುಪಬೇಕು.
ಅಂತಿಮವಾಗಿ ಈ ಸಮರದ ಪ್ರಯತ್ನವನ್ನು ಸೂಕ್ತವಾದ ಒಂದು ವ್ಯಾಕ್ಸಿನ್ ದೊರೆಯುವ ತನಕ ಮುಂದುವರಿಸಲು ತಯಾರಿರಬೇಕು. ಆರೋಗ್ಯ ರಕ್ಷಣಾ ವ್ಯವಸ್ಥೆಯನ್ನು ಉತ್ತಮಗೊಳಿಸುವುದಕ್ಕೆ ಪ್ರಾರಂಭಿಸೋಣ. ಆಗ ಮುಂದಿನ ಸಲ ಇದನ್ನು ಎದುರಿಸುವುದಕ್ಕೆ ಹೆಚ್ಚು ಸಿದ್ಧರಿರುತ್ತೇವೆ.

ಸಾಮೂಹಿಕ ರಾಷ್ಟ್ರೀಯ ಪ್ರಯತ್ನ ಅವಶ್ಯಕ.

ಸಿ ರಾಮಮನೋಹರ್ ರೆಡ್ಡಿ

ದ ಹಿಂದು 12-04-2020

ಪ್ರಪಂಚದ ಅತಿದೊಡ್ಡ ಲಾಕ್‌ಡೌನನ್ನು ಮತ್ತೆ ವಿಸ್ತರಿಸಲಾಗಿದೆ. ಅದು ಕೋವಿಡ್-19 ಹರಡುವುದನ್ನು ತಡೆಯಲು ಸಹಾಯ ಮಾಡಿದೆಯೇ ಎನ್ನುವುದು ನಿಜವಾಗಿ ನಮಗೆ ಗೊತ್ತಿಲ್ಲ. ನಾವು ಲಾಕ್‌ಡೌನ್ ಮಾಡದಿದ್ದಲ್ಲಿ ಈಗ ಇರುವ 8000ದಷ್ಟು ರೋಗಿಗಳಿಗೆ ಬದಲಾಗಿ ಏಪ್ರಿಲ್ 15ರ ಹೊತ್ತಿಗೆ 800,000 ಲಕ್ಷ ಸೋಂಕಿತರು ಇರುತ್ತಿದ್ದರು ಎನ್ನುತ್ತದೆ ಕೇಂದ್ರ ಸರ್ಕಾರ. ಈ ಊಹೆಗಳನ್ನು ಅವರು ಹೇಗೆ ಮಾಡಿದರು ಎನ್ನುವುದನ್ನು ನಮಗೆ ತಿಳಿಸಿಲ್ಲ. ಈ ಲಾಕ್‌ಡೌನ್ ಸಮರ್ಥಿಸಿಕೊಳ್ಳಲು ಅವುಗಳನ್ನು ನಾಟಕೀಯ ರೀತಿಯಲ್ಲಿ ಜಾದೂ ಮಾಡಿ ನಮ್ಮ ಮುಂದಿಟ್ಟಿದ್ದಾರೆ. ಕೊನೆಗೆ ನಾವು ವೈರಸ್ಸನ್ನು ಹಿಮ್ಮೆಟ್ಟಿಸಿ ಗೆಲ್ಲುತ್ತೇವೆ, ಆದರೆ ಹೇಗೆ ಮತ್ತು ಅದಕ್ಕೆ ನಾವು ತೆರುವ ಬೆಲೆ ಎಷ್ಟು? ಕೋವಿಡ್-19ರ ಜೊತೆ ಹೇಗೆ ವ್ಯವಹರಿಸಬೇಕು ಎನ್ನುವುದಕ್ಕೆ ನಮ್ಮಲ್ಲಿ ಯಾವ ಸಿದ್ಧ ತಂತ್ರವೂ ಇಲ್ಲ. ತಪ್ಪುಗಳಾಗುತ್ತವೆ. ಆದರೆ ಸೋಲನ್ನು ಒಪ್ಪಿಕೊಳ್ಳಲು ನಮಗೆ ಸಾಧ್ಯವಾಗಬೇಕು ಮತ್ತು ಅವಶ್ಯಕವಾದಾಗ ನಮ್ಮ ತಂತ್ರವನ್ನು ಬದಲಿಸಿಕೊಳ್ಳುವುದಕ್ಕೂ ಆಗಬೇಕು.

ನಿಜವಾದ ಅರ್ಥದಲ್ಲಿ ರಾಷ್ಟ್ರಿಯ ಸರ್ಕಾರ ಎನ್ನುವುದೊಂದು ಸಾಧ್ಯವಿದೆ ಎಂದಾದರೆ ಅದು ಈ ಹೊತ್ತಿನಲ್ಲಿ. ನಾವೆಲ್ಲರೂ ಅದರಲ್ಲಿದ್ದೇವೆ. ಸ್ವಾತಂತ್ರ್ಯೋತ್ತರ ಕಾಲದ ಅತಿದೊಡ್ಡ ಬಿಕ್ಕಟ್ಟು ಎನ್ನಲಾಗುವ ಈ ಮಹಾಮಾರಿಯ ವಿರುದ್ಧ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಈಗ ಒಂದೇ ಮನಸ್ಸಿನಿಂದ ಕೆಲಸಮಾಡಬೇಕಿದೆ. ಇದು ರಾಜಕೀಯ ಲಾಭವನ್ನು ಮಾಡಿಕೊಳ್ಳಲು ಹೊರಡುವ ಕಾಲವಲ್ಲ. ಬದಲಾಗಿ ಪ್ರತಿಯೊಬ್ಬರೂ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಈ ಅಪಾಯವನ್ನು ಎದುರಿಸಲು ಬಯಸುವ ಕಾಲ. ಈ ಪ್ರಕ್ರಿಯೆಯನ್ನು ಆಳುವ ಪಕ್ಷವೇ ಆರಂಭಿಸಬೇಕು.

ಇಂಥದ್ದೊಂದು ರಾಷ್ಟ್ರೀಯ ಸರ್ಕಾರ ಭಾರತೀಯ ಜನತಾ ಪಾರ್ಟಿಗೆ ಒಪ್ಪಿಗೆ ಇಲ್ಲ ಅಂತಾದರೆ, ಆಗ ನಾವೆಲ್ಲರೂ ಒಟ್ಟಿಗೆ ಸೇರಿ ಒಂದು ಸಾಮೂಹಿಕ ಪ್ರಯತ್ನವನ್ನು ಮಾಡಬೇಕು. ನಾವೆಲ್ಲರೂ ನಮ್ಮ ಮನಸ್ಸಿನ ಬಾಗಿಲುಗಳನ್ನು ಎಷ್ಟು ವಿಶಾಲವಾಗಿ ತೆರೆದಿಡಲು ಸಾಧ್ಯವೋ ಅಷ್ಟು ವಿಶಾಲವಾಗಿ ತೆರೆದಿಟ್ಟುಕೊಳ್ಳಬೇಕು. ಅತ್ಯುತ್ತಮ ಮನಸ್ಸುಗಳು ಮತ್ತು ಪರಿಣತರು ನೀಡುವ ಸಲಹೆಗಳನ್ನು ತೋಳ್ತೆರೆದು ತಬ್ಬಬೇಕು. ಅವರು ಸರ್ಕಾರದ ಒಳಗಿನವರು ಅಥವಾ ಹೊರಗಿನವರು, ರಾಜಕೀಯ ಮಿತ್ರರು ಅಥವಾ ಶತ್ರುಗಳು ಹೀಗೆ ಯಾರು ಬೇಕಾದರೂ ಆಗಿರಲಿ.

ಎರಡನೆಯದಾಗಿ, ಕೇಂದ್ರವು ಯಾವುದೇ ತೀರ್ಮಾನಗಳನ್ನು ಕೈಗೊಳ್ಳುವ ಮೊದಲು ರಾಜ್ಯ ಸರ್ಕಾರಗಳನ್ನು ಸಮಾನ ಪಾಲುದಾರರನ್ನಾಗಿ ಪರಿಗಣಿಸಲೇಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಸಮಾನ ಪಾಲುದಾರಿಕೆ ನಿಜವಾಗಿಯೂ ಅತ್ಯಂತ ಯಶಸ್ವೀ ಪ್ರಯತ್ನವಾಗಬಲ್ಲದು. ಕೋವಿಡ್-19ರ ಭೀಕರತೆಯನ್ನು ಹಲವು ರಾಜ್ಯಗಳು ಕೇಂದ್ರ ಸರ್ಕಾರಕ್ಕಿಂತ ತುಂಬಾ ಮೊದಲೇ ಅರಿತು, ಅದನ್ನೆದುರಿಸಲು ಆರಂಭಿಸಿದವು. ರಾಜ್ಯಗಳಿಗೆ ಕೇಂದ್ರದಿಂದ ಕಲಿಯುವುದಕ್ಕೆ ಏನೂ ಇಲ್ಲ. ಆದರೆ ರಾಜ್ಯಗಳಿಂದ ಕೇಂದ್ರ ಕಲಿಯಬೇಕಾದ್ದು ಮತ್ತು ರಾಜ್ಯಗಳು ಪರಸ್ಪರ ಒಬ್ಬರಿಂದ ಇನ್ನೊಬ್ಬರು ಕಲಿಯಬೇಕಾದ್ದು ತುಂಬಾ ಇದೆ. ಪ್ರಧಾನ ಮಂತ್ರಿಗಳು ಮೂರು ವಾರಗಳ ಲಾಕ್‌ಡೌನ್ ಹೇರುವಿಕೆಯನ್ನು ಏಕಪಕ್ಷೀಯವಾಗಿ ನಿರ್ಧರಿಸಿದರು. ಆದರೆ ಈಗ ಹೇಳುತ್ತಿದ್ದಾರೆ ರಾಜ್ಯಗಳೇ ಲಾಕ್‌ಡೌನನ್ನು ಮುಂದುವರಿಸ ಬಯಸುತ್ತಿವೆ ಎಂದು. ಹಾಗಾದರೆ ಈಗ ಈ ತಂತ್ರ ಯಶಸ್ವಿಯಾಗದಿದ್ದಲ್ಲಿ ರಾಜ್ಯಗಳು ಅದರ ಹೊಣೆಯನ್ನು ಹೊರಬೇಕೇ?

ಕೇಂದ್ರೀಕರಣವನ್ನು ತಿರಸ್ಕರಿಸಬೇಕು.

ಮೂರನೆಯದಾಗಿ, ಇಡೀ ದೇಶ ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಪ್ರಧಾನಮಂತ್ರಿಗಳ ಕಚೇ-ರಿಯ ನಾಲ್ಕು ಗೋಡೆಗಳಿಗೆ ಸೀಮಿತಗೊಳಿಸಿಕೊಳ್ಳುವುದು ತುಂಬಾ ತಪ್ಪು. ಈವರೆಗೆ ಎಲ್ಲವೂ ಪ್ರಧಾನಮಂತ್ರಿ ಕೇಂದ್ರಿತವಾಗಿಯೇ ಇದೆ. ಪ್ರಧಾನಮಂತ್ರಿಗಳಿಗೆ ಬೆಂಬಲ ವ್ಯಕ್ತಪಡಿಸುತ್ತಾ ಟ್ವೀಟ್ ಮಾಡುವುದೇ ಕ್ಯಾಬಿನೆಟ್ಟಿನ ಮುಖ್ಯ ಉದ್ಯೋಗವಾಗಿದೆ. ಆರೋಗ್ಯಮಂತ್ರಿಗಳು ಎಲ್ಲೋ ಅದೃಶ್ಯರಾಗಿಬಿಟ್ಟಿದ್ದಾರೆ. ಕೆಲವು ಆಯ್ದ ಅಧಿಕಾರಿಗಳು ಎಲ್ಲಾ ಪ್ರಮುಖ ತೀರ್ಮಾನಗಳನ್ನೂ ತೆಗೆದುಕೊಳ್ಳುತ್ತಿದ್ದಾರೆ ಮತ್ತು ಪ್ರತಿಕ್ರಿಯೆಗಳನ್ನು ನಿರ್ದೇಶಿಸುತ್ತಿದ್ದಾರೆ. ಇದು ಹೀಗಾಗಬಾರದು.

ನಾಲ್ಕನೆಯದಾಗಿ, ಇಂತಹ ಭಾರಿ ಘಟನೆಗಳಿಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ಸ್ವಲ್ಪ ಮುಂದಾಲೋಚನೆ ಇರಬೇಕು. ಲಾಕ್‌ಡೌನ್ ಹೇರುವ ಮೊದಲೇ ನಾವು ಬದುಕು ಮತ್ತು ಆರ್ಥಿಕತೆ ಎರಡೂ ಮುಖ್ಯವೆಂದು ಯೋಚಿಸಬೇಕಿತ್ತು, ಮೂರು ವಾರದ ನಂತರವಲ್ಲ. ನಾವು ಲಾಕ್‌ಡೌನ್ ಎನ್ನುವುದನ್ನು ಭೀತಿಯಿಂದ ಜಾರಿಗೊಳಿಸಿದ್ದೇವೆ, ಅಥವಾ ಒಂದು ಕರ್ಫ್ಯೂ ಎಂದು ಹೇರಿದ್ದೇವೆ ಎನ್ನುವ ಸಂದೇಶವನ್ನು ಜನತೆಗೆ ಕಳುಹಿಸಬಾರದಿತ್ತು. ಬದಲಾಗಿ ಇದೊಂದು ತೀರಾ ಕಷ್ಟದ



ತೀರ್ಮಾನ ಆದರೆ ಸರ್ಕಾರ ಉದ್ದಕ್ಕೂ ಜನರ ಜೊತೆಗೆ ಇರುತ್ತದೆ ಎನ್ನುವ ಸಂದೇಶವನ್ನು ಕಳುಹಿಸಬೇಕಿತ್ತು. ಲಾಕ್‌ಡೌನ್ ಸಂದರ್ಭದಲ್ಲಿ ವಲಸಿಗರನ್ನು ಪೊರೆಯುತ್ತೇವೆ ಎಂಬ ಭರವಸೆಯನ್ನು ಮೊದಲು ನೀಡದೇ ಇದ್ದದ್ದು ಒಂದು ಕ್ರೌರ್ಯ. ನಂತರದಲ್ಲಿ ಆ ತಪ್ಪನ್ನು ಬೇಗ ತಿದ್ದಿಕೊಂಡು ಬೇಕಾದ್ದನ್ನು ಮಾಡದೇ ಇದ್ದದ್ದು ಇನ್ನೂ ಹೆಚ್ಚಿನ ಕ್ರೌರ್ಯ.

ಅನುದಾನದ ಹೊಳೆ ಹರಿಸಿ.

ಐದನೆಯದಾಗಿ, ಯಾವುದೇ ಆರ್ಥಿಕ ಚಟುವಟಿಯಲ್ಲಿಯೂ ತೊಡಗದಂತೆ ನಿರ್ಬಂಧಕ್ಕೆ ಸಿಲುಕಿ, ಅತ್ಯಂತ ಭೀಕರ ಪರಿಣಾಮಗಳನ್ನು ಎದುರಿಸುತ್ತಿರುವ ಕೋಟ್ಯಂತರ ಜನಗಳೊಡನೆ ನಾವು ಇನ್ನೂ ತುಂಬಾ ಉದಾರವಾಗಿ ವರ್ತಿಸಬಹುದಿತ್ತು. ಹಾಗಿದ್ದಾಗ್ಯೂ ಕೇಂದ್ರವು ಪರಿಹಾರ ಕಾರ್ಯಕ್ರಮಗಳಲ್ಲಿ ಅದೆಂತಹ ಜಿಪುಣತನ ತೋರುತ್ತಿದೆ ಎನ್ನುವುದು ಅಚ್ಚರಿ ಹುಟ್ಟಿಸುತ್ತಿದೆ. ಆರೋಗ್ಯ ಸೇವೆಗಳಿಗೆ ಮತ್ತು ವ್ಯಾಪಕಗೊಳಿಸಿರುವ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಕೇಂದ್ರವು ರಾಜ್ಯಗಳಿಗೆ ಇನ್ನೂ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸಬೇಕಿತ್ತು. ಆದರೆ ಈ ಕ್ಷಣಕ್ಕೂ ಕೇಂದ್ರವು ಜಿಎಸ್‌ಟಿ ಆದಾಯದಲ್ಲಿ ರಾಜ್ಯಗಳಿಗೆ ಸಲ್ಲಬೇಕಾಗಿರುವ ಪಾಲನ್ನು ನೀಡಲು ತಿರಸ್ಕರಿಸುತ್ತಿದೆ ಎನ್ನುವುದನ್ನು ನಂಬಲಿಕ್ಕೇ ಆಗುವುದಿಲ್ಲ. ಈಗ ತೀವ್ರವಾಗಿ ಕಾಡುತ್ತಿರುವ ಹತಾಶೆಯನ್ನು ಹೇಗೆ ಪರಿಹರಿಸಬೇಕು, ಸರಬರಾಜಿನ ತೊಂದರೆಗಳನ್ನು ಹೇಗೆ ಸರಿಪಡಿಸಬೇಕು, ಈಗ ಏನು ಮಾಡಬೇಕಿದೆಯೋ ಅದಕ್ಕೆ ಈಗ ಮತ್ತು ಭವಿಷ್ಯದಲ್ಲಿ ಯಾವ ರೀತಿಯಲ್ಲಿ ಅನುದಾನವನ್ನು ಒದಗಿಸಬೇಕು ಎನ್ನುವುದಕ್ಕೆ ಹಲವು ಸಲಹೆಗಳಿವೆ. ಕೇಂದ್ರ ಸರ್ಕಾರದ ಮನಸ್ಸು ಮುಕ್ತವಾಗಿಬೇಕು ಅಷ್ಟೆ.

ಆರನೆಯದಾಗಿ ಜನರಲ್ಲಿರುವ ಅನಿಶ್ಚಿತತೆ ಮತ್ತು ಹೆದರಿಕೆಯನ್ನು ಕಡಿಮೆ ಮಾಡಲು ಏನೇನು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎನ್ನುವುದರ ಬಗ್ಗೆ ದಿನನಿತ್ಯವೂ ತಪ್ಪದೇ ಜನರಿಗೆ ತಿಳಿಸುತ್ತಾ ಇರಬೇಕು. ಆಗ ಜನ ಏನೇನು ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತಿದ್ದಾರೆ ಎನ್ನುವುದರ ಸೂಕ್ಷ್ಮ ಅರಿವು ಕೇಂದ್ರಕ್ಕೆ ಇದೆ ಎನ್ನುವುದು ಜನರಿಗೆ ತಿಳಿಯುತ್ತದೆ. ಪತ್ರಿಕೆಗಳ ಬಗ್ಗೆ ಕೇಂದ್ರವು ತನಗಿರುವ ದ್ವೇಷವನ್ನು ಬಿಟ್ಟಾಗ ಮಾತ್ರ ಇದನ್ನು ಮಾಡುವುದಕ್ಕೆ ಕೇಂದ್ರಕ್ಕೆ ಸಾಧ್ಯವಾಗುತ್ತದೆ. ಈಗ ಮಧ್ಯಮ ದರ್ಜೆಯ ಅಧಿಕಾರಿಗಳು ಜನರನ್ನು ತಬ್ಬಿಬ್ಬುಗೊಳಿಸುತ್ತಿದ್ದಾರೆ. ಹಾಗೆ ಮಾಡಿದರೆ ಜನರಲ್ಲಿ ಆ ಭಾವವನ್ನು ಮೂಡಿಸಲಾಗುವುದಿಲ್ಲ. ಹೀಗಿದ್ದಾಗ್ಯೂ ಕೇಂದ್ರವು ಸುಪ್ರೀಂ ಕೋರ್ಟಿನ ಮೊರೆಹೊಕ್ಕು, ಕೋವಿಡ್–19ರ ಮಾಹಿತಿಗಳನ್ನು ಪ್ರಸಾರ ಮಾಡದಂತೆ ಮಾಧ್ಯಮಗಳ ಮೇಲೆ ನಿರ್ಬಂಧ ಹೇರಬೇಕೆಂದು ಕೇಳಿಕೊಂಡಿತು. ಕೇಂದ್ರದ ಈ ಧೋರಣೆಯನ್ನು ಕೇರಳದ ಮುಖ್ಯ ಮಂತ್ರಿಗಳ ಧೋರಣೆಯೊಂದಿಗೆ ಹೋಲಿಸಿ ನೋಡಿ. ಅಲ್ಲಿ ಪ್ರತಿದಿನವೂ ಪತ್ರಿಕೆಗಳಿಗೆ ನೀಡುತ್ತಿರುವ ವಿವರಗಳಿಂದ ರಾಜ್ಯ ಸರ್ಕಾರವು ಏನೆಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ ಎನ್ನುವುದರ ಬಗ್ಗೆ ಜನರಲ್ಲಿ ಗಂಭೀರವಾದ ನಂಬಿಕೆ ಮೂಡಿದೆ. ಎಷ್ಟರ ಮಟ್ಟಿಗೆ ಎಂದರೆ, ಈಗ ಅಲ್ಲಿನ ಪ್ರಜೆಗಳಲ್ಲಿ ಹೆದರಿಕೆ ಸಂಪೂರ್ಣ ಮರೆಯಾಗಿದೆ. ಈ ಪ್ರಕ್ರಿಯೆಯಲ್ಲಿ ಈ ಮೊದಲು ರಾಜ್ಯದಲ್ಲಿ ಧ್ರುವೀಕರಣ ಉಂಟುಮಾಡುತ್ತಾರೆ ಎಂದು ಟೀಕಿಸಲಾಗುತ್ತಿದ್ದ ಮುಖ್ಯಮಂತ್ರಿ ಇಂದು ಈ ಬಿಕ್ಕಟ್ಟಿನ ಹೊತ್ತಿನಲ್ಲಿ ರಾಜ್ಯದಲ್ಲಿ ಐಕಮತ್ಯವನ್ನು ಉಂಟುಮಾಡಿದ್ದಾರೆ. ಈಗ ಅವರನ್ನು ಎಲ್ಲರೂ ಮುಕ್ತಕಂಠದಿಂದ ಹೊಗಳುತ್ತಿದ್ದಾರೆ.

ಸಾಮಾಜಿಕ ಉದ್ವಿಗ್ನತೆಗಳನ್ನು ನಿಗ್ರಹಿಸಬೇಕು

ಏಳನೆಯದಾಗಿ, ಇಂತಹ ಹೊತ್ತಿನಲ್ಲಿ ಸಾಮಾಜಿಕ ಉದ್ವಿಗ್ನತೆಗಳನ್ನು ಹೆಚ್ಚಿಸುವುದರಲ್ಲಿ ಇಡೀ ವಿಶ್ವದಲ್ಲಿಯೇ ಭಾರತಕ್ಕೆ ವಿಶೇಷ ಸ್ಥಾನವಿದೆ. ದೆಹಲಿಯ ತಬ್ಲಿಘೀ ಜಮಾತ್ ಕೂಟದ ಹೆಚ್ಚಿನ ಸದಸ್ಯರು ಸೋಂಕಿಗೆ ಒಳಗಾದರು ಎನ್ನುವುದು ತಿಳಿದ ಕೂಡಲೆ ಟಿ. ವಿ. ಛಾನಲ್ಲುಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ತೀವ್ರತರವಾದ ಇಸ್ಲಾಮೋಫೋಬಿಯಾ ಹರಿದಾಡಿತು. ಮುಸ್ಲಿಂ ಸಮುದಾಯ ಕರೋನಾ ಜಿಹಾದ್ ನಡೆಸುತ್ತಿದೆ ಎಂದು ಆಪಾದಿಸಲಾಯಿತು. ಇದರ ಪರಿಣಾಮವೆಂದರೆ ದೇಶದ ಹಲವು ಭಾಗಗಳಲ್ಲಿ ಅವರಿಗೆ ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರ ಹಾಕಲಾಯಿತು ಮತ್ತು ದ್ವೇಷವನ್ನು ಯಾವುದೇ ಮುಚ್ಚುಮರೆಯಿಲ್ಲದೆ ವ್ಯಕ್ತಪಡಿಸಲಾಯಿತು. ಈ ಪ್ರವೃತ್ತಿಯ ವಿರುದ್ಧ ಬಲವಾಗಿ ದನಿಯೆತ್ತಲು ಒಂದು ವೇಳೆ ಬಿಜೆಪಿ ನಾಯಕತ್ವವು ತನ್ನ ಅಗಾಧ ರಾಜಕೀಯ ಅಧಿಕಾರವನ್ನು ಬಳಸಿಕೊಂಡಿದ್ದಲ್ಲಿ ಆಗ ದೊಂಬಿಪ್ರೇರಕರು ಈ ನಾಯಕರ ಹಾದಿಯಲ್ಲಿಯೇ ಸಾಗುತ್ತಿದ್ದರು. ಆದರೆ ಸರ್ಕಾರದ ಮೌನವು, ಮುಂದೇನಾಗುತ್ತದೋ ಎಂಬ ಹೆದರಿಕೆಯನ್ನು ನಮ್ಮಲ್ಲಿ ಹುಟ್ಟಿಸುತ್ತಿದೆ,


ಎಂಟನೆಯದಾಗಿ ಈಗ ಕೋವಿಡ್–19ರ ಹರಡುವಿಕೆಯನ್ನು ನಿಧಾನಗೊಳಿಸಲು ನಾವು ಆರಿಸಿಕೊಂಡಿರುವುದು ಲಾಕ್‌ಡೌನ್ ಮತ್ತು ನಿಯಂತ್ರಣ. ಇದರಿಂದ ಇನ್ನು ಮುಂದೆಯೂ ಲಾಕ್‌ಡೌನ್‌ಗಳನ್ನು (ಸಣ್ಣ ಅವಧಿಯದೇ ಆಗಿರಬಹುದು) ಮಾಡುತ್ತಲೇ ಇರಬೇಕಾಗುತ್ತದೆ. ಅಭಿವೃದ್ಧಿ ಹೊಂದಿರುವ ಆರ್ಥಿಕತೆಗಳಲ್ಲಿ ಸಂಘಟಿತ ಆರ್ಥಿಕತೆ ಒಟ್ಟು ವ್ಯವಸ್ಥೆಯ ಒಂದು ಲಕ್ಷಣ. ಅಲ್ಲಿ ಲಾಕ್‌ಡೌನನ್ನು ವಿಸ್ತರಿಸುವುದಕ್ಕೆ ಅರ್ಥವಿದೆ. ಆದರೆ ಜೀವನೋಪಾಯಕ್ಕೆ ದಿನದಿನದ ದುಡಿಮೆಯನ್ನೇ ಅವಲಂಬಿಸಿರುವ ಮತ್ತು ಸಾಮಾಜಿಕ ಸುರಕ್ಷತೆಯೇ ಇಲ್ಲದಿರುವ ಭಾರತದಂತಹ ದೇಶದ ಕಥೆ ಏನು? ಜೀವನೋಪಾಯದ ಮಾರ್ಗಗಳ ಮೇಲೆ ಇಂತಹ ಹೊಡೆತವನ್ನು ನಮ್ಮ ಸಾಮಾಜಿಕ ವ್ಯವಸ್ಥೆ ತಡೆದುಕೊಳ್ಳಬಲ್ಲುದೇ? ಈಗ ನಾವು ನೀಡುತ್ತಿರುವ ಪರಿಹಾರಗಳು ಖಾಯಿಲೆಗಿಂತಲೂ ಭಯಂಕರವಾಗಿಲ್ಲವೇ? ಬೇರೆ ಪರ್ಯಾಯಗಳನ್ನು ಕುರಿತು ಚಿಂತಿಸಲು ಪ್ರಾರಂಭಿಸಬೇಕಲ್ಲವೇ?

ಮರುನಿರ್ಮಾಣಕ್ಕಾಗಿ ಒಂದಾಗೋಣ

ಆರ್ಥಿಕತೆಯನ್ನು ಆಫ್ ಮತ್ತು ಆನ್ ಅದುಮುಗುಂಡಿಗಳ ಮೂಲಕ ನಡೆಸುವುದಕ್ಕೆ ಸಾಧ್ಯವಿಲ್ಲ. ಒಂದು ಆರ್ಥಿಕ ವ್ಯವಸ್ಥೆಯನ್ನು ಮತ್ತೆ ನಿರ್ಮಿಸುವುದು, ಭಾರತದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಗಂಭೀರ ಸ್ವರೂಪದ ಹಾನಿಗೊಳಗಾಗಿರುವ ಬದುಕುಗಳನ್ನು ಕಾಪಾಡುವುದು ತುಂಬಾ ದೀರ್ಘವಾದ ಮತ್ತು ಕಠಿಣತರವಾದ ಪ್ರಕ್ರಿಯೆ. ಹಾಗಾಗಿಯೇ ಮರುನಿರ್ಮಿಸಬೇಕಾದರೆ ಒಂದು ರಾಷ್ಟ್ರೀಯ ಸಾಮೂಹಿಕ ಪ್ರಯತ್ನದ ಅವಶ್ಯಕತೆ ಇದೆ. ಇಲ್ಲವಾದಲ್ಲಿ ಒಳ್ಳೆಯ ಪಾತ್ರೆಪಡಗಗಳನ್ನು ಬಳಸುತ್ತಾ, ಒಳ್ಳೆಯ ದೀಪಗಳ ಬೆಳಕಿನಲ್ಲಿ ಜೀವಿಸುತ್ತಿರುವ ನಮ್ಮಂತಹ ಉಳ್ಳವರ ಜೀವಗಳನ್ನು ಉಳಿಸಲು ಕೋಟ್ಯಾಂತರ ಜನರ ದಿನದ ಆದಾಯವನ್ನೇ ಬಲಿಕೊಡಬೇಕೇ?

ಕೊರೋನಾ ವೈರಸ್ ಕೇಸುಗಳು ವೇಗವಾಗಿ ಹೆಚ್ಚುತ್ತಿದೆ – ಸರ್ಕಾರ ದೇಶದ ಉದ್ದಗಲಕ್ಕೂ ವೈದ್ಯರು, ಪ್ಯಾರಾ ಮೆಡಿಕಲ್, ನೋಂದಾಯಿತ ಆರೋಗ್ಯ ಕಾರ್ಯಕರ್ತರು ಅಥವಾ ಆಶಾ ಕಾರ್ಯಕರ್ತರು ದಣಿವರಿಯದೆ ಕಾರ್ಯೋನ್ಮುಖರಾಗಿದ್ದಾರೆ. ಕೋವಿಡ್–19ರ ವಾರ್ಡುಗಳಲ್ಲಿ ಕೆಲಸ ಮಾಡಲು ಯುವ ಡಾಕ್ಟರುಗಳನ್ನು ಕಳುಹಿಸಿದ್ದಾರೆ. ಕೊರೋನಾ ಸೋಂಕನ್ನು ಪತ್ತೆಹಚ್ಚಿ, ತಡೆಗಟ್ಟಲು ರಾಜ್ಯದ ಅಧಿಕಾರಿಗಳು ಹಗಲೂ ರಾತ್ರಿ ಕೆಲಸ ಮಾಡುತ್ತಿದ್ದಾರೆ. ಕೇರಳದಲ್ಲಿ ಕೋವಿಡ್‌ಪೀಡಿತ ವೃದ್ಧದಂಪತಿಗಳ ಆರೈಕೆಯಲ್ಲಿ ತೊಡಗಿದ್ದ ದಾದಿ, ಸ್ವತಃ ಕೋವಿಡ್‌ಗೆ ಸೋಂಕಿಗೆ ಒಳಗಾಗಿ ಈಗ ಚೇತರಿಸಿಕೊಂಡು ಮತ್ತೆ ಕೆಲಸಕ್ಕೆ ಹಾಜರಾಗಲು ತುದಿಗಾಲಿನಲ್ಲಿ ನಿಂತಿದ್ದಾಳೆ. ಅಂತಹ ಹಲವು ನಾಯಕಿಯರು ಇಂದು ನಮ್ಮ ಕಣ್ಮುಂದೆ ಇದ್ದಾರೆ. ಆದರೆ ಉಳಿದಂತೆ ನಾವೆಲ್ಲರೂ ಯಾವ ರೀತಿಯಲ್ಲಿ ಸ್ಪಂದಿಸಿದ್ದೀವಿ ಎನ್ನುವುದನ್ನು ಗಮನಿಸಿದರೆ ಮಾನವೀಯತೆ ಸೋತುಹೋಗಿದೆ ಎನ್ನುವುದು ಎದ್ದು ಕಾಣುತ್ತದೆ. ಆದರೆ ರಾಜಕೀಯ ನಾಯಕತ್ವ ಒಂದು ಯುಕ್ತವಾದ ದಾರಿ ತೋರಿದರೆ ಮತ್ತೆ ನಾವು ಮಾನವೀಯತೆಯನ್ನು ಪುನಶ್ಚೇತನಗೊಳಿಸಬಹುದು.

ಪ್ರಚಾರ ವ್ಯವಸ್ಥೆಯು ನಾವು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದೀವಿ ಎಂದು ಹೇಳುತ್ತಿದೆ. ಆದರೆ ಆ ಮಾತುಗಳಿಂದ ನಾವು ಮೋಸ ಹೋಗಬಾರದು. ರಾಜ್ಯ ಸರ್ಕಾರಗಳ ಪ್ರಯತ್ನಗಳು ಇಲ್ಲದೇ ಹೋಗಿದ್ದಲ್ಲಿ ಮಾನವಲೋಕಕ್ಕೆ ಅಪ್ಪಳಿಸಿರುವ ಈ ವಿಪತ್ತು ಇನ್ನಷ್ಟು ಕೆಟ್ಟದಾಗಿರುತ್ತಿತ್ತು. ನಾವು ಬಯಸಿದಲ್ಲಿ ಈಗಲೂ ಈ ಬಿಕ್ಕಟ್ಟಿಗೆ ಸರಿಯಾದ ರೀತಿಯಲ್ಲಿ ಸ್ಪಂದಿಸಬಹುದು. ಆದರೆ ಅದಕ್ಕೆ ಸರ್ಕಾರದ ಎಲ್ಲಾ ಹಂತಗಳಲ್ಲಿ ಮತ್ತು ಸಮಾಜದ ಎಲ್ಲಾ ವರ್ಗಗಳಲ್ಲಿ ಒಂದು ನೈಜವಾದ ಸಾಮೂಹಿಕ ಪ್ರಯತ್ನವನ್ನು ಆಗುಮಾಡುವಂತಹ ಒಂದು ವಿಶಾಲವಾದ ರಾಜಕೀಯ ಕಾಣ್ಕೆ ನಮಗೆ ಬೇಕು.



ಭಾರತದ ಮುಂದಿರುವ ಅತಿದೊಡ್ಡ ಸವಾಲು

ರಘುರಾಂ ರಾಜನ್

ಆರ್ಥಿಕತೆಯ ದೃಷ್ಟಿಯಿಂದ ಮಾತನಾಡುವುದಾದರೆ, ಸ್ವಾತಂತ್ರ್ಯದ ನಂತರ ಇಂದು ಭಾರತ, ಅತಿದೊಡ್ಡ ತುರ್ತುಪರಿಸ್ಥಿಯನ್ನು ಎದುರಿಸುತ್ತಿದೆ. 2008–09ರ ಜಗತ್ತನ್ನು ಕಾಡಿದ ಹಣಕಾಸು ಬಿಕ್ಕಟ್ಟು ಬೇಡಿಕೆಗೆ ಒಂದು ಬಲವಾದ ಹೊಡೆತವಾಗಿತ್ತು. ಆದರೂ ಕೆಲಸಗಾರರು ಕೆಲಸಕ್ಕೆ ಹೋಗುತ್ತಿದ್ದರು. ಬಿಕ್ಕಟ್ಟು ಕಳೆದ ನಂತರದ ಕೆಲವೇ ವರ್ಷಗಳಲ್ಲಿ ನಮ್ಮ ಉದ್ದಿಮೆಗಳು ಚೇತರಿಸಿಕೊಂಡವು. ನಮ್ಮ ಹಣಕಾಸು ವ್ಯವಸ್ಥೆ ಸುಮಾರಾಗಿ ಸುಸ್ಥಿತಿಯಲ್ಲೇ ಇತ್ತು. ಸರ್ಕಾರದ ಹಣಕಾಸು ಸ್ಥಿತಿಯೂ ಆರೋಗ್ಯವಾಗಿಯೇ ಇತ್ತು. ಆದರೆ ಇಂದು ಪರಿಸ್ಥಿತಿ ಅದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ. ಕೊರೋನ ಮಹಾಮಾರಿ ನಮ್ಮನ್ನು ದೊಡ್ಡ ಬಿಕ್ಕಟ್ಟಿಗೆ ಸಿಲುಕಿಸಿದೆ. ಆದರೂ ನಿರಾಶರಾಗುವುದಕ್ಕೆ ಕಾರಣವಿಲ್ಲ. ನಮ್ಮ ನಿರ್ಧಾರಗಳು ಹಾಗೂ ಆದ್ಯತೆಗಳು ಸರಿಯಾಗಿದ್ದರೆ, ನಮ್ಮಲ್ಲಿರುವ ನಿಜವಾದ ಸಾಮರ್ಥ್ಯವನ್ನು ಬಳಸಿಕೊಂಡು ವೈರಾಣುವನ್ನು ಹಿಮ್ಮೆಟ್ಟಿಸಬಹುದು. ಅಷ್ಟೇ ಅಲ್ಲ ಹೆಚ್ಚು ಭರವಸೆಯ ನಾಳೆಗಾಗಿ ಸೂಕ್ತ ವೇದಿಕೆಯನ್ನು ಸೃಷ್ಟಿಸಬಹುದು. ನಮ್ಮ ತಕ್ಷಣದ ಆದ್ಯತೆಯೆಂದರೆ ವ್ಯಾಪಕವಾಗಿ ಪರೀಕ್ಷಿಸುವುದು, ಸೋಂಕಿತರನ್ನು ಪ್ರತ್ಯೇಕವಾಗಿಡುವುದು ಹಾಗೂ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದರ ಮೂಲಕ ಮಹಾಮಾರಿ ಹರಡದಂತೆ ತಡೆಯುವುದು. 21 ದಿನಗಳ ಲಾಕ್ ಡೌನ್‌ನಿಂದ ಇನ್ನೂ ಹೆಚ್ಚು ಸಿದ್ಧರಾಗುವುದಕ್ಕೆ ನಮಗೆ ಸಮಯಾವಕಾಶ ಸಿಕ್ಕಿದೆ. ದೇಶದ ಅತ್ಯಂತ ಧೈರ್ಯಶಾಲಿಗಳಾದ ವೈದ್ಯಕೀಯ ಸಿಬ್ಬಂದಿಗಳ ನೆರವನ್ನು ಸರ್ಕಾರ ಪಡೆದುಕೊಳ್ಳುತ್ತಿದೆ. ಸರ್ಕಾರಿ, ಖಾಸಗಿ, ರಕ್ಷಣೆ, ನಿವೃತ್ತ ಹೀಗೆ ಸಾಧ್ಯವಾಗುವ ಎಲ್ಲಾ ಮೂಲದಿಂದಲೂ ನೆರವನ್ನು ತೆಗೆದುಕೊಳ್ಳುತ್ತಿದೆ.

ಆದರೆ ಸರ್ಕಾರ ಇನ್ನೂ ಹಲವು ಪಟ್ಟು ವೇಗವಾಗಿ ಕೆಲಸಮಾಡಬೇಕಾಗಿದೆ. ಸೋಂಕಿತರಿಗಾಗಿ ಇನ್ನೂ ಹೆಚ್ಚು ವ್ಯಾಪಕವಾಗಿ ಪರೀಕ್ಷಿಸಬೇಕು. ಆಗ ನಿಜವಾಗಿ ಹಾಟ್‌ಸ್ಪಾಟ್ ಎಲ್ಲಿದೆ ಎಂಬುವುದು ಸ್ಪಷ್ಟವಾಗುತ್ತದೆ. ಸದಾ ಚಲಿಸುವುದಕ್ಕೆ ಸಿದ್ಧರಿರುವ ಜನರ ಹಾಗೂ ಸಂಪನ್ಮೂಲದ ತಂಡವನ್ನು ಸಿದ್ಧಗೊಳಿಸಬೇಕು. ಆಗ ಕೊರತೆ ಬಿದ್ದ ಕಡೆಗೆ ಅಥವಾ ಪರಿಸ್ಥಿತಿ ಗಂಭೀರವಾದ ಕಡೆಗೆ ತಕ್ಷಣ ಅವರನ್ನು ಕಳುಹಿಸಬಹುದು. ಸೋಂಕು ನಿಲ್ಲದೇ ಹೋದರೆ ಲಾಕ್‌ಡೌನ್ ನಂತರ ಏನು ಮಾಡಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಯೋಜನೆಗಳನ್ನು ಈಗಲೇ ರೂಪಿಸಿಕೊಳ್ಳಬೇಕು. ಇಡೀ ದೇಶವನ್ನು ಬಹುಕಾಲ ಲಾಕ್‌ಡೌನಿನಲ್ಲಿಡುವುದು ನಿಜವಾಗಿ ಕಷ್ಟದ ಕೆಲಸ. ಸೋಂಕು ಹೆಚ್ಚಾಗಿಲ್ಲದ ಕೆಲವು ಪ್ರದೇಶಗಳಲ್ಲಿ ಸ್ವಲ್ಪಮಟ್ಟಿನ ಚಟುವಟಿಕೆಗಳನ್ನು ಹೇಗೆ ಆರಂಭಿಸಬಹುದು ಎಂದು ಯೋಚಿಸುವುದು ಒಳ್ಳೆಯದು. ಅಂತಹ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಕ್ರಮಗಳ ಬಗ್ಗೆ ಚಿಂತಿಸಬೇಕು. ಆರ್ಥಿಕ ಚಟುವಟಿಕೆಯನ್ನು ಮತ್ತೆ ಪ್ರಾರಂಭಿಸಬೇಕಾದರೆ ಸೋಂಕು ಯಾವ ಮಟ್ಟದಲ್ಲಿ ಹರಡಿದೆ ಎನ್ನುವುದರ ಬಗ್ಗೆ ನಿಖರವಾದ ಮಾಹಿತಿ ಇರಬೇಕು. ಹಾಗೆ ಕೆಲಸಕ್ಕೆ ಹಿಂತಿರುಗಿದ ಕೆಲಸಗಾರರಿಗೆ ರಕ್ಷಣೆ ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಉದಾಹರಣೆಗೆ ಕೆಲಸಗಾರರ ತಾಪಮಾನವನ್ನು ಗಮನಿಸುವುದು ಜನಜಂಗುಳಿ ಇಲ್ಲದ ಸಾರಿಗೆ, ವೈಯಕ್ತಿಕ ರಕ್ಷಣೆಗೆ ಸಾಮಗ್ರಿಗಳು, ಕೆಲಸದ ಸ್ಥಳದಲ್ಲಿ ಅಂತರವನ್ನು ಕಾಪಾಡಿಕೊಳ್ಳುವುದಕ್ಕೆ ವ್ಯವಸ್ಥೆ, ಹೊಸ ಸೋಂಕಿತರನ್ನು ಪತ್ತೆಹಚ್ಚುವುದಕ್ಕೆ ಹಾಗೂ ಹೊಸಬರಿಗೆ ಹರಡದಂತೆ ನೋಡಿಕೊಳ್ಳುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಕೆಲಸದ ಸ್ಥಳಕ್ಕೆ ಹತ್ತಿರದಲ್ಲಿರುವ ಹಾಸ್ಟೆಲ್ಲುಗಳಲ್ಲಿ ಸೂಕ್ತ ಅಂತರವನ್ನು ಕಾಪಾಡಿಕೊಳ್ಳುವುದಕ್ಕೆ ವ್ಯವಸ್ಥೆಯಿರುವ ಸ್ಥಳದಲ್ಲಿರುವ ಆರೋಗ್ಯವಂತ ಯುವಕರು ಮತ್ತೆ ಕೆಲಸ ಪ್ರಾರಂಭಿಸುವುದಕ್ಕೆ ಸೂಕ್ತರಾಗಬಹುದು. ಪ್ರಾರಂಭದಲ್ಲಿ ಬೆರಳೆಣಿಕೆಯ ಕೆಲವು ಉದ್ದಿಮೆದಾರರಿಗಷ್ಟೇ ಕಾರ್ಮಿಕರಿಗೆ ಅವಶ್ಯಕವಾದ ರಕ್ಷಣೆಯನ್ನು ಕೊಡುವುದಕ್ಕೆ ಸಾಧ್ಯವಾಗಬಹುದು. ಆದರೆ ಅಂತಹ ಉದ್ದಿಮೆಗಳಲ್ಲೇ ಅತಿ ಹೆಚ್ಚು ಕಾರ್ಮಿಕರರಿರುವ ಸಾಧ್ಯತೆ ಇದೆ. ಹಾಗೆ ಉತ್ಪಾದನೆಯನ್ನು ಪ್ರಾರಂಭಿಸುವುದಕ್ಕೆ ಉತ್ಪಾದನೆಗೆ ಬೇಕಾದ ವಸ್ತುಗಳನ್ನು ಒದಗಿಸುವ, ಹಾಗೂ ಇವರಿಂದ ಕೊಳ್ಳುವ, ಹೀಗೆ ಒಂದು ದೊಡ್ಡ ಪೂರೈಕೆಯ ಸರಪಳಿಯೇ ಸಕ್ರಿಯವಾಗಬೇಕು. ಹಾಗೇ ಇಡೀ ವ್ಯವಸ್ಥೆ ಪ್ರಾರಂಭವಾಗುವುದಕ್ಕೆ ಬೇಕಾದ ಯೋಜನೆಯನ್ನು ಮಾಡಿಕೊಳ್ಳುವುದಕ್ಕೆ ಅವರನ್ನು ಪ್ರೋತ್ಸಾಹಿಸಬೇಕು. ಆಡಳಿತ ವ್ಯವಸ್ಥೆ ತಡಮಾಡದೆ ಇಂತಹ ಯೋಜನೆಗಳಿಗೆ ಒಪ್ಪಿಗೆ ಕೊಡಬೇಕು. ಅಷ್ಟೇ ಅಲ್ಲ ಅಂತಹ ಯೋಜನೆಗಳು ತಕ್ಷಣ ಜಾರಿಯಾಗುವುದಕ್ಕೆ ಉತ್ತೇಜಿಸಬೇಕು. ಅದಕ್ಕೆ ಈಗಿನಿಂದಲೇ ಯೋಚಿಸಿಬೇಕು.

ಈ ಮಧ್ಯೆ ಕೆಲಸಕ್ಕೆ ಹೋಗಲಾರದ ಬಡವರು ಹಾಗೂ ಸಂಬಳವಿಲ್ಲದ ಕೆಳ ಮಧ್ಯಮವರ್ಗದ ಜನರು ಜೀವನ ನಡೆಸುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು. ನೊಂದ ಕುಟುಂಬಗಳಿಗೆ ನೇರವಾಗಿ ಹಣವನ್ನು ವರ್ಗಾಯಿಸಬೇಕು. ಇದರಿಂದ ಹಲವರಿಗೆ ಅನುಕೂಲವಾಗಬಹುದು. ಆದರೆ ಈ ಮೂಲಕ ಎಲ್ಲರನ್ನೂ ತಲುಪುವುದಕ್ಕೆ ಸಾಧ್ಯವಿಲ್ಲ. ಹಲವು ಪರಿಣತರು ಈಗಾಗಲೇ ಈ ಅಂಶದ ಬಗ್ಗೆ ಗಮನ ಸೆಳೆದಿದ್ದಾರೆ. ಅಷ್ಟೇ ಅಲ್ಲ ಈಗ ಕೊಡುತ್ತಿರುವ ಹಣ ಒಂದು ತಿಂಗಳಿಗೆ ಸಾಲುವುದಿಲ್ಲ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಒಟ್ಟಾಗಿ ಈ ಬಗ್ಗೆ ಯೋಜನೆಗಳನ್ನು ರೂಪಿಸಬೇಕು. ಅವಶ್ಯಕತೆಯಿರುವ ಕುಟುಂಬಗಳಿಗೆ ಮುಂದಿನ ಕೆಲವು



ತಿಂಗಳ ಜೀವನಕ್ಕೆ ವ್ಯವಸ್ಥೆ ಮಾಡಬೇಕು. ಆಹಾರ, ವೈದ್ಯಕೀಯ ಸೌಲಭ್ಯ ಹಾಗೂ ಕೆಲವೊಮ್ಮೆ ವಸತಿಗಾಗಿ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಸರ್ಕಾರಿ ಮತ್ತು ಸರ್ಕಾರೇತರ ಸಂಘಟನೆಗಳು ಒಟ್ಟಾಗಿ ಒಂದು ವ್ಯವಸ್ಥೆಯನ್ನು ತಕ್ಷಣದಲ್ಲಿ ಮಾಡಬೇಕು. ಸಾಲದ ಪಾವತಿಯ ಗಡುವನ್ನು ಒಂದೆರಡು ತಿಂಗಳು ವಿಸ್ತರಿಸಬೇಕು ಮತ್ತು ಅವರನ್ನು ಕೆಲಸದಿಂದ ತೆಗೆಯದಂತೆ ಖಾಸಗೀ ಕ್ಷೇತ್ರದವರಿಗೆ ನಿರ್ದೇಶನ ನೀಡಬೇಕು. ಸಂಕಟದಲ್ಲಿರುವ ಕುಟುಂಬಗಳ ಖಾತೆಗೆ ಹಣವನ್ನು ನೇರವಾಗಿ ವರ್ಗಾಯಿಸಬೇಕು. ಇವೆಲ್ಲಾ ಮಾಡದೇ ಹೋದರೆ ಆಗುವ ಪರಿಣಾಮವನ್ನು ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ವಲಸೆ ಹೊರಟಿರುವುದರಲ್ಲಿ ನೋಡುತ್ತಿದ್ದೇವೆ. ಅಷ್ಟೇ ಅಲ್ಲ ಜನರಿಗೆ ಬದುಕುವುದಕ್ಕೆ ಬೇರೆ ಮಾರ್ಗವೇ ಇಲ್ಲದೇ ಹೋದಾಗ ಅವರು ಲಾಕ್ ಡೌನ್ ಉಲ್ಲಂಘಿಸಿ ಕೆಲಸಕ್ಕೆ ಹೋಗುವುದಕ್ಕೆ ತಯಾರಾಗಬಹುದು. ದೇಶದ ವಿತ್ತೀಯ ಸ್ಥಿತಿ ನಿಜಕ್ಕೂ ಕಳವಳಕಾರಿಯಾಗಿದೆ. ಆದರೆ ಅವಶ್ಯಕತೆಯಿರುವವರಿಗೆ ನೆರವು ನೀಡುವುದು ಇಂದಿನ ನಮ್ಮ ಆದ್ಯ ಕರ್ತವ್ಯ. ಅದಕ್ಕೆ ನಮ್ಮ ಸಂಪನ್ಮೂಲವನ್ನು ಬಳಸುವುದು ನಮ್ಮ ಪ್ರಮುಖ ಆದ್ಯತೆಯಾಗಬೇಕು.

ಒಂದು ಮಾನವೀಯ ದೇಶವಾಗಿ, ವೈರಾಣು ವಿರುದ್ಧದ ಹೋರಾಟದಲ್ಲಿ ಪಾಲ್ಗೊಳ್ಳುತ್ತಿರುವ ನಾವು ಮಾಡಬೇಕಾದ ನಿಜವಾದ ಕೆಲಸ ಇದು. ನಮಗಿರುವ ಆಯವ್ಯಯದ ಮಿತಿಗಳನ್ನು ಕಡೆಗಣಿಸಬೇಕು ಎಂಬುದು ಇದರರ್ಥವಲ್ಲ. ಅದರಲ್ಲೂ ವಿಶೇಷವಾಗಿ ನಮ್ಮ ಕಂದಾಯ ಸಂಗ್ರಹಣೆ ತೀವ್ರ ಕುಸಿದಿರುವ ಈ ಸಮಯದಲ್ಲಿ ಇದು ನಮ್ಮ ಕಾಳಜಿಯಾಗುತ್ತದೆ. ಅಮೇರಿಕ ಅಥವಾ ಯುರೋಪ್ ಅಂತಹ ದೇಶಗಳಿಗೆ ತಮ್ಮ ಜಿಡಿಪಿಯ ಶೇಕಡ 10ರಷ್ಟು ಖರ್ಚು ಮಾಡಲು ಸಾಧ್ಯವಿದೆ. ಅವರಿಗೆ ತಮ್ಮ ದೇಶದ ರೇಟಿಂಗ್ ಕಡಿಮೆಯಾಗಿಬಿಡಬಹುದೆಂಬ ಗಾಬರಿಯಿಲ್ಲ. ಆದರೆ ಭಾರತದ ವಿತ್ತೀಯ ಕೊರತೆ ಈಗಾಗಲೇ ತೀವ್ರವಾಗಿದೆ. ಈಗ ಈ ಕೊರೋನ ಬಿಕ್ಕಟ್ಟು ಎದುರಾಗಿದೆ. ಮತ್ತು ನಾವು ಇನ್ನೂ ಹೆಚ್ಚು ಖರ್ಚು ಮಾಡಬೇಕಾಗಿದೆ. ರೇಟಿಂಗ್ ಇಳಿಮುಖವಾದರೆ ಮತ್ತು ಹೂಡಿಕೆದಾರರು ವಿಶ್ವಾಸ ಕಳೆದುಕೊಂಡರೆ ವಿನಿಮಯದರ ನೆಲ ಕಚ್ಚಬಹುದು. ಮತ್ತು ಈ ಪರಿಸ್ಥಿತಿಯಲ್ಲಿ ದೀರ್ಘಕಾಲೀನ ಬಡ್ಡಿದರ ತುಂಬಾ ಹೆಚ್ಚಾಗಿ ಬಿಡಬಹುದು. ನಮ್ಮ ಹಣಕಾಸು ಸಂಸ್ಥೆಗಳಿಗೆ ಗಣನೀಯವಾದ ನಷ್ಟವಾಗಬಹುದು.

ಆದುದರಿಂದ ನಮ್ಮ ಆದ್ಯತೆಗಳನ್ನು ಸರಿಪಡಿಸಿಕೊಳ್ಳಬೇಕು. ಅಷ್ಟೊಂದು ಮುಖ್ಯವಲ್ಲದ ಖರ್ಚುಗಳಲ್ಲಿ ಕಡಿತ ಮಾಡಬೇಕು. ಅಥವಾ ಅದನ್ನು ಮುಂದಕ್ಕೆ ಹಾಕಬೇಕು. ತಕ್ಷಣದ ಅವಶ್ಯಕತೆಯ ಕಡೆ ಗಮನ ಕೊಡಬೇಕು. ಮತ್ತೆ ವಿತ್ತೀಯ ಶಿಸ್ತನ್ನು ಕಾಪಾಡಿಕೊಳ್ಳುತ್ತೇವೆ ಎಂದು ಹೂಡಿಕೆದಾರರಿಗೆ ಭರವಸೆ ಕೊಡಬೇಕು. ಭರವಸೆಗೆ ಪೂರಕವಾಗಿ ಎನ್ ಕೆ ಸಿಂಗ್ ಸಮಿತಿ ಸೂಚಿಸಿದಂತೆ ಮಧ್ಯಮಾವಧಿಯ ಸಾಲದ ಮಿತಿಯನ್ನು ನಿರ್ಧರಿಸುವುದಕ್ಕೆ ಮತ್ತು ಸ್ವತಂತ್ರ ವಿತ್ತೀಯ ಕೌನ್ಸಿಲ್ಲನ್ನು ಸ್ಥಾಪಿಸುವುದಕ್ಕೆ ಒಪ್ಪಿಕೊಳ್ಳಬೇಕು.

ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ಈಗಾಗಲೇ ದುರ್ಬಲವಾಗಿವೆ. ಅವುಗಳಿಗೆ ಉಳಿದುಕೊಳ್ಳುವುದಕ್ಕೆ ಬೇಕಾದ ಸಂಪನ್ಮೂಲದ ಕೊರತೆ ಇರಬಹುದು. ನಮಗಿರುವ ವಿತ್ತೀಯ ಮಿತಿಯಲ್ಲಿ ಎಲ್ಲರನ್ನೂ ಉಳಿಸುವುದಕ್ಕೆ ಸಾಧ್ಯವೂ ಇಲ್ಲ. ಅಥವಾ ಉಳಿಸಲೂಬಾರದು. ಸಣ್ಣ ಕೌಟಂಬಿಕ ಉದ್ದಿಮೆಗಳಿಗೆ ನೆರವು ಬೇಡದೇ ಇರಬಹುದು. ಯಾಕೆಂದರೆ ಸರ್ಕಾರ ಕಷ್ಟದಲ್ಲಿರುವ ಕುಟುಂಬಗಳಿಗೆ ನೇರವಾಗಿ ಹಣವನ್ನು ವರ್ಗಾಯಿಸಿದಾಗ ಉದ್ದಿಮೆ ನಡೆಸುತ್ತಿರುವ ಕುಟುಂಬಗಳಿಗೂ ಹಣ ಸಿಗುತ್ತದೆ. ಇನ್ನು ದೊಡ್ಡ ಉದ್ದಿಮಗಳ ವಿಷಯದಲ್ಲಿ ಭವಿಷ್ಯವುಳ್ಳ ದೊಡ್ಡ ಉದ್ದಿಮೆಗಳಿಗೆ ನೆರವು ನೀಡಬೇಕು. ಹಾಗೆ ನೆರವು ನೀಡುವುದಕ್ಕೆ ಹೊಸ ನವೀನ ದಾರಿಗಳನ್ನು ಕಂಡುಕೊಳ್ಳಬೇಕು. ಅದರಲ್ಲೂ ವಿಶೇಷವಾಗಿ ಹೆಚ್ಚು ಮಾನವ ಹಾಗೂ ಭೌತಿಕ ಬಂಡವಾಳ ಇರುವಂತಹ ಉದ್ದಿಮೆಗಳನ್ನು ಬೆಂಬಲಿಸುವುದಕ್ಕೆ ದಾರಿಗಳನ್ನು ಹುಡುಕಬೇಕು. ಭಾರತದ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳಿಗೆ ನೀಡುವ ಬ್ಯಾಂಕ್ ಸಾಲದ ಖಾತ್ರಿಗೆ ಷರತ್ತುಗಳನ್ನು ಇನ್ನಷ್ಟು ಮಾರ್ಪಡಿಸಿ ಅವರಿಗೆ ಅನುಕೂಲ ಮಾಡಿಕೊಡಬಹುದು. ಆದರೆ ಈ ಹಂತದಲ್ಲಿ ಬ್ಯಾಂಕುಗಳು ಸಾಲಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ರಿಸ್ಕ್ ತೆಗೆದುಕೊಳ್ಳುವ ಸಾಧ್ಯತೆ ಕಡಿಮೆ. ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಬ್ಯಾಂಕ್ ಹಂತಹಂತವಾಗಿ ನೀಡುವ ಸಾಲದ ಮೊದಲ ನಷ್ಟದ ಹೊಣೆಯನ್ನು ಒಂದು ಮಿತಿಯಲ್ಲಿ ಸರ್ಕಾರ ವಹಿಸಿಕೊಳ್ಳಬಹುದು. ಕಳೆದ ವರ್ಷ ಈ ಉದ್ದಿಮೆಗಳು



ಪಾವತಿಸಿದ ಆದಾಯ ತೆರಿಗೆ ಪ್ರಮಾಣದವರೆಗೆ ಈ ಹೊರೆಯನ್ನು ಸರ್ಕಾರ ಹೊರಬಹುದು. ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಂದ ಸರ್ಕಾರದ ಭಂಡಾರಕ್ಕೆ ಮುಂದೆ ಹಣ ಬರುತ್ತದೆ. ಈಗ ಅವರಿಗೆ ಬಂಡವಾಳವನ್ನು ಸುಲಭವಾಗಿ ದೊರಕುವಂತೆ ಮಾಡಿದರೆ ಅಂತಹ ಉದ್ದಿಮೆಗಳ ಭವಿಷ್ಯದ ಕೊಡುಗೆಯನ್ನು ಗುರುತಿಸಿ ಇಂದು ಅವರಿಗೆ ನೆರವಾದಂತೆ ಆಗುತ್ತದೆ.

ಆದರೆ ಹೀಗೆ ಕೊಡುವ ಹಣದಿಂದ ತಮಗೆ ಈ ಹಿಂದೆ ಕೊಡಬೇಕಾದ ಸಾಲವನ್ನು ತೀರಿಸಿ ಎಂದು ಬ್ಯಾಂಕುಗಳು ಒತ್ತಾಯಿಸಿದರೆ ಆಗ ಅದರಿಂದ ಈ ಉದ್ದಿಮೆಗಳಿಗೆ ಯಾವು ಅನುಕೂಲವೂ ಆಗುವುದಿಲ್ಲ. ಹಾಗೆ ಮಾಡದಂತೆ ಬ್ಯಾಂಕುಗಳಿಗೆ ಸೂಚಿಸಬೇಕು. ಆಗಷ್ಟೆ ಅವರಿಗೆ ಅನುಕೂಲವಾಗುವುದು. ದೊಡ್ಡ ಉದ್ದಿಮೆಗಳ ಮೂಲಕವೂ ಸಣ್ಣ ಪೂರೈಕೆದಾರರಿಗೆ ಬಂಡವಾಳ ದೊರೆಯುವಂತೆ ಮಾಡಬಹುದು. ಅವರು ಬಾಂಡ್ ಮಾರುಕಟ್ಟೆಯಿಂದ ಬಂಡವಾಳ ಸಂಗ್ರಹಿಸಿ ಸಣ್ಣ ಉದ್ದಿಮೆದಾರರಿಗೆ ವರ್ಗಾಯಿಸಬಹುದು. ಆದರೆ ಇಂದು ಕಾರ್ಪೋರೇಟ್ ಬಾಂಡ್ ಮಾರುಕಟ್ಟೆ ಬಾಂಡುಗಳನ್ನು ಬಿಡುಗಡೆ ಮಾಡಲು ಅಷ್ಟೊಂದು ಉತ್ಸುಕರಾಗಿಲ್ಲ. ಬ್ಯಾಂಕುಗಳು, ವಿಮಾ ಕಂಪೆನಿಗಳು, ಹಾಗೂ ಬ್ಯಾಂಕ್ ಮ್ಯೂಚುಯಲ್ ಫಂಡ್‌ಗಳನ್ನು ಹೊಸ, ಒಳ್ಳೆಯ ಕ್ರೆಡಿಟ್ ರೇಟಿಂಗ್ ಹೊಂದಿರುವ ಕಂಪೆನಿಗಳು ಬಿಡುಗಡೆ ಮಾಡುವ ಹೊಸ ಬಾಂಡುಗಳನ್ನು ಕೊಳ್ಳಲು ಉತ್ತೇಜಿಸಬೇಕು. ಈ ಪ್ರಕ್ರಿಯೆ ಸುಗಮವಾಗಬೇಕಾದರೆ ಅವುಗಳ ಬಳಿ ಇರುವ ಉತ್ತಮ ಗುಣಮಟ್ಟದ ಬಾಂಡುಗಳನ್ನು ಆಧರಿಸಿ ರೆಪೊ ವ್ಯವಹಾರದ ಮೂಲಕ ಸಾಲಕೊಡುವುದಕ್ಕೆ ಆರ್‌ಬಿಐ ಮುಂದೆ ಬರಬೇಕು. ರಿಸರ್ವ್ ಬ್ಯಾಂಕ್ ಇಂತಹ ವ್ಯವಹಾರಗಳನ್ನು ನಡೆಸಲು ಸಾಧ್ಯವಾಗುವಂತೆ ಆರ್‌ಬಿಐ ಕಾಯ್ದೆಯಲ್ಲಿ ಬದಲಾವಣೆ ತರಬೇಕು. ಈ ಪೋರ್ಟ್‌ಫೋಲಿಯೋಗಳಲ್ಲಿ ಸಾಲದ ರಿಸ್ಕನ್ನು ಕಡಿಮೆ ಮಾಡಲು ಬೇಕಾದ ರಿಯಾಯಿತಿ ತೋರಬೇಕು. ಈ ರೀತಿಯ ಬೆಂಬಲ ಕಾರ್ಪೋರೇಟುಗಳು ಸಾಲಪಡೆಯುವುದಕ್ಕೆ ತುಂಬಾ ಅವಶ್ಯಕವಾಗಿ ಬೇಕು. ರಾಜ್ಯಸರ್ಕಾರವೂ ಸೇರಿದಂತೆ ಸರ್ಕಾರದ ಪ್ರತಿಯೊಂದು ಏಜೆನ್ಸಿಗಳು ಮತ್ತು ಸಾರ್ವಜನಿಕ ಕ್ಷೇತ್ರದ ಘಟಕಗಳು ತಾವು ಪಾವತಿಸಬೇಕಾದ ಬಿಲ್ಲುಗಳನ್ನು ತಕ್ಷಣ ಪಾವತಿಸಬೇಕು. ಆಗ ಖಾಸಗೀ ಉದ್ದಿಮೆಗಳಿಗೆ ಬೇಕಾದ ಅಮೂಲ್ಯವಾದ ದ್ರವ್ಯತೆ ಸಿಕ್ಕಂತಾಗುತ್ತದೆ. ಅಂತಿಮವಾಗಿ ಕೌಟಂಬಿಕ ಹಾಗೂ ಕಾರ್ಪೋರೇಟ್ ವಲಯದ ಸಮಸ್ಯೆಗಳು ಹಣಕಾಸು ಕ್ಷೇತ್ರದಲ್ಲೂ ಕಾಣಿಸಿಕೊಳ್ಳುತ್ತದೆ ಅನ್ನುವುದರಲ್ಲಿ ಅನುಮಾನವಿಲ್ಲ. ಬ್ಯಾಂಕಿಂಗ್ ವ್ಯವಸ್ಥೆಗೆ ಅಪಾರವಾದ ದ್ರವ್ಯತೆಯನ್ನು ರಿಸರ್ವ್ ಬ್ಯಾಂಕ್ ಹರಿಸಿದೆ. ಬಹುಶಃ ಅದು ಅದರ ಆಚೆಗೆ ಯೋಚಿಸಬೇಕು. ಉದಾಹರಣೆಗೆ ಚೆನ್ನಾಗಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಒಳ್ಳೆಯ ಗುಣಮಟ್ಟದ ಜಾಮೀನಿಗೆ ಎದುರಾಗಿ ಸಾಲವನ್ನು ಕೊಡುವುದು. ಹೆಚ್ಚಿನ ದ್ರವ್ಯತೆಯಿಂದ ಸಾಲದಿಂದ ಆಗುವ ನಷ್ಟವನ್ನು ಭರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನಿರುದ್ಯೋಗ ಹೆಚ್ಚಾದಂತೆ ಚಿಲ್ಲರೆ ಸಾಲವೂ ಸೇರಿದಂತೆ ಹಿಂತಿರುಗಿಸಲಾಗದ ಸಾಲಗಳು ಹೆಚ್ಚಾಗುತ್ತವೆ. ಹಣಕಾಸು ಸಂಸ್ಥೆಗಳ ಡಿವಿಡೆಂಡ್ ಪಾವತಿಗೆ ಸಂಬಂಧಿಸಿದಂತೆ ಸಾಲದ ಅವಧಿಯನ್ನು ವಿಸ್ತರಿಸುವುದಕ್ಕೆ ರಿಸರ್ವ್ ಬ್ಯಾಂಕ್ ಯೋಚಿಸಬೇಕು.

ಕೆಲವು ಸಂಸ್ಥೆಗಳಿಗೆ ಹೆಚ್ಚಿನ ಬಂಡವಾಳದ ಅವಶ್ಯಕತೆಯಿರುತ್ತದೆ. ನಿಯಂತ್ರಕರು ಅದಕ್ಕೆ ಯೋಚಿಸಬೇಕು. ಮಾಡುವುದಕ್ಕೆ ತುಂಬಾ ಇದೆ. ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ನಿಜವಾಗಿ ಪರಿಣತಿ ಹಾಗೂ ಸಾಮರ್ಥ್ಯ ಇರುವ ಜನರ ನೆರವನ್ನು ಪಡೆದುಕೊಳ್ಳಬೇಕು. ಅಂತಹವರು ಭಾರತದಲ್ಲಿ ಸಾಕಷ್ಟು ಇದ್ದಾರೆ. ಸರ್ಕಾರ ರಾಜಕೀಯ ಮೊಗಸಾಲೆಯ ಇನ್ನೊಂದು ಮಗ್ಗಲಿಗೂ ಹೋಗಿ ಜಾಗತಿಕ ಹಣಕಾಸು ಬಿಕ್ಕಟ್ಟಿನಂತಹ ತೀವ್ರ ಒತ್ತಡಗಳ ಅನುಭವ ಇರುವ ವಿರೋಧ ಪಕ್ಷದ ಸದಸ್ಯರ ಸಲಹೆಯನ್ನು ತೆಗೆದುಕೊಳ್ಳಬಹುದು.

ಆದರೆ ಸರ್ಕಾರ ಸಲಹೆಗಳಿಗಾಗಿ ಪ್ರಧಾನ ಮಂತ್ರಿಗಳ ಕಛೇರಿಯಲ್ಲಿರುವ ಜನರನ್ನೇ ಅವಲಂಬಿಸುವ ಹಟಕ್ಕೆ ಬಿದ್ದರೆ ಸರ್ಕಾರ ಏನನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಸಮಯಕ್ಕೆ ಸರಿಯಾಗಿ ಮಾಡುವುದಕ್ಕೂ ಸಾಧ್ಯವಿಲ್ಲ. ಈಗಾಗಲೇ ಅವರ ಮೇಲೆ ತುಂಬಾ ಕೆಲಸದ ಒತ್ತಡ ಇದೆ. ಪರಿಸ್ಥಿತಿ ನಿಯಂತ್ರಣಕ್ಕೆ ಬಂದ ಮೇಲೆ ಸರ್ಕಾರ ಮತ್ತೆ ಭರವಸೆಯನ್ನು ಮೂಡಿಸುವುದಕ್ಕೆ ಪ್ರಯತ್ನಿಸಬೇಕು. ಭಾರತದ ಬಿಸಿಲು ಮತ್ತು ತೇವಾಂಶದಿಂದ ವೈರಾಣು ದುರ್ಬಗೊಳ್ಳುತ್ತದೆ ಎಂದು ಆಶಿಸೋಣ. ಕೊರೋನಕ್ಕೆ ಮುಂಚೆಯೇ ಭಾರತದ ಆರ್ಥಿಕ ಸ್ಥಿತಿ ನಿರಂತರವಾಗಿ ಕುಸಿಯುತ್ತಿತ್ತು ಮತ್ತು ಸಾಮಾಜಿಕ–ರಾಜಕೀಯ ಪರಿಸರ ಹಾಳಾಗುತ್ತಿತ್ತು. ಮತ್ತೆ ಅದೇ ಹಿಂದಿನ ಸ್ಥಿತಿಗೆ ಹಿಂತಿರುಗಿದರೆ ಪ್ರಯೋಜನವಿಲ್ಲ. ಯಾರೂ ಅದನ್ನು ಬಯಸುತ್ತಿಲ್ಲ. ಬಿಕ್ಕಟ್ಟು ಬಂದಾಗ ಭಾರತ ಸುಧಾರಿಸುತ್ತದೆ ಎಂದು ಹೇಳಲಾಗುತ್ತದೆ. ಈ ದುರಂತದಿಂದ ನಾವು ಒಂದು ಸಮಾಜವಾಗಿ ಎಷ್ಟು ದುರ್ಬಲವಾಗಿದ್ದೇವೆ ಎಂಬುದು ನಮಗೆ ಅರ್ಥವಾಗಬಹುದು ಎಂದು ನಿರೀಕ್ಷಿಸೋಣ. ನಮಗೆ ಇಂದು ಮುಖ್ಯವಾಗಿ ಬೇಕಿರುವ ಆರ್ಥಿಕ ಮತ್ತು ಆರೋಗ್ಯದ ಸುಧಾರಣೆಯತ್ತ ನಮ್ಮ ರಾಜಕೀಯವನ್ನು ಕೇಂದ್ರಿಕರಿಸೋಣ.



ಅಮೇರಿಕೆಯನ್ನರು ತಮ್ಮ ಅಹಂ ಬದಿಗಿಟ್ಟು ನೆರವು ಕೇಳುತ್ತಿದ್ದಾರೆ.

ಕಾರಾ ಬಕ್ಲಿ

ನ್ಯೂಯಾರ್ಕ್ ಟೈಮ್ಸ್, 31 ಮಾರ್ಚ್ 2020

ಕೊರೋನ ದಾಳಿಯಿಂದ ಜಗತ್ತಿನ ಜನರೆಲ್ಲರೂ ಕಂಗಾಲಾಗಿದ್ದಾರೆ. ಇಂದು ನ್ಯೂ ಯಾರ್ಕ್ ಟೈಮ್ಸ್‌ನಲ್ಲಿ ಬಂದ ವರದಿ ಅಲ್ಲಿಯ ಜನರ ಕಷ್ಟವನ್ನು ನಮಗೆ ಪರಿಚಯಿಸುತ್ತದೆ. ನಾವು ನಮ್ಮ ಆರ್ಥಿಕತೆಯನ್ನು ಅವರ ಹಾದಿಯಲ್ಲಿ ಕಟ್ಟಲು ಹೊರಟಿದ್ದೇವೆ. ಅನುವಾದಿಸಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ.

ಕೊರೋನ ವೈರಸ್ಸಿನಿಂದಾಗಿ ತಮ್ಮ ಕೆಲಸವನ್ನು ಕಳೆದುಕೊಂಡಿರುವ ಹಲವು ಕಾರ್ಮಿಕರು ತಮ್ಮ ಜೀವಿತದಲ್ಲಿ ಮೊತ್ತ ಮೊದಲ ಬಾರಿಗೆ ಒಲ್ಲದ ಮನಸ್ಸಿನಿಂದ ದಾನವನ್ನು ಮತ್ತು ನಿರುದ್ಯೋಗಿಗಳಿಗೆ ನೀಡುವ ಸೌಲಭ್ಯಗಳನ್ನು ಕೋರುತ್ತಿದ್ದಾರೆ.

ದಕ್ಷಿಣ ಡೆಲ್ಲಾಸ್‌ನಲ್ಲಿ ಆಹಾರದ ಬ್ಯಾಂಕಿಗೆ ಒಂದು ಮಿನಿವ್ಯಾನ್, ಷವರ್ಲೆ ಟಾಹೋ, ಸೆಡಾನ್, ಪುರಾತನ ಜಾಗ್ವಾರ್ ಹೀಗೆ ಕಾರುಗಳು ಪ್ರವಾಹದೋಪಾದಿಯಲ್ಲಿ ಬಂದವು. ಈ ಕಾರುಗಳಲ್ಲಿ ಕುಳಿತಿದ್ದವರು ತಾವು ಇಲ್ಲಿಗೆ ಬರಬೇಕಾಗಬಹುದೆಂದು ಕನಸಿನಲ್ಲಿಯೂ ಊಹಿಸಿರಲಿಲ್ಲ. ಹೀಗೆ ಬಂದವರಲ್ಲಿ ಲ್ಯಾಂಡ್‌ಸ್ಕೇಪರ್, ಪ್ರೌಢಶಾಲೆಯ ಆಡಳಿತಗಾರ, ಕಾಲೇಜು ವಿದ್ಯಾರ್ಥಿ, ಲೆಸ್ಸಿಯಂತಹ ಗುಮಾಸ್ತ ಮತ್ತು ವೇರ್‌ಹೌಸ್ ಕಾರ್ಮಿಕ, ಹೀಗೆ ಯಾರ್‍ಯಾರೋ ಇದ್ದರು. ಇವರಲ್ಲಿ ಹೆಚ್ಚಿನವರು ಕ್ರಾಸ್ ರೋಡ್ಸ್ ಕಮ್ಯುನಿಟಿ ಸರ್ವಿಸಸ್‌ಗೆ ಮೊದಲ ಬಾರಿಗೆ ಬಂದಿದ್ದರು ಅವರು ಹಿಂದೆಂದೂ ಅಲ್ಲಿಗೆ ಬಂದಿರಲಿಲ್ಲ. ಅವರೆಲ್ಲಾ ಕೊರೋನ ಮಹಾಮಾರಿಯಿಂದ ಆರ್ಥಿಕತೆ ನೆಲಕಚ್ಚಿದ್ದರಿಂದ ಕೆಲಸ ಕಳೆದುಕೊಂಡವರು.

ಇಪ್ಪತ್ತೇಳರ ಹರೆಯದ ಎರಡು ಮಕ್ಕಳ ತಂದೆ ಲೆಸ್ಸಿ ಕೂಡ ಉದ್ಯೋಗ ಕಳೆದುಕೊಂಡವನೆ. ಅವನ ಕಾರಿನ ಡಿಕ್ಕಿಗೆ ಕೈಗವುಸು ಧರಿಸಿದ್ದ ಉಗ್ರಾಣದ ಕೆಲಸಗಾರ ಆಹಾರದ ಡಬ್ಬವೊಂದನ್ನು ಇಡುತ್ತಿದ್ದಾಗ, “ನಿಜವಾಗಿಯಾದರೂ ನಾನಿದನ್ನು ಎಂದೂ ಮಾಡಬೇಕಾಗಿರಲಿಲ್ಲ. ಆದರೆ ಇದನ್ನೆಲ್ಲಾ ನನ್ನ ಮಕ್ಕಳಿಗಾಗಿ ಮಾಡಬೇಕಾಗಿದೆ.” ಎಂದು ನೋವು ತೋಡಿಕೊಂಡ. ಅವನು ಪಕ್ಕದ ಮನೆಯವರೊಂದಿಗೆ ಆಹಾರಕ್ಕಾಗಿ ಅಲ್ಲಿಗೆ ಬಂದಿದ್ದ.

ನೂರಾರು, ಸಾವಿರಾರು ಅಮೆರಿಕನ್ನರು ತಮ್ಮ ಜೀವಮಾನದಲ್ಲಿ ಮೊತ್ತ ಮೊದಲಬಾರಿ ಹೀಗೆ ಸಹಾಯ ಕೇಳುತ್ತಿದ್ದಾರೆ. ಹೀಗೆ ಕೇಳುತ್ತಿರುವವರಲ್ಲಿ ಲಾಸ್ ಅಂಜಲಿಸ್‌ನ ಉಗುರುಗಳ ತಂತ್ರಜ್ಞರಿಂದ ಹಿಡಿದು ಫೋರ್ಟ್ ಲಾಡರ್‌ಡೇಲ್‌ನ ವಿಮಾನ ನಿಲ್ದಾಣದ ಕಾರ್ಮಿಕರು, ಫೀನಿಕ್ಸ್‌ನ ಬಾರ್ ಟೆಂಡರ್‌ಗಳಿಂದ ಮೊದಲ್ಗೊಂಡು ಮಿನ್ನೆಸೋಟದ ಹಿಂದಿನ ರಿಯಾಲಿಟಿ ಷೋದ ಸ್ಪರ್ಧಿಗಳವರೆಗೆ ಹಲವು ಬಗೆಯ ಜನರಿದ್ದಾರೆ. ನಾಚಿಕೆ ಅಪಮಾನಗಳನ್ನು ಬದಿಗಿಟ್ಟು, ಇದಕ್ಕಿಂತಲೂ ಹೀನಾಯವಾದ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿರುವವರ ಬಗ್ಗೆ ಪಾಪಪ್ರಜ್ಞೆಯಿಂದ ವಿಸ್ಮಯಗೊಳ್ಳುತ್ತಾ, ಅವರು ತಾವು ನಿರುದ್ಯೋಗಿಗಳೆಂದು ಅರ್ಜಿ ಹಾಕಿಕೊಳ್ಳುತ್ತಿದ್ದಾರೆ. ಗೋಫಂಡ್‌ಮಿ ಸಂಸ್ಥೆಯ ಸಹಾಯ ಕೇಳುತ್ತಿದ್ದಾರೆ, ಇನ್‌ಸ್ಟಾಗ್ರಾಂ ಮೂಲಕ ಹಣ ಕೊಡಿ ಎಂದು ಕೇಳುತ್ತಿದ್ದಾರೆ. ತಮ್ಮಷ್ಟೇ ಕಷ್ಟದಲ್ಲಿ ಇರುವ ಸಹೋದ್ಯೋಗಿಗಳು ನೀಡುತ್ತಿರುವ ಸಹಾಯವನ್ನು ಮಾತಿಲ್ಲದೆ ಸ್ವೀಕರಿಸುತ್ತಿದ್ದಾರೆ ಮತ್ತು ತುಂಬಾ ದೊಡ್ಡ ಸಂಖ್ಯೆಯಲ್ಲಿ ಆಹಾರದ ಬ್ಯಾಂಕುಗಳ ಬಳಿ ಕಾಣಿಸಿಕೊಳ್ಳುತ್ತಿದ್ದಾರೆ. ಹಿಂದೆಂದೂ ಹೀಗಾಗಿರಲಿಲ್ಲ. ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಈ ಬ್ಯಾಂಕುಗಳು ಹೆಣಗಾಡುತ್ತಿವೆ. ಏಕೆಂದರೆ ಆ ಸಂಸ್ಥೆಯಲ್ಲಿ ಸೇವೆಸಲ್ಲಿಸುತ್ತಿರುವ ಸ್ವಯಂಸೇವಕರಲ್ಲಿ ಹೆಚ್ಚಿನವರು ನಿವೃತ್ತರು ಮತ್ತು ಈಗ ಸುರಕ್ಷತೆಯ ಕಾರಣದಿಂದಾಗಿ ಮನೆಯಲ್ಲೇ ಉಳಿದಿದ್ದಾರೆ.

ಮೆಟ್ ಕೌನ್ಸಿಲ್ ಅನ್ನುವುದು ನ್ಯೂ ಯಾರ್ಕ್ ನಗರದಲ್ಲಿ ಆಹಾರ ಮತ್ತು ವಸತಿಯ ಸಹಾಯವನ್ನು ನೀಡುವ ನಾನ್‌ಪ್ರಾಫಿಟ್ ಸಂಸ್ಥೆ. ಅದರ ಚೀಫ್ ಎಕ್ಸಿಕ್ಯುಟಿವ್ ಡೇವಿಡ್ ಗ್ರೀನ್ ಫೀಲ್ಡ್ ಹೇಳುತ್ತಾರೆ,



"ಆರಂಭದಲ್ಲಿ ರೀಟೇಲ್ ಕಾರ್ಮಿಕರು, ಅಡಿಗೆಯವರು, ವೇಯ್ಟರ್‌ಗಳು ಮತ್ತು ಹೋಟೆಲ್ ಮಾಲಿಕರು ಸಹಾಯ ಕೇಳಿಕೊಂಡು ಬಂದರು. ಈಗ ಹೋದ ವಾರ ಕಾನೂನು ಉದ್ದಿಮೆಗಳ ಉದ್ಯೋಗಿಗಳು ಬಂದರು. ಅವರಲ್ಲಿ ಹೆಚ್ಚಿನವರಿಗೆ ನಿರುದ್ಯೋಗ ಎಂದರೆ ಏನೆಂದೇ ತಿಳಿಯದು."
ಈ ಬಿಕ್ಕಟ್ಟು ಅಮೇರಿಕೆಯ ಎರಡು ಸಿದ್ಧಾಂತಗಳನ್ನು ಪರಸ್ಪರ ಮುಖಾಮುಖಿಯಾಗಿಸುತ್ತಿದೆ – ಒಂದು ಐಕ್ಯತೆಯನ್ನು ಸಾರುವ E Pluribus Unum ಎಂಬ ಧ್ಯೇಯ ಮತ್ತು ಎರಡನೆಯದಾಗಿ ಕಠಿಣ ಪರಿಶ್ರಮಕ್ಕೆ ಫಲವಿದ್ದೇ ಇದೆ ಎಂಬ ಆಳವಾದ ನಂಬಿಕೆ. ಒಳ್ಳೆಯ ದಿನಗಳಲ್ಲಿ ಇವೆರಡೂ ಸಿದ್ಧಾಂತಗಳೂ ಒಟ್ಟೊಟ್ಟಿಗೆ ಇದ್ದವು. ಇಂದು ಇವೆರಡಕ್ಕೂ ಪರೀಕ್ಷೆಯ ಕಾಲ. ಹೊಸದಾಗಿ ನಿರುದ್ಯೋಗಿಯಾದವರಿಗೆ ತಮ್ಮನ್ನು ಕುರಿತ ಮತ್ತು ತಮ್ಮ ದೇಶವನ್ನು ಕುರಿತ ನಂಬಿಕೆಗಳನ್ನು ಪುನರ್‌ಮೌಲ್ಯಮಾಪನ ಮಾಡಿಕೊಳ್ಳುವುದಕ್ಕೆ ಇದು ಒತ್ತಾಯಿಸುತ್ತಿದೆ. ಮಿನ್ನೆಸೋಟದ ಸೈಂಟ್ ಲೂಯಿ ಪಾರ್ಕಿನಲ್ಲಿ 61 ವರ್ಷದ ತಂತ್ರಜ್ಞ ಸ್ಕಾಟ್ ಸೋಯಿಷ್ ಮೊತ್ತ ಮೊದಲ ಬಾರಿಗೆ ನಿರುದ್ಯೋಗಿ ಅನುಕೂಲತೆಗಳಿಗಾಗಿ ಅರ್ಜಿ ಹಾಕಿಕೊಳ್ಳುತ್ತಿದ್ದಾನೆ. ಒಂದು ವಾರದಲ್ಲಿ ನಿರುದ್ಯೋಗ ಭತ್ಯೆಗಾಗಿ 33 ಲಕ್ಷ ಜನ ಅರ್ಜಿ ಹಾಕಿಕೊಂಡಿದ್ದಾರೆ. ಈ ಸಂಖ್ಯೆ ಈವರೆಗಿನ ಎಲ್ಲಾ ದಾಖಲೆಗಳನ್ನೂ ಮುರಿದಿದೆ. ಯಜಮಾನರ ಪೇ ರೋಲ್ ತೆರಿಗೆಗಳನ್ನು ಬಳಸಿಕೊಂಡು ಕೊಡುತ್ತಿರುವ ಸಹಾಯವನ್ನು ಕೇಳುವಂತಹ ಜನರು ಸೋಮಾರಿಗಳು, ಅವರು ಶ್ರಮಪಟ್ಟು ದುಡಿಯುತ್ತಿಲ್ಲ ಎಂದು ಈವರಗೆ ಆಳವಾಗಿ ನಂಬಿದ್ದ ಸ್ಕಾಟ್ ಈಗ ತನ್ನ ನಂಬಿಕೆಯನ್ನು ಬಿಡಬೇಕಾಯಿತು. "ನಿಜವಾಗಿ ಹೇಳಬೇಕೆಂದರೆ, ಜನರಿಗೆ ಬೇರೆ ಆಯ್ಕೆಯೇ ಇಲ್ಲ. ಅವರನ್ನು ನಾಳೆಯಿಂದ ಕೆಲಸಕ್ಕೆ ಬರಬೇಡ ಎಂದು ಹೇಳಿಬಿಟ್ಟರೆ ಯಾರಾದರೂ ಏನು ಮಾಡುತ್ತಾರೆ?" ಎಂದು ಸ್ಕಾಟ್ ಸೋಯಿಷ್ ಕೇಳುತ್ತಾನೆ.

ಲಾಸ್ ಅಂಜಲಿಸ್‌ನಲ್ಲಿ 29 ಹರೆಯದ ಉಗುರಿನ ತಂತ್ರಜ್ಞೆ ಸಮಂತಾ ಪಸಾಯೆ ತಾನು ಕೆಲಸ ಮಾಡುತ್ತಿದ್ದ ಸಲೋನ್ ಮುಚ್ಚಿಹೋದ ಮೇಲೆ ಏನಾದರೂ ಒಂದಿಷ್ಟು ದಾನ ನೀಡುವಂತೆ ಇನ್‌ಸ್ಟಾಗ್ರಾಂ ಮೂಲಕ ಕೇಳಿಕೊಂಡಳು. "ನಾನು ಯಾರ ಸಹಾಯವನ್ನೂ ಕೇಳುವವಳಲ್ಲ. ಎಲ್ಲವನ್ನೂ ನನ್ನಷ್ಟಕ್ಕೇ ಸ್ವತಂತ್ರವಾಗಿ ಮಾಡಿಕೊಳ್ಳುವವಳು. ಆದರೆ ಈ ಹೊತ್ತಿನಲ್ಲಿ ನನ್ನ ಅಭಿಮಾನವನ್ನು ಬದಿಗಿಡಬೇಕಾಯಿತು." ಎಂದು ಹೇಳಿದಳು.

41ವರ್ಷದ, ಎರಡು ಮಕ್ಕಳ ತಂದೆ ಕಾಡ್ರಿಂಗ್ಟನ್ ಫುಡ್ ಬ್ಯಾಂಕಿಗೆ ಹೋದ. ಆದರೆ ಅಲ್ಲೂ ಸ್ಟಾಕ್ ಖಾಲಿಯಾಗಿತ್ತು. ಮತ್ತೆ ಕಳೆದ ವಾರ, ಬೇಗಲೇ ಹೋಗಿದ್ದ. ಆದರೆ ಇವನು ಹೋಗುವ ಮೊದಲೇ ಜನ ಸೇ–ರಿದ್ದರು. ಒಂದು ಬ್ಯಾಗ್ ಬೀನ್ಸ್ ಮಾತ್ರ ಉಳಿದಿತ್ತು. ಸ್ನೇಹಿತರು 100 ಡಾಲರ್ ಸೇರಿಸಿಕೊಟ್ಟರು. ಅದೂ ಈಗ ಹೆಚ್ಚು ಕಮ್ಮಿ ಮುಗಿದಿದೆ. ಈಗ ದಿನಕ್ಕೆ ಒಂದು ಹೊತ್ತು ತಿಂದುಕೊಂಡಿದ್ದಾನೆ. ಎರಡು ಬ್ರೆಡ್ ಚೂರಿನ ನಡುವೆ ಫಿಲ್ಲಿಂಗನ್ನು ಕಲ್ಪಿಸಿಕೊಂಡು ತಿನ್ನುತ್ತಿದ್ದಾನೆ. "ಪ್ರತಿ ವಾರ 1500 ಡಾಲರ್‌ನಿಂದ 2000 ಡಾಲರನ್ನು ದುಡಿಯುತ್ತಿದ್ದವನು ಈ ಸ್ಥಿತಿಗೆ ಇಳಿದಿದ್ದೇನೆ" ಎನ್ನುತ್ತಾನೆ.

ಅಮೇರಿಕೆಯಲ್ಲಿ 19ನೇ ಶತಮಾನದಲ್ಲಿ ಧಾರ್ಮಿಕ ಸಂಸ್ಥೆಗಳು ಪ್ರಾರಂಭಿಸಿದ್ದ ವಲಸಿಗರ ಸಹಾಯ ಗುಂಪುಗಳ ಮೂಲಕ ದಾನಕೊಡುವ ದೀರ್ಘವಾದ ಪರಂಪರೆ ಇತ್ತು. ಜೊತೆಗೆ 20ನೇ ಶತಮಾನದಲ್ಲಿ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳು ಇದ್ದವು. ಹಾಗಿದ್ದಾಗ್ಯೂ ಇಂದಿಗೂ ನಿಷ್ಠುರವಾದ ವ್ಯಕ್ತಿವಾದವೇ ಅಮೇರಿಕೆಯ ರಾಷ್ಟ್ರೀಯ ಅಸ್ಮಿತೆಯ ಮುಖ್ಯ ಲಕ್ಷಣವಾಗಿದೆ.

ಅಮೇರಿಕೆಯ ಆಲಿಸ್ ಫೊದರ್‌ಗಿಲ್ ಪ್ರಕಾರ "ಅಮೇರಿಕೆಯ ಬಹುಪಾಲು ಜನ ತಾವು ಸ್ವಾವಲಂಬಿಗಳು ಮತ್ತು ಸ್ವತಂತ್ರರು ಎಂದು ಭಾವಿಸಿಕೊಳ್ಳುವುದಕ್ಕೆ ಹೆಮ್ಮೆ ಪಟ್ಟುಕೊಳ್ಳುತ್ತಾರೆ." ಆಲಿಸ್ ಫೊದರ್‌ಗಿಲ್ ವರ್ಮೋಂಟ್ ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕಿ. ಆಕೆ ನೈಸರ್ಗಿಕ ದುರಂತಗಳು ಮಾನವನ ಮೇಲೆ ಮಾಡುವ ಪರಿಣಾಮವನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಆಕೆ ಹೇಳುವಂತೆ ಯಾರಿಗೆ ತುಂಬಾ ನೆರವು ಬೇಕೊ ಅವರೇ ನೆರವನ್ನು ಕೇಳಲು ನಾಚಿಕೆಪಟ್ಟುಕೊಳ್ಳುತ್ತಿದ್ದಾರೆ. ಉತ್ತರ ಡಕೋಟದಲ್ಲಿ ಪ್ರವಾಹದಿಂದ ಅಪಾರ ಹಾನಿಗೊಳಗಾಗಿ ಸಂಕಟಕ್ಕೆ ಸಿಲುಕಿದ ಮಹಿಳೆಯರನ್ನು ಅಧ್ಯಯನ ಮಾಡಿದಾಗ, ಅದರಲ್ಲಿ ತುಂಬಾ ಸಂಕಟಕ್ಕೆ ಸಿಕ್ಕವರು ಮಧ್ಯಮ ವರ್ಗದವರು ಮತ್ತು ಕಾರ್ಮಿಕ ಮಹಿಳೆಯರು. ಆದರೆ ಅವರು ತಮ್ಮ ಅಂತಸ್ತಿಗೆ ಚ್ಯುತಿಯಾಗುತ್ತದೆ ಅನ್ನುವ ಗಾಬರಿಯಿಂದ ಸಾರ್ವಜನಿಕ ನೆರವನ್ನು ಬಯಸಲಿಲ್ಲ. ಅವರಿಗೆ ಬಡವರಾಗಿ ಕಾಣಿಸಿಕೊಳ್ಳುವುದು ಇಷ್ಟವಿರಲಿಲ್ಲ. ತಾವು ಒಲ್ಲದ ಮನಸ್ಸಿನಿಂದ ನೆರವನ್ನು ಸ್ವೀಕರಿಸುತ್ತಿದ್ದೇವೆ ಎಂಬುದನ್ನು ಉಳಿದವರಿಗೆ ಹಾಗೂ ತಮಗೇ ಸ್ಪಷ್ಟಪಡಿಸಿಕೊಳ್ಳಲು ಹೆಣಗುತ್ತಿದ್ದಾರೆ. ಹಲವು ರೀತಿಯ ಪ್ರಯತ್ನ ಮಾಡುತ್ತಿದ್ದಾರೆ. ಉದಾಹರಣೆಗೆ, ದಾನಕೊಟ್ಟ ವಸ್ತುಗಳಿಗೆ ಹಣವನ್ನು ಕೊಡುತ್ತೇವೆ ಅನ್ನುವುದು, ಅವರಿಗೆ ಸರ್ಕಾರದ ಕೊಟ್ಟ ಟ್ರೈಲರುಗಳನ್ನು "ಮನೆ" ಅಂತ ಒಪ್ಪಿಕೊಳ್ಳದೆ ಇರುವುದು, ಇತ್ಯಾದಿ.

ಜೀವನದಲ್ಲೇ ಮೊದಲ ಬಾರಿಗೆ ದಾನಕೇಳಲು ಬಂದವರು "ಕ್ಷಮಿಸಿ, ಆದರೆ ನನಗೆ ಸಹಾಯ ಮಾಡಬಹುದಾ? ನನ್ನನ್ನು ಕ್ಷಮಿಸಿ, ಆದರೆ ನನಗೆ ಆಹಾರ ಬೇಕು, ನನ್ನನ್ನು ಕ್ಷಮಿಸಿ, ಆದರೆ ನನಗೆ ಬಾಡಿಗೆ ಬೇಕು, ನನ್ನನ್ನು ಕ್ಷಮಿಸಿ, ಆದರೆ ನನಗೆ ಸಹಾಯ ಬೇಕು" ಅಂತ ಕ್ಷಮೆ ಯಾಚಿಸುವ ದನಿಯಲ್ಲಿ ಕೇಳುತ್ತಾರೆ ಎನ್ನುತ್ತಾರೆ ಮೆಟ್ ಕೌನ್ಸಿಲಿನ ಗ್ರೀನ್‌ಫಿಲ್ಡ್.

ಕೆಲವರಂತೂ ಸೌಲಭ್ಯವನ್ನು ಕೇಳಬೇಕೇ ಅಥವಾ ಬೇಡವೇ ಎಂದು ನಿರ್ಧರಿಸುವುದಕ್ಕೂ ಎರಡೆರಡು ಬಾರಿ ಯೋಚಿಸುತ್ತಾರೆ. ತಮಗೆ ಅರ್ಹತೆಯಿದ್ದರೂ ತಮಗಿಂತಲೂ ಹೆಚ್ಚು ಅವಶ್ಯಕತೆ ಇರುವವರು ಇರಬಹುದು ಅನ್ನುವ ಯೋಚನೆ ಈ ರೀತಿ ಹಿಂದೇಟು ಹಾಕುವುದಕ್ಕೆ ಕಾರಣವಿರಬಹುದೇ?

36 ವರ್ಷದ ಕಿರ್ಕ್ ಡಿವಿಂಡ್ಸ್, ಮಿನ್ನೆಸೋಟದ ಬ್ರೂಕ್ಲಿನ್ ಪಾರ್ಕಿನಲ್ಲಿ ಒಬ್ಬ ಟ್ರೈನರ್, "ದಿ ಬ್ಯಾಚುಲರ್" ಎಂಬ ಟೆಲಿವಿಷನ್ ಫ್ರಾಂಚೈಸ್‌ನಲ್ಲಿ ಮೂರು ಬಾರಿ ಸ್ಪರ್ಧಿಸಿದ್ದವನು. ಅವನ ಕಾರ್ಯಕ್ರಮಗಳೆಲ್ಲಾ ರದ್ದಾದ ಮೇಲೆ ಅವನ ವ್ಯಾಪಾರ ಸ್ಥಗಿತಗೊಂಡಿತು. ಸ್ವಲ್ಪ ಉಳಿತಾಯ ಇತ್ತು. ಅವರ ಅಮ್ಮ ನಿರುದ್ಯೋಗಿ ಭತ್ಯೆಗೆ ಅರ್ಜಿ ಸಲ್ಲಿಸಲು ಒತ್ತಾಯಿಸಿದಾಗ ಅವನು ಹಿಂದೇಟುಹಾಕಿದ. "ಅರ್ಜಿ ಹಾಕಬಹುದಾದ ಎಷ್ಟೋ ಜನರಿಗಿಂತ ನಾನು ಉತ್ತಮ ಸ್ಥಿತಿಯಲ್ಲಿದ್ದೇನೆ" ಅಂದ, ಆದರೆ "ಅದಕ್ಕೆ ನಾನೇನು ಮಾಡುವುದು?" ಅರ್ಜಿ ಹಾಕಲು ನಿರ್ಧರಿಸಿದ.

ಫಿನಿಕ್ಸ್‌ನಲ್ಲಿ ರೇವನ್ ಗ್ರೀನ್ ಅನ್ನುವಳು 28 ವರ್ಷ ತಾಯಿ. ಇಬ್ಬರು ಪುಟ್ಟ ಹೆಣ್ಣು ಮಕ್ಕಳ ಜೊತೆ ಒಂಟಿಯಾಗಿದ್ದಾಳೆ. ತನ್ನ ಮೂರೂ ಕೆಲಸಗಳನ್ನು ಕಳೆದುಕೊಂಡು ಒಂದೇ ವಾರದಲ್ಲಿ ಗೋಫಂಡ್‌ಮಿಗೆ ಶರಣಾಗಿದ್ದಾಳೆ. ಅವಳಲ್ಲಿದ್ದ ಹಣ ಕೆಲವು ದಿನಗಳ ದಿನಸಿಗೆ ಸಾಲುತ್ತಿತ್ತು. ಆದರೆ ಕಾರಿಗೆ ಹಣ ಕೊಡಬೇಕಾಗಿ ಬಂದು ಪೂರ್ತಿ ಪಾಪರ್ ಆಗಿಬಿಟ್ಟಿದ್ದಾಳೆ. ಅವಳು ಆ ಸೌಲಭ್ಯಕ್ಕೆ ಅರ್ಹಳೋ ಇಲ್ಲವೋ ಅನ್ನುವುದೂ ಅವಳಿಗೆ ಗೊತ್ತಿಲ್ಲ. ಅವಳು ಗೋಪಂಡ್‌ಮಿ ಪೇಜ್ ಪ್ರಾರಂಭಿಸಿ 1500 ಡಾಲರ್ ಹಣಕ್ಕಾಗಿ ಕೇಳಿಕೊಂಡಿದ್ದಾಳೆ. ನೆರವು ಕೇಳಬೇಕಲ್ಲ ಅಂತ ಕಸಿವಿಸಿಗೊಂಡಿದ್ದಾಳೆ. ಸಾಮಾಜಿಕ ತಾಣದಲ್ಲಿ ಅದನ್ನು ಹಂಚಿಕೊಳ್ಳಲು ಹಿಂಜರಿಯುತ್ತಿದ್ದಾಳೆ. "ನಾನು ಹೀಗೆ ಸಂಕಟದಲ್ಲಿದ್ದೇನೆ ಅಂತ ಜನಕ್ಕೆ ಗೊತ್ತಾಗುವುದು ನನಗೆ ಸ್ವಲ್ಪವೂ ಇಷ್ಟವಿಲ್ಲ" ಎನ್ನುತ್ತಾಳೆ. ಮಂಗಳವಾರ ಮಧ್ಯಾಹ್ನದ ವೇಳೆಗೆ ಗೋಪಂಡ್‌ಮಿಗೆ ಬಂದ ಡೊನೇಷನ್ ಎಲ್ಲಾ ಖಾಲಿಯಾಗಿದೆ.

ಪರಿಸ್ಥಿತಿಯಲ್ಲಿ ಆದ ದಿಢೀರ್ ಬದಲಾವಣೆಯಿಂದ ಅಮೇರಿಕಕ್ಕೆ ಹೋಗುವ ಕನಸಿನ ಸುತ್ತಲೇ ತಮ್ಮ ಬದುಕನ್ನು ಕಟ್ಟಿಕೊಂಡಿರುವ



ವಲಸೆಗಾರರರಿಗೆ ತುಂಬಾ ಕಷ್ಟವಾಗಿರಬೇಕು.

48 ವಯಸ್ಸಿನ ಅಲೆಕ್ಸಾ ರೋಟಾರು ಬೆವರ್ಲಿ ಹಿಲ್‌ನಲ್ಲಿ ಒಬ್ಬ ಸಿನಿಮಾ ನಿರ್ಮಾಪಕ ಮತ್ತು ನಟ. ಅವನು ತನ್ನ 21ನೇ ವಯಸ್ಸಿನಲ್ಲಿ ರೊಮೇನಿಯವನ್ನು ಬಿಟ್ಟುಬಂದ. "ಒಂದು ಕಮ್ಯುನಿಸ್ಟ್ ದೇಶದಿಂದ ಬಂದ ನನಗೆ ಕ್ಷೇಮ ರಾಜ್ಯದ ಕಲ್ಪನೆ ತುಂಬಾ ಸ್ವಾಭಾವಿಕ. ನಾನು ಅಮೇರಿಕಾಕ್ಕೆ ಬಂದಾಗ ನನಗೆ ಇದರ ಅವಶ್ಯಕತೆ ಬರುತ್ತದೆ ಅಂದುಕೊಂಡಿರಲಿಲ್ಲ." ತನ್ನ ಇಡೀ ಉದ್ಯೋಗ ನೆಲಕಚ್ಚಿದ ಮೇಲೆ ಈಗ ಅವನು ನಿರುದ್ಯೋಗ ಭತ್ಯೆಗಾಗಿ ಅರ್ಜಿ ಹಾಕಲು ಯೋಚಿಸುತ್ತಿದ್ದಾನೆ. ತಾನು ಕಟ್ಟಬೇಕಾದ ಹಣದ ಬಗ್ಗೆ ಅವನಿಗೆ ಚಿಂತೆಯಾಗಿದೆ. "ನನಗೆ ಸ್ವಲ್ಪ ಮುಜುಗರವಾಗುತ್ತಿತ್ತು. ನನ್ನ ಮಗನ ಚಿಂತೆಯಿಂದ ಈಗ ಮುಜುಗರವನ್ನು ಮೀರಿಕೊಂಡಿದ್ದೇನೆ" ಎನ್ನುತ್ತಾನೆ.

38 ವಯಸ್ಸಿನ ಅರ್ನೆಸ್ಟ್ ವರ್ಜಿಲ್ ಹೈಟಿಯಿಂದ ತನ್ನ ಹೆಂಡತಿಯ ಜೊತೆಯಲ್ಲಿ 2012ರಲ್ಲಿ ಇಲ್ಲಿಗೆ ಬಂದ. ವಿರಾಮವೇ ಇಲ್ಲದೆ ದುಡಿದ. ಎರಡು ಕಡೆ ಕೆಲಸ ಮಾಡುತ್ತಿದ್ದ. ಒಂದು ವಿಮಾನ ನಿಲ್ದಾಣದಲ್ಲಿ ವೀಲ್‌ಛೇರ್ ಸಹಾಯಕನಾಗಿ ಮತ್ತು ಇನ್ನೊಂದು ವಿದೇಶದಿಂದ ಪ್ರಯಾಣಿಕರಿಗೆ ಕಸ್ಟಮರ್ ಸಪೋರ್ಟ್ ನೀಡುವುದು. ಅವನ ಪತ್ನಿ ಕೂಡ ದುಡಿಯುತ್ತಿದ್ದಳು. ಅವರು ಕಷ್ಟಪಟ್ಟು ಒಂದು ಮನೆ ಕೊಳ್ಳುವುದಕ್ಕೆಂದು ಉಳಿಸಿ, ಕಳೆದ ವರ್ಷ ಒಂದು ಮನೆಯನ್ನು ಕೊಂಡರು. ಅಲ್ಲಿ ಅವರ ಮೂರು ಮಕ್ಕಳನ್ನು ಸಾಕುತ್ತಿದ್ದಾರೆ. ಮಾರ್ಚ್ ತಿಂಗಳಲ್ಲಿ ಇಬ್ಬರೂ ಕೆಲಸ ಕಳೆದುಕೊಂಡು ಕಂಗಾಲಾಗಿದ್ದಾರೆ.

ಬ್ಯಾಂಕಿಗೆ ಹಣವನ್ನು ಪಾವತಿಸಲು ಸ್ವಲ್ಪ ಸಮಯ ಬೇಕು ಎಂದು ಕೇಳಿಕೊಳ್ಳಬೇಕಲ್ಲಾ ಎಂದು ವರ್ಜಿಲ್‌ನ ಹೆಂಡತಿ ಅಳುತ್ತಿದ್ದಳು. ವರ್ಜಿಲ್ ಈಗಲೂ ಆಹಾರದ ಕೂಪನ್ನಿಗೆ ಮತ್ತು ನಿರುದ್ಯೋಗದ ಅನುಕೂಲಕ್ಕೆ ಪ್ರಯತ್ನಿಸುತ್ತಿದ್ದಾನೆ. ಫುಡ್ ಬ್ಯಾಂಕಿಗೆ ಹೋದರೆ ವೈರಾಣು ಬರಬಹುದೇನೋ ಅನ್ನುವ ಗಾಬರಿ ಅವನಿಗೆ. ಅವರಿಗೆ ಹಿಂದೆಂದೂ ಇಂತಹ ನೆರವಿನ ಅವಶ್ಯಕತೆ ಬಂದೇ ಇರಲಿಲ್ಲ. ನಾವೂ ಬರಿದಾಗಿಬಿಟ್ಟಿದ್ದೇವೆ. "ಇವೆಲ್ಲಾ ನಮಗೆ ಅಭ್ಯಾಸವೇ ಇಲ್ಲ. ಅಮೇರಿಕೆಯ ಕನಸು ಇಡೇರಬೇಕಾದರೆ ತುಂಬಾ ತುಂಬಾ ಕಷ್ಟ ಪಡಬೇಕು ಅಂತ ಗೊತ್ತಿತ್ತು. ಆದರೆ ನಿರುದ್ಯೋಗ ಭತ್ಯೆಗೆ ಅರ್ಜಿ ಹಾಕಬೇಕು ಅನ್ನುವ ಅಂದಾಜು ಇರಲಿಲ್ಲ. ನಮಗೆ ಬೇರೆ ಆಯ್ಕೆಯೇ ಇಲ್ಲ, ಇನ್ಯಾವ ದಾರಿಯೂ ಇಲ್ಲ." ಎನ್ನುತ್ತಾನೆ ವರ್ಜಿಲ್.

ಒಂದು ಹೊತ್ತಿಗೂ ಗತಿಯಿಲ್ಲದೆ ಕ್ಯಾಂಪಿನಲ್ಲಿರುವ ಕಾರ್ಮಿಕರು

ಹಿಂದು ಪತ್ರಿಕೆಯಲ್ಲಿ ಬಂದ ವರದಿ

ಮಹಮದ್ ಶಬೀರ್ ಅಸ್ಸಾಂನಿಂದ ವಲಸೆ ಬಂದ ಕಾರ್ಮಿಕ. ಅವನದು ಐದು ಜನರ ಕುಟುಂಬ. ಮೂರು ಮಕ್ಕಳು ಮತ್ತು ಹೆಂಡತಿಯೊಂದಿಗೆ ಬೆಂಗಳೂರು ಸಿಟಿ ಹೊರವಲಯದಲ್ಲಿರುವ ಕರಿಯಮ್ಮನ ಅಗ್ರಹಾರ ಕ್ಯಾಂಪ್‌ನಲ್ಲಿ ವಾಸಿಸುತ್ತದ್ದಾನೆ. ಅವನ ಮನೆಯೊಳಗೆ ಈಗ ಊಟದ ರೇಷನಿಂಗ್ ಪ್ರಾರಂಭವಾಗಿದೆ. ಈವರೆಗೆ ದಿನ ಎರಡು ಹೊತ್ತು ಊಟ ಮಾಡುತ್ತಿದ್ದರು. ಈಗ ಒಂದು ಹೊತ್ತಿಗೆ ಬಂದಿದ್ದಾರೆ. ಒಂದೆರಡು ದಿನಗಳಲ್ಲಿ ಅದೂ ಕಷ್ಟವಾಗಬಹುದು. ಕೋವಿಡ್–19 ಹರಡುವುದನ್ನು ತಡೆಯುವುದಕ್ಕೆ ಜಾರಿಗೆ ಬಂದ ಲಾಕ್‌ಡೌನ್ ಜನರ ಬದುಕನ್ನೇ ಬದಲಿಸಿದೆ. ಅವರ ಬದುಕು ಮೂರಾಬಟ್ಟೆಯಾಗಿದೆ.

ನೀವು ಎಲ್ಲೇ ಹೋಗಿ ಕೆಲಸಗಾರರ ಎಲ್ಲಾ ಕ್ಯಾಂಪುಗಳಲ್ಲೂ ಇದೇ ಕಥೆಯನ್ನು ಕೇಳುತ್ತೀರಿ. ಅವರಿಟ್ಟುಕೊಂಡಿದ್ದ ಆಹಾರ ಪದಾರ್ಥಗಳು ಕಡಿಮೆಯಾಗುತ್ತಿದೆ. ಕೆಲವೇ ದಿನಗಳಲ್ಲಿ ಖಾಲಿಯಾಗುತ್ತದೆ.

'ನಾವು ಇನ್ನು ಮೇಲೆ ದಿನಕ್ಕೆ ಒಂದೇ ಹೊತ್ತು ಊಟ ಅಂದುಕೊಂಡಿದ್ದೇವೆ. ಆಗ ಇನ್ನೊಂದೆರಡು ದಿನಕ್ಕೆ ರೇಷನ್ ಉಳಿಯಬಹುದು' ಅಂತ ಹಲವರು ಹೇಳಿಕೊಂಡರು.

"ಕೆಲಸವಿಲ್ಲದೆ ಒಂದು ವಾರವಾಯಿತು. ಹಣ ಮತ್ತು ರೇಷನ್ ಎರಡೂ ಮುಗಿಯುತ್ತಾ ಬಂದಿದೆ. ಇನ್ನೊಂದೆರಡು ದಿನಗಳಲ್ಲಿ ಸರ್ಕಾರ ಸಹಾಯ ಮಾಡದೇ ಹೋದರೆ ಉಪವಾಸ ಬೀಳುತ್ತೇವೆ" ಇದು ರಾಯಚೂ–ರಿನಿಂದ ಬಂದಿರುವ ಭರಮಪ್ಪನ ಅಳಲು.

ಉತ್ತರ ಕರ್ನಾಟಕ ಮತ್ತು ಅಸ್ಸಾಂ, ಒಡಿಸ್ಸಾ, ಉತ್ತರ ಪ್ರದೇಶ, ಬಿಹಾರ್ ಮತ್ತು ಪಶ್ಚಿಮ ಬಂಗಾಳದಿಂದ ಬಂದ ಜನ ಒಂದೇ ಕಡೆ ತುಂಬಾ ಒತ್ತೊತ್ತಾಗಿ ಪಕ್ಕಪಕ್ಕದಲ್ಲಿಯೇ ಬದುಕುತ್ತಿದ್ದಾರೆ. ಕೆಲವರಂತೂ ಹತಾಶೆಯಲ್ಲಿ ಊಟ ಸಂಪಾದಿಸಿಕೊಳ್ಳಲು ಏನೇನೋ ದಾರಿ ಹುಡುಕುತ್ತಿದ್ದಾರೆ. ಬೆಂಗಳೂರಿನ ವಲಸೆ ಕೆಲಸಗಾರರ ಸಂಘದ ಹೇಮಂತ್ ಕುಮಾರ್ ಒಂದು ಘಟನೆ ಹೇಳಿದರು: "ಎರಡು ದಿನಗಳ ಹಿಂದೆ, ಕೆಮ್ಮುತ್ತಿದ್ದ ವಲಸೆ ಕಾರ್ಮಿಕನೊಬ್ಬ ತನ್ನನ್ನು ಸರ್ಕಾರಿ ಆಸ್ಪತ್ರೆಗೆ ಸೇರಿಸಲು ಕೇಳಿಕೊಂಡ. ಅವನಿಗೆ ಕೋವಿಡ್–19 ಸೋಂಕು ತಗುಲಿರಬೇಕೆಂದು ಅವನನ್ನು ವೈದ್ಯರು ರಾಜೀವ್ ಗಾಂಧಿ ಇನ್ಸ್‌ಟಿಟ್ಯೂಟ್ ಆಫ್ ಛೆಸ್ಟ್ ಡಿಸೀಸಸ್‌ಗೆ ಕಳುಹಿಸಿಕೊಟ್ಟರು. ಅಲ್ಲಿ ಅವನಿಗೆ ಏನೂ ಆಗಿಲ್ಲವೆಂದು ತಿಳಿಯಿತು. "ತನಗೇನೂ ಆಗಿರಲಿಲ್ಲ, ಕೆಮ್ಮು ಇರಲಿಲ್ಲ. ಊಟ ಸಿಗುತ್ತೆ ಅಂತ ಹಾಗೆ ಮಾಡಿದೆ" ಎಂದ. ಜನ ಆಹಾರಕ್ಕೆ ಎಷ್ಟು ಹತಾಶರಾಗಿದ್ದಾರೆ ಅಂತ ಇದರಿಂದ ಗೊತ್ತಾಗುತ್ತೆ ಅಂತ ಅವರು ತಿಳಿಸಿದರು. ಹಣ ಮತ್ತು ರೇಷನ್ ಖಾಲಿಯಾದ ತಕ್ಷಣ ಸಾಲದ ಶಾರ್ಕ್‌ಗಳು ಇವರ ಪ್ರಾಣ ಹಿಂಡಿ ತೀವ್ರ ಸಾಲದ ಬಲೆಗೆ ಇವರನ್ನು ತಳ್ಳುತ್ತವೆ ಎಂದು ಅವರು ಆತಂಕಗೊಂಡಿದ್ದರು.

ನಗರದ ದಕ್ಷಿಣ ಭಾಗದ ಮುನೆಕೊಲಾಲ, ವೈಟ್‌ಫಿಲ್ಡ್, ವರ್ತೂರು, ಮಾರತ್‌ಹಳ್ಳಿ ಮತ್ತು ಕುಂಡಲಹಳ್ಳಿ ಮುಂತಾದ ಬೇರೆ ಬೇರೆ ಕ್ಯಾಂಪುಗಳಲ್ಲಿ ಇರುವ ವಲಸೆ ಕಾರ್ಮಿಕರು ಆಹಾರ ಪದಾರ್ಥಗಳು, ಹಾಲು ಮತ್ತು ನೀರು ಇಲ್ಲದೆ ಸಂಕಷ್ಟದಲ್ಲಿದ್ದಾರೆ. ಯಾವುದೇ ಕ್ಯಾಂಪುಗಳಿಗೆ ಸರ್ಕಾರದ ಪ್ರತಿನಿಧಿಗಳ್ಯಾರೂ ಈವರೆಗೂ ಹೋಗಿಲ್ಲ ಅಂತ ಅವರೆಲ್ಲಾ ಹೇಳುತ್ತಾರೆ. ಕೋವಿಡ್–19 ಸಂಬಂಧಿಸಿದಂತೆ ಅವರಿಗೆ ನೆರವಾಗಲು ಅಥವಾ ಅದರ ಬಗ್ಗೆ ಮಾಹಿತಿ ನೀಡಲು ಯಾರೂ ಹೋಗೇ ಇಲ್ಲವಂತೆ. ಕಾರ್ಮಿಕ ಇಲಾಖೆ ಪ್ರತಿಯೊಬ್ಬ ಕಾರ್ಮಿಕ ಅಧಿಕಾರಿಗೂ ಮಾಸ್ಕ್ ಮತ್ತು ಸ್ಯಾನಿಟೈಸರ್ ವಿತರಿಸಲು ಹಾಗು ಅರಿವು ಮೂಡಿಸಲು 15 ಲಕ್ಷ ರೂಪಾಯಿ ನೀಡಿದ್ದಾರೆ. ಆದರೂ ಅವರ‍್ಯಾರು ಅಲ್ಲಿಗೆ ಹೋಗಿಲ್ಲ.

ಕೈತೊಳೆಯಲೂ ನೀರಿಲ್ಲ.

ಹೆಚ್ಚಿನ ಹೆಂಗಸರು ಸೀರೆಯ ಸೆರಗು ಅಥವಾ ದುಪ್ಪಟ್ಟಾದಿಂದ ಮುಖವನ್ನು ಮರೆಕೊಂಡಿದ್ದರು. ಗಂಡಸರು ಕರವಸ್ತ್ರದಿಂದ ತಮ್ಮ ಮೂಗು ಬಾಯಿಗಳನ್ನು ಮುಚ್ಚಿಕೊಂಡಿದ್ದರು. ಪಶ್ಚಿಮ ಬಂಗಾಳದ ವಲಸೆ ಕಾರ್ಮಿಕ ಉತ್ಪಲ್‌ದತ್ "ದೂರದರ್ಶನದಲ್ಲಿ ಕೋವಿಡ್–19ರ ಬಗ್ಗೆ ಹೇಳುತ್ತಿದ್ದಾರೆ. ನಮಗೆ ತುಂಬಾ ಹೆದರಿಕೆಯಾಗುತ್ತಿದೆ" ಎಂದ. ಅವರಿಗೆ ಪದೇ ಪದೇ ಕೈತೊಳೆಯುತ್ತಿರಬೇಕೆಂದು ತಿಳಿದಿದೆ. ಆದರೆ ಹಾಗೆ ಮಾಡೋದಕ್ಕೆ ಆಗೋದಿಲ್ಲ. ಅವರ ಕ್ಯಾಂಪಿನಲ್ಲಿ ನೀರಿನ ಕೊರತೆ ತುಂಬಾ ತೀವ್ರವಾಗಿದೆ. "ಯಜಮಾನರು ಪ್ರತಿ ಮನೆಗೆ ವಾರಕ್ಕೆ ಮೂರು ಡ್ರಮ್ ನೀರು ಕೊಡುತ್ತಾರೆ. ಆದರೆ ಕೋವಿಡ್ ಭೀತಿ ಪ್ರಾರಂಭವಾದ ಮೇಲೆ ಟ್ಯಾಂಕರುಗಳು ಓಡಾಡುತ್ತಿಲ್ಲ ಹಾಗಾಗಿ ನೀರು ಸರಬರಾಜಾಗುತ್ತಿಲ್ಲ. ನಾವು 25 ರುಪಾಯಿ ಕೊಟ್ಟು ಒಂದು ಕ್ಯಾನ್ ಕುಡಿಯುವ ನೀರು ಕೊಳ್ಳುತ್ತಿದ್ದೇವೆ. ಕೈತೊಳೆಯುವುದಕ್ಕೆ, ಸ್ನಾನ ಮಾಡುವುದಕ್ಕೆ ನೀರಿಲ್ಲ" ಎಂದು ರಾಯಚೂರಿನ ಶಿವಮ್ಮ ಹೇಳುತ್ತಾಳೆ. ನೀರಿಗೆ ಇಷ್ಟು ಕಷ್ಟವಿರುವಾಗ ನೈರ್ಮಲ್ಯವನ್ನು ಕುರಿತ ಮಾತುಗಳು



ಸುಳ್ಳು ಹಾಗೂ ಅರ್ಥಹೀನ ಅನ್ನಿಸಿಬಿಡುತ್ತವೆ. ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಕೂಡ ಕಷ್ಟ.

ಹೆಚ್ಚಿನ ಕುಟುಂಬಗಳಲ್ಲಿ ಮಕ್ಕಳಿದ್ದಾರೆ. ಅವರಿಗೆ ಹಾಲು ಸಿಗುವುದು ಕೂಡ ಕಷ್ಟವಾಗುತ್ತಿದೆ. 30ರ ಹರೆಯದ ಅಮೀನಳಿಗೆ ಐದು ಜನ ಮಕ್ಕಳು. ಅವಳು ಕುಂಡಲಹಳ್ಳಿಯ ಕ್ಯಾಂಪಿನಲ್ಲಿರುವ ತನ್ನ ಶೆಡ್‌ನ ಮುಂದೆ ಮಕ್ಕಳೊಂದಿಗೆ ಮಲಗುತ್ತಾಳೆ. ಅವಳ ಕೊನೆಯ ಮಗ ಇನ್ನೂ ಎದೆಹಾಲು ಕುಡಿಯುವ ಕೂಸು. ಉಳಿದ ನಾಲ್ಕು ಜನ ಮಕ್ಕಳಿಗೆ ಇನ್ನೂ ಹತ್ತು ವರುಷ ಆಗಿಲ್ಲ. ಎಲ್ಲರೂ ಹಸಿವಿನಿಂದ ಕಂಗಾಲಾಗಿದ್ದಾರೆ. ಆ ಕ್ಯಾಂಪಿನಲ್ಲೊಂದು ಟೆಂಟ್ ಶಾಲೆ ಇತ್ತು. ಅಲ್ಲಿ ಮಕ್ಕಳಿಗೆ ಪ್ರತಿದಿನ ಮಧ್ಯಾಹ್ನದ ಊಟ ಮತ್ತು ಹಾಲು ಸಿಗುತ್ತಿತ್ತು. ಆದರೆ ಈಗ ಇದು ನಿಂತುಹೋಗಿದೆ. “ಈಗ ಮಕ್ಕಳಿಗೆ ಹಾಲಿಲ್ಲದ ಗಂಜಿ ಕುಡಿಸುತ್ತಿದ್ದೇವೆ. ಆದರೆ ಚಿಕ್ಕವನಿಗೆ ಮಾತ್ರ ಹಾಲು ಬೇಕೇ ಬೇಕು. ಆದರೆ ಸಿಗುತ್ತಿಲ್ಲ. ಅದು ಸಿಕ್ಕಾಗ ಕೊಂಡುಕೊಳ್ಳೋದಕ್ಕೆ ಕಾಸಿರೋಲ್ಲ.” ಎನ್ನುವುದು ಅಮೀನಾಳ ಅಳಲು.

ಕರಿಯಮ್ಮನ ಅಗ್ರಹಾರದಲ್ಲಿ ಅಂಗಡಿ ಮಾಲಿಕನಿಗೂ ಮತ್ತು ಅಲ್ಲಿನ ನಿವಾಸಿಗಳಿಗೂ ಜಗಳ ಆಯಿತು. ಇಬ್ಬರು ಪೋಲಿಸರು ಅಲ್ಲಿಗೆ ಬಂದರು. “ಮಾಲಿಕ ಎಲ್ಲದಕ್ಕೂ ಹುಚ್ಚಾಪಟ್ಟೆ ಬೆಲೆ ಏರಿಸಿಬಿಟ್ಟಿದ್ದಾನೆ ಅಂತ ಅವರು ಗಲಾಟೆ ಮಾಡುತ್ತಿದ್ದರು. ಕೊನೇ ಪಕ್ಷ ಹಾಲಿನ ಬೆಲೆ ಏರಿಸಬೇಡ ಅದು ಮಕ್ಕಳಿಗೆ ತುಂಬಾ ಅವಶ್ಯಕ ಅಂತ ನಾವು ಅವನಿಗೆ ಹೇಳುತ್ತಿದ್ದೇವೆ. ಈ ಕ್ಯಾಂಪುಗಳಲ್ಲಿ ಹಾಲಿನ ಕೊರತೆಯಿದೆ. ಅದನ್ನು ಸರಿಪಡಿಸಲು ಪ್ರಯತ್ನಿಸುತ್ತೇವೆ” ಎಂದು ಅವರಿಗೆ ಹೇಳಿದ್ದೇವೆ ಎಂದು ಒಬ್ಬರು ಹೆಡ್ ಕಾನ್‌ಸ್ಟೆಬಲ್ ಹೇಳಿದರು.

ಮರಳಿ ಮನೆಗೆ

ಈ ಕ್ಯಾಂಪಿನಲ್ಲಿ ಈಗ ಹೆಚ್ಚು ಜನರಿಲ್ಲ. ಇಲ್ಲಿನ ಹೆಚ್ಚಿನವರು ಉತ್ತರ ಕರ್ನಾಟಕದಿಂದ ಬಂದಿರುವವರು. ಅವರಲ್ಲಿ ಹಲವರು ಈಗಾಗಲೇ ತಮ್ಮೂರಿಗೆ ವಾಪಸ್ಸು ಹೋಗಿದ್ದಾರೆ. ಮೇಸ್ತ್ರಿಗಳು ಮತ್ತು ಆರ್ಥಿಕವಾಗಿ ಸ್ವಲ್ಪ ಚೆನ್ನಾಗಿರುವವರು ಕಳೆದ ಎರಡು ದಿನಗಳ ಹಿಂದೆ ಟ್ರಕ್ಕು ಮತ್ತು ಮಿನಿಬಸ್ಸುಗಳಲ್ಲಿ ಊರಿಗೆ ಹೋದರು. ಒಬ್ಬೊಬ್ಬರಿಂದ ಟಿಕೆಟ್ಟಿಗೆ ಸುಮಾರು 2000 ರೂಗಳು ತೆಗೆದುಕೊಂಡಿದ್ದಾರೆ. ನಮ್ಮಂತೆ ಕಾಸಿಲ್ಲದವರು ಇಲ್ಲಿಯೇ ಇದ್ದೀವಿ ಎಂದು ಕಲಬುರ್ಗಿಯಿಂದ ಕಟ್ಟಡ ಕಾರ್ಮಿಕಳಾಗಿ ಬಂದು ಕುಂಡಲಹಳ್ಳಿಯ ಕ್ಯಾಂಪಿನಲ್ಲಿರುವ ಯಲ್ಲಮ್ಮ ಹೇಳುತ್ತಾಳೆ. ಪ್ರಯಾಣ ಅಂದರೆ ಹೆದರಿಕೆ ಆಗುತ್ತದೆ. ಆ ಹೆದರಿಕೆಯಿಂದಲೇ ಉತ್ತರ ಮತ್ತು ಪೂರ್ವದ ರಾಜ್ಯಗಳಿಂದ ಬಂದಿರುವ ವಲಸೆ ಕಾರ್ಮಿಕರೆಲ್ಲರೂ ಊರಿಗೆ ಹೋಗದೆ ಅಲ್ಲೇ ಉಳಿದುಕೊಂಡಿದ್ದಾರೆ. ಜೊತೆಗೆ ಈಗಾಗಲೆ ಹೊರಟವರು ರೈಲುನಿಲ್ದಾಣದಲ್ಲಿಯೇ ಸಿಕ್ಕಿಹಾಕಿಕೊಂಡಿದ್ದಾರೆ ಎನ್ನುವ ಸುದ್ದಿಯೂ ಅವರನ್ನು ಊರಿಗೆ ಹೋಗದಂತೆ ತಡೆದಿದೆ.

ಇಲ್ಲಿಯೇ ಉಳಿದವರು ಬದುಕು ನಡೆಸಲು ಹೆಣಗಾಡುತ್ತಿದ್ದಾರೆ.

ಆಹಾರ ಪಡಿತರವನ್ನು ಹೆಚ್ಚಿಸೋಣ

ಮಧುರಾ ಸ್ವಾಮಿನಾಥನ್

ಎರಡು ದಿನದ ಹಿಂದೆ ವಿತ್ತ ಮಂತ್ರಿ ನಿರ್ಮಲಾ ಸೀತಾರಾಮನ್ ಸಾಮಾಜಿಕ ರಕ್ಷಣಾ ಕ್ರಮಕ್ಕಾಗಿ 1.7 ಲಕ್ಷಕೋಟಿ ಪರಿಹಾರ ಪ್ಯಾಕೇಜ್ ಘೋಷಿಸಿದ್ದಾರೆ. 21 ದಿನಗಳ ಲಾಕ್‌ಡೌನ್ ಸಮಯದಲ್ಲಿ ಕೋವಿಡ್–19 ಅನ್ನು ಎದುರಿಸಲು ಈ ಹಣವನ್ನು ಬಿಡುಗಡೆ ಮಾಡಲಾಗಿದೆ. ಆಹಾರ ಭದ್ರತಾ ದೃಷ್ಟಿಯಿಂದ ಈ ಪ್ಯಾಕೇಜ್ ಸಾಲುವುದಿಲ್ಲ. ಸೂಚಿಸಿರುವ ಪಟ್ಟಿಗೆ ಇನ್ನು ಹಲವು ಪದಾರ್ಥಗಳನ್ನು ಸೇರಿಸಿ ಸಾರ್ವತ್ರಿಕ ಪಡಿತರ ಪದ್ಧತಿಯನ್ನು ತಕ್ಷಣ ಮತ್ತಷ್ಟು ವಿತರಿಸಬೇಕು. ಜೊತೆಗೆ ನಗರ ಪ್ರದೇಶಗಳಲ್ಲಿ ತೊಂದರೆಯಲ್ಲಿರುವ ಜನರಿಗೆ ತಕ್ಷಣ ಊಟ ಒದಗಿಸುವುದಕ್ಕಾಗಿ ವಿಶೇಷ ಕ್ರಮವನ್ನು ಕೈಗೊಳ್ಳಬೇಕು. ಈ ಲಾಕ್‌ಡೌನಿನಿಂದ ಲಕ್ಷಾಂತರ ದಿನಗೂಲಿ ನೌಕರರು ಹಾಗೂ ಹೆಚ್ಚಾಗಿ ಸ್ವಯಂ ಉದ್ಯೋಗಿಗಳೇ ಇರುವ ಅಸಂಘಟಿತ ಕಾರ್ಮಿಕ ವರ್ಗ ತೀವ್ರ ತೊಂದರೆಗೆ ಸಿಕ್ಕಿದೆ. ವಿಶ್ವದಲ್ಲೇ ಅತಿ ಹೆಚ್ಚು ಅಪೌಷ್ಟಿಕತೆಯಿಂದ ನರಳುತ್ತಿರುವ ಜನರ ದೇಶ ಎಂಬ ದಾಖಲೆ ಬೇರೆ ನಮ್ಮ ದೇಶಕ್ಕಿದೆ. ಜೊತೆಗೆ ಇವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕಾರ್ಮಿಕರಿಗೆ ಆಹಾರ ಖರೀದಿಸುವ ಸಾಮರ್ಥ್ಯ ಕಡಿಮೆಯಾಗುತ್ತಿದ್ದಂತೆ ಅವರ ಮತ್ತು ಅವರ ಮನೆಯವರು ಹಸಿವು ಹಾಗೂ ಅಪೌಷ್ಟಿಕತೆಯ ಕೆಳ ಹಂತವನ್ನು ತಲುಪಿಬಿಡುತ್ತಾರೆ. ಹೀಗೆ ಪೆಡಂಭೂತದಂತೆ ನಮ್ಮ ಮುಂದೆ ನಿಂತಿ–ರುವ ಆಹಾರದ ಅಭದ್ರತೆಯ ಸಮಸ್ಯೆಯ ನಿವಾರಿಸುವುದಕ್ಕೆ ಆಹಾರ ಪಡಿತರ ಪದ್ಧತಿಯನ್ನು ದೊಡ್ಡ ಮಟ್ಟದಲ್ಲಿ ವಿಸ್ತರಿಸಬೇಕು. ಅದು ನಮ್ಮ ಆರ್ಥಿಕ ಮಂತ್ರಿಗಳು ನೀಡುತ್ತಿರುವ ಭರವಸೆಗಿಂತ ಉತ್ತಮ ಪರಿಹಾರವಾಗಬಲ್ಲದು.

ಇತಿಹಾಸದ ಪಾಠಗಳು

ಈಗ ನಮ್ಮ ಮೇಲೆ ಅನಿರೀಕ್ಷಿತವಾಗಿ ಎರಗಿರುವ ಆರೋಗ್ಯ ಹಾಗೂ ಆರ್ಥಿಕ ಬಿಕ್ಕಟ್ಟು ದೊಡ್ಡ ಪ್ರಮಾಣದಲ್ಲಿ ಜನರನ್ನು ಬಲಿತೆಗೆದುಕೊಳ್ಳುವ ಸಾಧ್ಯತೆಗಳಿವೆ. ಈ ಹೊತ್ತಿನಲ್ಲಿ ಎಲ್ಲರಿಗೂ ಸಾಕಷ್ಟು ಆಹಾರ ಸಿಗುವಂತೆ ನೋಡಕೊಳ್ಳಬೇಕು. ಅದಕ್ಕಾಗಿ ತಕ್ಷಣವೇ ನಾವು ಆಹಾರ ಭದ್ರತಾ ವ್ಯವಸ್ಥೆಯನ್ನು ವಿಸ್ತರಿಸಬೇಕು. ಹೀಗೆ ವಿಸ್ತರಿಸುವಾಗ ಹಲವು ಅಂಶಗಳನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅದನ್ನು ಪರಿಶೀಲಿಸುವ ಮೊದಲು ಕೊರತೆಯುಂಟಾದಾಗ ಬೇರೆ ದೇಶಗಳು ಪಡಿತರ ಪದ್ಧತಿಯನ್ನು ಹೇಗೆ ಬಳಸಿಕೊಂಡಿವೆ ಎಂಬುದನ್ನು ಗಮನಿಸುವುದು ಒಳ್ಳೆಯದು. ಅವರ



ಅನುಭವದಿಂದ ನಾವು ಎಷ್ಟೋ ವಿಷಯವನ್ನು ಕಲಿಯಬಹುದು.

1940ರಲ್ಲಿ ಯುದ್ಧ ಹಾಗೂ ಆ ಸಮಯದಲ್ಲಿ ಇಂಗ್ಲೆಂಡಿನಲ್ಲಿ ತೀವ್ರವಾದ ಕೊರತೆ ಉಂಟಾಗಿತ್ತು. ಅದನ್ನು ನಿರ್ವಹಿಸಲು ಇಂಗ್ಲೆಂಡ್ "ಫೇರ್ ಶೇರ್ಸ್" ಎಂಬ ಪಡಿತರ ಪದ್ಧತಿಯನ್ನು ಜಾರಿಗೆ ತಂದಿತು. ಇಂಗ್ಲೆಂಡ್ 1939ರಿಂದಲೇ ಪ್ರತಿಯೊಬ್ಬ ವ್ಯಕ್ತಿಗೂ ಪಡಿತರ ಪುಸ್ತಕವೊಂದನ್ನು ನೀಡುವುದಕ್ಕೆ ಪ್ರಾರಂಭಿಸಿತ್ತು. ಜನ ಪುಸ್ತಕವನ್ನು ತೋರಿಸಿ ವಾರಕ್ಕಾಗುವಷ್ಟು ಪಡಿತರವನ್ನು ಸ್ಥಳೀಯ ಪಡಿತರ ಅಂಗಡಿಯಿಂದ ಪಡೆದುಕೊಳ್ಳಬಹುದಿತ್ತು. ಪ್ರಾರಂಭದಲ್ಲಿ ಬೆಣ್ಣೆ, ಬೇಕನ್, ಸಕ್ಕರೆ, ಮುಂತಾದ ಪದಾರ್ಥಗಳು ಪಡಿತರದಲ್ಲಿ ಸಿಗುತ್ತಿದ್ದವು. ಅನಂತರದಲ್ಲಿ ಅದಕ್ಕೆ ಮೊಟ್ಟೆ, ಬಿಸ್ಕತ್ತುಗಳು, ಸಂರಕ್ಷಿಸಿದ ಆಹಾರ, ಮಾಂಸ ಮತ್ತು ದವಸ ಧಾನ್ಯಗಳೂ ಸೇರಿಕೊಂಡವು. ಯುದ್ಧ ಕಾಲದಲ್ಲಿ ಕೈಗೊಂಡ ಈ ಪ್ರಯೋಗದ ಪರಿಣಾಮ ಮಾತ್ರ ಅದ್ಭುತವಾಗಿತ್ತು. ಅಮರ್ತ್ಯಸೇನ್ ಹೇಳುವಂತೆ ಇದರಿಂದ ಜನರ ಪ್ರಮುಖ ಸೂಚಿಗಳಲ್ಲಿ ಬಹುದೊಡ್ಡ ಸುಧಾರಣೆ ಆಯಿತು. ಜನರ ಆಯಸ್ಸು ಗಣನೀಯವಾಗಿ ಹೆಚ್ಚಿತು. ಮರಣ ಪ್ರಮಾಣವೂ ಕಡಿಮೆಯಾಯಿತು. ಯುದ್ಧದಿಂದಾಗಿ ಸಾವುನೋವು ಭೀಕರವಾಗಿತ್ತು. ಜನರು ಹಣ ಖರ್ಚು ಮಾಡುವ ಸ್ಥಿತಿಯಲ್ಲಿರಲಿಲ್ಲ. ಆದರೆ ಅವರ ಜೀವಿತಾವಧಿ ಹೆಚ್ಚಾಗಿತ್ತು. ಇಪ್ಪತ್ತನೆಯ ಶತಮಾನದ ಮೊದಲ ಆರು ದಶಕಗಳಲ್ಲಿ ಅದರಲ್ಲೂ 1941ರಿಂದ 1950ರ ಅವಧಿಯಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಜೀವಿತಾವಧಿಯ ಪ್ರಮಾಣ ಗಣನೀಯವಾಗಿ ಏರಿತು.

1942ರಲ್ಲಿ ಬ್ರಿಟಿಷರು ಕೈಗಾರಿಕಾ ಕಾರ್ಮಿಕರಿಗೆ ಸಾಕಷ್ಟು ಆಹಾರವನ್ನು ಒದಗಿಸುವ ಉದ್ದೇಶದಿಂದ ಭಾರತದ ಆರು ನಗರಗಳಲ್ಲಿ ಪಡಿತರ ಪದ್ಧತಿಯನ್ನು ಪ್ರಾರಂಭಿಸಿದರು. 1943ರಲ್ಲಿ ಪ್ರಬಲವಾಗಿದ್ದ ರಾಜ–ಕೀಯ ಚಳುವಳಿಯ ಒತ್ತಾಯದಿಂದ ಮಲಬಾರಿನಲ್ಲಿ ಪಡಿತರ ಪದ್ಧತಿ ಜಾರಿಗೆ ಬಂತು. ಮಲಬಾರ್ ಪಡಿತರ ಪದ್ಧತಿ ಪ್ರಾರಂಭವಾದ ಮೊಟ್ಟಮೊದಲ ಗ್ರಾಮೀಣ ಪ್ರದೇಶ. 1960ರ ಮಧ್ಯಭಾಗದ ವೇಳೆಗೆ ಸಾರ್ವಜನಿಕ ಪಡಿತರ ಪದ್ಧತಿ, ರಾಷ್ಟ್ರೀಯ ಸಾರ್ವತ್ರಿಕ ಯೋಜನೆಯ ಭಾಗವಾಯಿತು. 1991ರವರೆಗೂ ಇದು ವಿಸ್ತಾರಗೊಳ್ಳುತ್ತಾ ಹೋಯಿತು. 1990ರಲ್ಲಿ ಉದಾರೀಕರಣದ ಫಲವಾಗಿ ಸಾರ್ವತ್ರಿಕ ಪಡಿತರ ವ್ಯವಸ್ಥೆ ಸ್ಥಗಿತಗೊಂಡಿತು. ಒಂದು ಸಣ್ಣ ನಿರ್ದಿಷ್ಟ ಜನರ ಗುಂಪಿಗೆ ಮಾತ್ರ ಪಡಿತರವನ್ನು ವಿತರಿಸುವ ಕ್ರಮ ಪ್ರಾರಂಭವಾಯಿತು. ಬಿಪಿಎಲ್ (ಬಡನತನದ ರೇಖೆಯ ಕೆಳಗಿರುವವರು) ಮತ್ತು ಎಪಿಲ್ (ಬಡತನದ ರೇಖೆಯ ಮೇಲಿರುವವರು) ಕುಟುಂಬಗಳು ಎಂಬ ವಿಂಗಡಣೆಯಾಯಿತು. ಅದಕ್ಕೆ ತಕ್ಕಂತೆ ಅವರಿಗೆ ಕೊಡುವ ಪಡಿತರದ ಪ್ರಮಾಣದಲ್ಲೂ ವ್ಯತ್ಯಾಸ ಶುರುವಾಯಿತು.

2013ರಲ್ಲಿ ಪ್ರಮುಖ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಜಾರಿಗೆ ಬಂತು. ಇದೊಂದು ಪ್ರಮುಖ ಹೆಜ್ಜೆ. ರೇಷನ್ ಮತ್ತು ಇತರ ಆಹಾರ ಆಧಾರಿತ ಯೋಜನೆಗಳನ್ನು (ಉದಾಹರಣೆಗೆ ಶಾಲೆಗಳಲ್ಲಿ ಮಧ್ಯಾಹ್ನದ ಊಟದಂತಹ ಯೋಜನೆಗಳು) ಒದಗಿಸುವುದು ಕಾನೂನಿನ ಪ್ರಕಾರ ಅವಶ್ಯಕ ಅಂತಾಯಿತು. ಶೇಕಡ 75ರಷ್ಟು ಗ್ರಾಮೀಣ ಕುಟುಂಬಗಳು, ಶೇಕಡ 50ರಷ್ಟು ನಗರದ ಕುಟುಂಬಗಳು ಅಂದರೆ ಒಟ್ಟು ಜನಸಂಖ್ಯೆಯ ಮೂರನೇ ಎರಡರಷ್ಟು ಕುಟುಂಬಗಳು ಈ ಯೋಜನೆಯ ಲಾಭ ಪಡೆದವು. ಈ ಕುಟುಂಬಗಳನ್ನು ಆದ್ಯತೆಯ ಕುಟುಂಬಗಳು ಎಂದು ಕರೆಯಲಾಯಿತು. ಎನ್‌ಎಫ್‌ಎಸ್‌ಎ ಅದರಲ್ಲೂ ವಿಶೇಷವಾಗಿ ಪಡಿತರ ವ್ಯವಸ್ಥೆ, ಮಧ್ಯಾಹ್ನದ ಊಟದ ಯೋಜನೆ ಇವು ದೇಶದ ಎಲ್ಲಾ ಕಡೆಯಲ್ಲೂ ಇದೆ. ಪ್ರತಿ ರಾಜ್ಯಗಳಲ್ಲಿ ಭಿನ್ನ ಭಿನ್ನ ರೀತಿಯಲ್ಲಿ ಅದು ಕೆಲಸ ಮಾಡುತ್ತಿದೆ. ಆದರೆ ದೇಶದ ಎಲ್ಲೆಡೆ ಆಹಾರದ ವಿತರಣೆಗೆ ಬೇಕಾದ ಮೂಲಭೂತ ಸೌಕರ್ಯವಿದೆ.

ಚೀನಾದ ಕಾರ್ಯಯೋಜನೆ



Targeted Public Distribution System

ಚೀನಾದಲ್ಲಿ ರಾಷ್ಟ್ರೀಯ ಅಭಿವೃದ್ಧಿ ಹಾಗೂ ಸುಧಾರಣಾ ಕಮಿಷನ್ ಎನ್ನುವುದು ಒಂದು ಯೋಜನಾ ಸಮಿತಿ. ಈ ಸಂಸ್ಥೆ ಹಾಗೂ ವಾಣಿಜ್ಯ ಮಂತ್ರಾಲಯ ಬಡವರಿಗೆ ಮೂಲ ಆಹಾರ ದೊರೆಯುವಂತೆ ಮಾಡುವ ಹಾಗೂ ಬೆಲೆಯ ಸ್ಥಿರತೆಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯನ್ನು ಪ್ರಮುಖವಾಗಿ ವಹಿಸಿಕೊಂಡಿದೆ. ಈಗಿನ ಕೊರೊನ ಮಹಾಮಾರಿಯ ಕೇಂದ್ರವಾದ ವುಹಾನ್ ಪ್ರಾಂತ್ಯದಲ್ಲಿ ಜನವರಿ 23ರಿಂದ ಲಾಕ್‌ಡೌನ್ ಪ್ರಾರಂಭವಾದ ಮೇಲೆ ಅಲ್ಲಿನ ವ್ಯವಸ್ಥೆಯನ್ನು ಇವುಗಳೇ ನೋಡಿಕೊಳ್ಳುತ್ತಿವೆ. ಚೀನಾ ಹಲವು ಸ್ತರಗಳಲ್ಲಿ ಕೆಲಸ ಮಾಡುತ್ತಿದೆ. ಅದರಲ್ಲಿ ಸರ್ಕಾರಿ ಕಾರ್ಪೋರೇಷನ್ನುಗಳು, ಮಂತ್ರಿಗಳು, 300 ದೊಡ್ಡ ಖಾಸಗೀ ಕಂಪೆನಿಗಳು, 2,00,000 ಖಾಸಗೀ ಅಂಗಡಿಗಳು ಮತ್ತು ಸ್ಥಳೀಯ ಸರ್ಕಾರಿ ಸಂಸ್ಥೆಗಳು ಜೊತೆಗೂಡಿವೆ. ಉದಾಹರಣೆಗೆ, ಸರ್ಕಾರಿ ಸ್ವಾಮ್ಯದ ಕಂಪೆನಿಗಳಾದ ಚೀನಾ ರಾಷ್ಟ್ರೀಯ ಧಾನ್ಯಗಳು, ಎಣ್ಣೆ ಹಾಗೂ ಆಹಾರ ಪದಾರ್ಥಗಳ ಕಾರ್ಪೋರೇಷನ್, ಚೀನಾ ಧಾನ್ಯಗಳ ರಿಸರ್ವ್ ಕಾರ್ಪೋರೇಷನ್ ಇವುಗಳು ಮುಖ್ಯವಾಗಿ ಬೇಕಾದ ಆಹಾರ ಪದಾರ್ಥಗಳನ್ನು ವುಹಾನ್‌ಗೆ ಸರಬರಾಜು ಮಾಡಿತು. ಅವು ಮಹಾಮಾರಿ ತುಂಬ ತೀವ್ರವಾಗಿದ್ದ ಫೆಬ್ರುವರಿ ತಿಂಗಳಿನಲ್ಲಿ ಪ್ರತಿ ದಿನ 200 ಟನ್ ಅಕ್ಕಿ, 50ಟನ್ ಹಿಟ್ಟು ಮತ್ತು ನೂಡಲ್ಸ್, 300 ಟನ್ ಎಣ್ಣೆ ರವಾನಿಸಿದವು. ರಾಷ್ಟ್ರೀಯ ಕಾಳು ವ್ಯಾಪಾರ ಕೇಂದ್ರ ಇಲ್ಲಿಯವರೆಗೆ 1,55,000 ಟನ್ ಕಾರ್ನ್ ಮತ್ತು 1,54,000 ಸೊಯಾಬೀನನ್ನು ವುಹಾನ್‌ಗೆ ಸರಬರಾಜು ಮಾಡಿದೆ. ತರಕಾರಿಗಳನ್ನು ಸಾಗಿಸಲು ವಿಶೇಷ ಟ್ರಕ್ಕುಗಳ ವ್ಯವಸ್ಥೆ ಮಾಡಲಾಗಿದೆ. ಸ್ಥಳೀಯ ಆಡಳಿತ ಬಯಲು ಮಾರುಕಟ್ಟೆಗಳನ್ನು ಸಂಘಟಿಸಿತ್ತು.

ಭಾರತದಲ್ಲಿ ಆದಾಯ ಬೆಂಬಲಿತ ಯೋಜನೆಗಳನ್ನು ಘೋಷಿಸಿದ ಮೊದಲ ರಾಜ್ಯ ಕೇರಳ. 15 ಕೆಜಿ ಧಾನ್ಯ ಮತ್ತು ರಿಯಾಯಿತಿ ದರದಲ್ಲಿ ಊಟವನ್ನು ಒದಗಿಸಿತು. ತಮಿಳುನಾಡು ಸರ್ಕಾರ ಅಕ್ಕಿ, ಸಕ್ಕರೆ, ಎಣ್ಣೆ ಹಾಗೂ ಬೇಳೆಯನ್ನು ಪಡಿತರ ಚೀಟಿ ಇರುವ ಎಲ್ಲರಿಗೂ ಪುಕ್ಕಟೆಯಾಗಿ ವಿತರಿಸುವುದಾಗಿ ತಿಳಿಸಿದೆ. ಅಸಂಘಟಿತ ಕೆಲಸಗಾರರಿಗೆ ಪಡಿತರವನ್ನು ಅಮ್ಮಾ ಕ್ಯಾಂಟೀನ್ ಮುಖಾಂತರ ಹಂಚಲಾಗುತ್ತಿದೆ. ದೆಹಲಿ ಸರ್ಕಾರ ರೇಷನ್ನಿನ ಪ್ರಮಾಣವನ್ನು 1.5ರಷ್ಟು ಹೆಚ್ಚಿಸಿದೆ. ಇದನ್ನು ರೇಷನ್ ಕಾರ್ಡ್ ಹೊಂದಿರುವವರಿಗೆ ವಿತರಿಸಲಾಗುತ್ತಿದೆ.

ಯೋಜನೆಯ ಪ್ರಮುಖ ಅಂಶಗಳು:



ಭಾರತದಲ್ಲಿ ಪಡಿತರ ವ್ಯವಸ್ಥೆಯನ್ನು ವಿಸ್ತರಿಸುವಾಗ ಕೆಳಕಂಡ ಅಂಶಗಳನ್ನು ಅದರಲ್ಲಿ ಸೇರಿಸಿಕೊಳ್ಳಬೇಕು. ಮೊದಲನೆಯದಾಗಿ ಎಲ್ಲಾ ಗ್ರಾಮೀಣ ಕುಟುಂಬಗಳಿಗೂ ಈಗ ಕೊಡುತ್ತಿರುವ ಎರಡರಷ್ಟು ಅಕ್ಕಿ ಹಾಗೂ ಗೋಧಿಯನ್ನು ನೀಡಬೇಕು. ಈಗ ಸಧ್ಯಕ್ಕೆ ಭಾರತೀಯ ಆರೋಗ್ಯ ಸಂಶೋಧನಾ ಕೌನ್ಸಿಲ್ ಶಿಫಾರಸ್ಸು ಮಾಡಿರುವ ಕನಿಷ್ಠ ಪ್ರಮಾಣದ ದವಸಧಾನ್ಯಗಳ ಅರ್ಧದಷ್ಟನ್ನು ಮಾತ್ರ ನೀಡಲಾಗುತ್ತಿದೆ. ಇನ್ನು ಮುಂದೆ ಪ್ರತಿಯೊಬ್ಬನಿಗೂ ವಾಸ್ತವವಾಗಿ ಬೇಕಾಗಿರುವಷ್ಟನ್ನು ಒದಗಿಸಬೇಕು. ಈಗ ಭಾರತ ಸರ್ಕಾರ ಆದ್ಯತೆಯ ಕುಟುಂಬಗಳಿಗೆಲ್ಲಾ ನೀಡುತ್ತಿರುವ ಪಡಿತರವನ್ನು ಎರಡು ಪಟ್ಟು (ಅಕ್ಕಿ ಅಥವಾ ಗೋಧಿ) ಹೆಚ್ಚಿಸಿದೆ. ಅಂದರೆ ಅದರ ಪ್ರಮಾಣವನ್ನು ಪ್ರತಿ ವ್ಯಕ್ತಿಗೆ 5ರಿಂದ 10ಕೆಜಿಗೆ ಏರಿಸಿದೆ. ಆದರೆ ಇದು ಸಾಲುವುದಿಲ್ಲ. ಯಾಕೆಂದರೆ ಇದರಲ್ಲಿ ಎಲ್ಲಾ ಕುಟುಂಬಗಳೂ ಸೇರುವುದಿಲ್ಲ. ಕೇವಲ ಆದ್ಯತೆಯ ಕುಟುಂಬಗಳು ಮಾತ್ರ ಸೇರುತ್ತವೆ. ಜೊತೆಗೆ ಪಡಿತರವನ್ನು ಸಂಪೂರ್ಣವಾಗಿ ಪುಕ್ಕಟೆಯಾಗಿ ನೀಡುತ್ತಿಲ್ಲ. ಹಚ್ಚುವರಿಯಾಗಿ ನೀಡುತ್ತಿರುವ 5 ಕೆಜಿ ಮಾತ್ರ ಪುಕ್ಕಟ್ಟೆ. ಉಳಿದದ್ದಕ್ಕೆ ಹಣ ಕೊಡಬೇಕು.

ಪಡಿತರ ವ್ಯವಸ್ಥೆ ಸಾರ್ವತ್ರಿಕವಾಗಬೇಕು. ಇದು ಪಡಿತರ ಚೀಟಿಯ ಆಧಾರದ ಮೇಲೆ ಕುಟುಂಬಗಳನ್ನು ಪ್ರತ್ಯೇಕಿಸಬೇಕಾದ ಸಮಯವಲ್ಲ. ಅಥವಾ ಅವರಲ್ಲಿ ಪಡಿತರಚೀಟಿ ಇದೆಯೇ ಇಲ್ಲವೇ ಎಂದು ನೋಡುವುದಾಗಲಿ, ಅಥವಾ ಬಯೋಮೆಟ್ರಿಕ್ ಬಳಸುವುದಾಗಲಿ ಸರಿಯಲ್ಲ. ಆದ್ಯತೆಯ ಕುಟುಂಬಗಳ ಪಟ್ಟಿಯೂ ಸಂಪೂರ್ಣವಾಗಿ ಸರಿಯಾಗಿಲ್ಲ. ಅದರಲ್ಲೂ ಸಾಕಷ್ಟು ನ್ಯೂನತೆಗಳಿವೆ. ಯಾವುದೇ ಕುಟುಂಬವೂ ಇಂದು ಪಡಿತರ ವ್ಯವಸ್ಥೆಯಿಂದ ತಪ್ಪಾಗಿ ಆಚೆ ಉಳಿಯಬಾರದು.

ಈಗ 58 ಮಿಲಿಯನ್ ಟನ್ ಅಕ್ಕಿ ಮತ್ತು ಗೋಧಿಯ ಸ್ಟಾಕ್ ಇರುವುದರಿಂದ ಹೆಚ್ಚುವರಿ ರೇಷನ್ ಕೊಡುವುದಕ್ಕೆ ಸಾಧ್ಯವಿದೆ. ಎರಡನೆಯದಾಗಿ, ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ಅಧಿಕ ಎಣ್ಣೆ, ಸಕ್ಕರೆ, ಉಪ್ಪು ಹಾಗೂ ಬೇಳೆಕಾಳುಗಳ ಪಡಿತರವನ್ನು ನಿಯಮಿತವಾಗಿ ಒದಗಿಸಬೇಕು. ಆ ಪಟ್ಟಿಯಲ್ಲಿ ಸಾಬೂನನ್ನೂ ಸೇರಿಸಬೇಕು. ಅವು ಸರಿಯಾಗಿ ಪೂರೈಕೆಯಾಗುವುದಕ್ಕೆ ಒಂದು ವ್ಯವಸ್ಥೆ ಬೇಕಾಗುತ್ತದೆ. ನಿರಂತರವಾಗಿ ವಿತರಿಸುವುದಕ್ಕೆ ಅನುಕೂಲವಾಗುವಂತೆ ವಾರಕ್ಕೋ ಅಥವಾ ಹದಿನೈದು ದಿನಕ್ಕೋ ಒಮ್ಮೆ ವಿತರಿಸಬಹುದು. ಭಾರತ ಸರ್ಕಾರ ಪ್ರತಿ ಕುಟುಂಬಕ್ಕೆ ಒಂದು ಕೆ.ಜಿ ಬೇಳೆಯನ್ನು ಘೋಷಿಸಿರುವುದು ಒಳ್ಳೆಯದು. ಆದರೆ ಹೆಚ್ಚಿನ ಪದಾರ್ಥಗಳನ್ನು ತಕ್ಷಣದಲ್ಲಿ ವಿತರಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ, ಹಾಲು, ಮೊಟ್ಟೆ ಹಾಗೂ ತರಕಾರಿ (ಅಥವಾ ಅವುಗಳಲ್ಲಿ ಕನಿಷ್ಠ ಒಂದನ್ನಾದರೂ) ಪೂರೈಸುವುದಕ್ಕೆ ಸಾಧ್ಯವಾದರೆ ಆಹಾರದ ಒಂದು ದೊಡ್ಡ ಬಿಕ್ಕಟ್ಟಿನ ಸಮಯದಲ್ಲಿ ಕೇವಲ ಮೂಲಭೂತ ಆಹಾರಕ್ಕೆ ರಕ್ಷಣೆ ನೀಡುವುದಷ್ಟೇ ಅಲ್ಲದೆ ಅಪೌಷ್ಠಿಕತೆಯ ಸವಾಲನ್ನೂ ಎದುರಿಸಿದಂತೆ ಆಗುತ್ತದೆ.

ನಗರ ಪ್ರದೇಶಗಳಿಗೆ, ಆಹಾರ ಪದಾರ್ಥಗಳ ಜೊತೆಗೆ ಊಟಕ್ಕೂ ವ್ಯವಸ್ಥೆ ಮಾಡಬೇಕು. ಗ್ರಾಮೀಣ ಪ್ರದೇಶಗಳಿಗೆ ಸೂಚಿಸಿದ ಆಹಾರ ಪದಾರ್ಥಗಳನ್ನೇ ಪಡಿತರಚೀಟಿಗಳನ್ನು ಹೊಂದಿರುವ ನಗರವಾಸಿಗಳಿಗೂ ನೀಡಬಹುದು. ನಗರಗಳು ಹಾಗೂ ಪಟ್ಟಣಗಳಲ್ಲಿರುವ ಬಹುಸಂಖ್ಯಾತ ಕಾರ್ಮಿಕರು ಹಾಗೂ ವಲಸೆಗಾರರಿಗೆ ಊಟದ ವ್ಯವಸ್ಥೆ ಮಾಡಬೇಕು. ಮುಚ್ಚಿರುವ ಅನೇಕ ಸಾಮುದಾಯಿಕ ಅಡಿಗೆ ಮನೆಗಳನ್ನು (ಉದಾಹರಣೆಗೆ ಶಾಲೆ ಮತ್ತು ಕಾಲೇಜುಗಳು, ಕಂಪೆನಿ ಹಾಗೂ ಕಛೇರಿಗಳ ಕ್ಯಾಂಟೀನ್) ಮತ್ತು ಕೆಲಸವಿಲ್ಲದೆ ಕುಳಿತಿರುವ ಹೋಟೆಲ್ ಕಾರ್ಮಿಕರನ್ನು ಒಟ್ಟಿಗೆ ಸೇರಿಸಿಕೊಂಡು ದೊಡ್ಡ ಪ್ರಮಾಣದಲ್ಲಿ ಸಿದ್ಧ ಆಹಾರವನ್ನು ರಿಯಾಯ್ತಿ ದರದಲ್ಲಿ ಸರಬರಾಜು ಮಾಡುವ ವ್ಯವಸ್ಥೆ ಮಾಡಬಹುದು. ಕೇರಳ ಈ ವಿಷಯದಲ್ಲಿ ಒಂದು ಹೆಜ್ಜೆ ಮುಂದಿಟ್ಟಿದೆ. ಆಹಾರವನ್ನು ವಿತರಿಸಲು ಎಚ್ಚರಿಕೆಯಿಂದ ರೂಪಿಸಿರುವ ಯೋಜನೆ ಹಾಗೂ ತಂತ್ರಜ್ಞಾನ ಬೇಕು. ಭೌತಿಕ ಅಂತರವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಇದು ಅವಶ್ಯಕ. ಕರ್ನಾಟಕ ಮಾಡಿದಂತೆ ಇಂದಿರಾ ಕ್ಯಾಂಟಿನ್ ಮುಚ್ಚುವುದು ಪರಿಹಾರವಲ್ಲ.


ಈ ಎಲ್ಲಾ ಕ್ರಮಗಳು ಕನಿಷ್ಠ ಮೂರು ತಿಂಗಳು ಮುಂದುವರಿಯಬೇಕು. ಅನಂತರ ಇದನ್ನು ಪುನರ್‌ಪರಿಶೀಲಿಸಬೇಕು. ವಿಸ್ತೃತ ರೇಷನ್ ವ್ಯವಸ್ಥೆಗೆ ಸಂಬಂಧಿಸಿದಂತೆ ಹಮ್ಮಿಕೊಳ್ಳುವ ಸೃಜನಶೀಲ ಯೋಜನೆ ಸಧ್ಯದ ಮಹಾಮಾರಿಗೆ ರಕ್ಷಣೆಯಾಗುವುದರ ಜೊತೆಗೆ ಜನತೆಯನ್ನು ಸುಪುಷ್ಟರು ಹಾಗೂ ಆರೋಗ್ಯವಂತರನ್ನಾಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಬದಲಾವಣೆಯನ್ನು ತರುವುದಕ್ಕೂ ಅನುಕೂಲವಾಗುತ್ತದೆ.

Madhura Swaminathan is Professor at the Economic Analysis Unit, Indian Statistical Institute

ವಲಸೆಯನ್ನು ಕುರಿತಂತೆ ಅಭಿಜಿತ್ ಬ್ಯಾನರ್ಜಿಯವರು ಹಾಗೂ ಎಸ್ತರ್ ಡಫ್ಲೊ ದಂಪತಿಗಳು ಮಾಡಿದ ಅಧ್ಯಯನದ ಮೊದಲ ಭಾಗವನ್ನು ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಈಗ ಅದರ ಎರಡನೆಯ ಭಾಗವನ್ನು ಇಲ್ಲಿ ಕೊಡುತ್ತಿದ್ದೇವೆ. ಇದು ಪದಶಃ ಅನುವಾದವಲ್ಲ. ಒಂದರ್ಥದಲ್ಲಿ ವಿವರವಾದ ಟಿಪ್ಪಣಿ ಅನ್ನಬಹುದು. ಇದು ಅವರ ಪುಸ್ತಕ ಗುಡ್ ಎಕನಾಮಿಕ್ಸ್ ಫಾರ್ ಹಾರ್ಡ್ ಟೈಮ್ಸ್ ಪುಸ್ತಕದ ಮೊದಲ ಅಧ್ಯಾಯ– ಶಾರ್ಕ್ ಬಾಯಿಂದ ಆಧರಿಸಿದ ಲೇಖನ. ಇಂದು ವಲಸೆ ಕಾರ್ಮಿಕರ ವಿಷಯ ಹಲವು ಕಾರಣಕ್ಕೆ ಚರ್ಚೆಯಾಗುತ್ತಿದೆ. ಆ ನಿಟ್ಟಿನಲ್ಲಿ ತೀರಾ ಆರೋಗ್ಯವಂತ ಮನಸ್ಸಿನ ಈ ಚಿಂತನೆಯ ಮುಕ್ತ ಓದು ಸಾಧ್ಯವಾಗಬಹುದು ಎಂಬ ವಿಶ್ವಾಸದಿಂದ ಕೊಡುತ್ತಿದ್ದೇವೆ.

ಶಾರ್ಕ್‌ನ ಬಾಯಿಂದ–2

ಅಭಿಜಿತ್ ಬ್ಯಾನರ್ಜಿ, ಎಸ್ತರ್ ಡಫ್ಲೊ



ಸಂಬಂಧಗಳು

ಜನ ವಲಸೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಇದಕ್ಕೆ ಕಾರಣಗಳೂ ಇವೆ. ಬಹುಕಾಲದಿಂದ ಅಲ್ಲೇ ನೆಲೆಸಿರುವ ಸ್ಥಳೀಯರ ಜೊತೆ ಸ್ಪರ್ಧಿಸುವುದಕ್ಕೆ ವಲಸಿಗರಿಗೆ ಕಷ್ಟವಾಗುತ್ತದೆ. ಅವರಿಗೆ ಒಂದು ಗೌರವಯುತವಾದ ಕೆಲಸ ಸಿಗುವುದು ಸುಲಭವಲ್ಲ. ಹಾಗೆ ಒಳ್ಳೆಯ ಕೆಲಸ ಸಿಗಬೇಕಾದರೆ ಉದ್ಯಮದ ಒಡೆಯರು ವಲಸಿಗರ ಸಂಬಂಧಕರಾಗಿರಬೇಕು. ಇಲ್ಲವೇ ಗೆಳೆಯರಾಗಿರಬೇಕು ಅಥವಾ ಗೆಳೆಯರ ಗೆಳೆಯರೋ ಅಥವಾ ಅವರ ಕುಲದವರೋ ಆಗಿರಬೇಕು. ಅದೂ ಇಲ್ಲದಿದ್ದಲ್ಲಿ ಅವರನ್ನು ಅರ್ಥಮಾಡಿಕೊಳ್ಳುವಂತಹ ವ್ಯಕ್ತಿಗಳಾಗಿರಬೇಕು. ಆಗ ಒಳ್ಳೆಯ ಕೆಲಸ ಸಿಗಬಹುದು. ಅದೇ ಕಾರಣಕ್ಕೆ ವಲಸಿಗರು ತಮ್ಮ ಪರಿಚಿತರು ಇರುವ ಸ್ಥಳಗಳಿಗೇ ಹೋಗುತ್ತಾರೆ. ಅಲ್ಲಿ ಕೆಲಸ ಹುಡುಕಿಕೊಳ್ಳುವುದು ಸುಲಭ. ಜೊತೆಗೆ ಅಲ್ಲಿ ನೆಲೆ ಕಂಡುಕೊಳ್ಳೋಕೆ ಪರಿಚಿತರು ಸಹಾಯ ಮಾಡುತ್ತಾರೆ. ತಮಗಿಂತ ಮೊದಲೇ ಯಾರಾದರೂ ಪರಿಚಿತರು ವಲಸೆ ಹೋಗಿ ಅಲ್ಲಿ ನೆಲೆಯೂರಿದ್ದರೆ ಇವರಿಗೆ ಅನುಕೂಲ ಆಗುತ್ತದೆ. ಅವರು ರಕ್ತ ಸಂಬಂಧಿಗಳೋ, ಬಂಧುಗಳೋ ಆಗಿದ್ದರೆ ಇನ್ನೂ ಅನುಕೂಲ.

ಹಲವು ವರ್ಷಗಳ ಹಿಂದೆ ಮೆಕ್ಸಿಕೊದಲ್ಲಿ ಮಳೆಯಿಲ್ಲದೆ ಬರ ಬಂದಿದ್ದಾಗ ಅಲ್ಲಿಯ ಹಳ್ಳಿಗಳಿಂದ ಹಲವರು ವಲಸೆ ಹೋಗಿದ್ದರು. ಅವರಲ್ಲಿ ಹಲವರು ಅಮೇರಿಕೆಗೆ ಬಂದು ನೆಲೆಸಿದ್ದರು. ಅನಂತರದ ವರುಷಗಳಲ್ಲಿ ಆ ಹಳ್ಳಿಗಳಿಂದ ವಲಸೆ ಬಂದವರಿಗೆ ಇದರಿಂದ ಅನುಕೂಲವಾಯಿತು. ಏಕೆಂದರೆ ಅಮೆರಿಕೆಯಲ್ಲಿ ಈಗಾಗಲೇ ಅವರಲ್ಲಿ ಕೆಲವರು ಒಳ್ಳೆಯ ಸುರಕ್ಷಿತ ಕೆಲಸದಲ್ಲಿದ್ದರು. ಅವರು ಹೊಸದಾಗಿ ವಲಸೆ ಬಂದವರಿಗೆ ಕೆಲಸ ಹುಡುಕಿಕೊಳ್ಳಲು ಸಹಾಯ ಮಾಡುತ್ತಿದ್ದರು. ಇದನ್ನು ಕೈವನ್ ಗಮನಿಸಿದ್ದರು. ಅವರು ಒಂದೇ ಬಗೆಯ ಹವೆ ಇರುವ ಮೆಕ್ಸಿಕೋದ ಎರಡು ಹಳ್ಳಿಗಳನ್ನು ಹೋಲಿಸಿ ಒಂದು ಅಧ್ಯಯನ ಮಾಡಿದ್ದರು. ಅವರು ಅಧ್ಯಯನಕ್ಕೆ ಆರಿಸಿಕೊಂಡ ಒಂದು ಹಳ್ಳಿಯಲ್ಲಿ ಕೆಲ ವರ್ಷಗಳ ಹಿಂದ ತೀವ್ರ ಕ್ಷಾಮ ಉಂಟಾಗಿತ್ತು. ಆಗ ಒಂದಿಷ್ಟು ಜನ ಅಲ್ಲಿಂದ ವಲಸೆ ಹೋಗಿದ್ದರು. ಇನ್ನೊಂದು ಹಳ್ಳಿಯಲ್ಲಿ ಹಾಗೆ ಬರ ಬಂದಿರಲಿಲ್ಲ. ಹಾಗಾಗಿ ಅಲ್ಲಿಂದ ಯಾರೂ ವಲಸೆ ಹೋಗಿರಲಿಲ್ಲ. ಹಿಂದೆ ಕ್ಷಾಮ ಬಂದಿದ್ದ ಹಳ್ಳಿಯಿಂದ ಈಗ ವಲಸೆ ಹೋಗುವವರಿಗೆ ಕೆಲಸ ಬೇಗ ಸಿಗುತ್ತದೆ ಮತ್ತು ಒಳ್ಳೆಯ ಕೆಲಸವೂ ಸಿಗುತ್ತದೆ ಎಂದು ಕೈವನ್ ಊಹಿಸಿದರು. ವಾಸ್ತವದಲ್ಲಿ ಆಗಿದ್ದೂ ಹಾಗೆಯೆ. ಪರಿಚಯದ ಜಾಲ ಮುಖ್ಯವಾಗುತ್ತದೆ.

ನಿರಾಶ್ರಿತರ ಪುನರ್ವಸತಿಯ ವಿಷಯದಲ್ಲೂ ಇದು ನಿಜ. ಒಂದು ದೇಶದಿಂದ ನಿರಾಶ್ರಿತರು ಈ ಮೊದಲೇ ಬಂದು ನೆಲಸಿರುವ ಸ್ಥಳಗಳಲ್ಲಿ ಹೊಸದಾಗಿ ಬರುವ ನಿರಾಶ್ರಿತರಿಗೆ ಕೆಲಸ ಸಿಗುವ ಸಾಧ್ಯತೆಗಳು ಹೆಚ್ಚು. ಈಗಾಗಲೇ ನೆಲೆನಿಂತ ನಿರಾಶ್ರಿತರಿಗೆ ತಮ್ಮ ದೇಶದಿಂದ ಹೊಸದಾಗಿ ಬರುವ ನಿರಾಶ್ರಿತರ ಪರಿಚಯ ಇಲ್ಲದೇ ಇರಬಹುದು. ಆದರೂ ತಮ್ಮ ರಾಷ್ಟ್ರದವರಿಗೆ ಸಹಾಯ ಮಾಡಬೇಕೆಂಬ ಒತ್ತಡ ಅವರ ಮೇಲಿರುತ್ತದೆ.

ಸಂಬಂಧಗಳು ಮತ್ತು ಬಂಧುಗಳು ಇರುವವರಿಗೆ ಅನುಕೂಲಗಳು ಹೆಚ್ಚು. ಆದರೆ ಅವು ಇಲ್ಲದೇ ಇರುವವರ ಕಥೆ ಏನು? ಅಂತಹವರು ನಿಸ್ಸಂಶಯವಾಗಿ ಹೆಚ್ಚು ಪ್ರತಿಕೂಲ ಪರಿಸ್ಥಿತಿಯಲ್ಲಿರುತ್ತಾರೆ. ಶಿಫಾರಸ್ಸುಗಳೊಂದಿಗೆ ಬರುವವರು ಉಳಿದವರೆಲ್ಲರ ಅವಕಾಶಗಳನ್ನು ಹಾಳುಮಾಡುತ್ತಾರೆ. ಶಿಫಾರಸ್ಸುಗಳನ್ನು ತಂದ ಕಾರ್ಮಿಕರನ್ನೇ ನೇಮಿಸಿಕೊಂಡು ಅಭ್ಯಾಸವಾಗಿರುವ ಮಾಲೀಕರು ಶಿಫಾರಸ್ಸಿಲ್ಲದೆ ಬರುವವರನ್ನು ಅನುಮಾನದಿಂದ ನೋಡುತ್ತಾರೆ. ಇದು ಎಲ್ಲ–ರಿಗೂ ಗೊತ್ತು. ಹಾಗಾಗಿ ಈಗ ಎಲ್ಲರೂ ಶಿಫಾರಸ್ಸು ಪಡೆಯಲು ಕಾಯುತ್ತಾರೆ. ಶಿಫಾರಸ್ಸು ಪಡೆಯಲು ಸಾಧ್ಯವಾಗದವರು ಕೆಲಸಕ್ಕಾಗಿ ಸಂಸ್ಥೆಯಿಂದ ಸಂಸ್ಥೆಗೆ ಅಲೆಯುತ್ತಾರೆ. ಆದರೆ ಮಾಲೀಕರು ಅವರನ್ನು ಗಮನಿಸುವುದೂ ಇಲ್ಲ. ಮತ್ತು ಇದು ಸರಿ ಕೂಡ.

ನೋಬೆಲ್ ಪ್ರಶಸ್ತಿ ಪಡೆದಿರುವ ಜಾರ್ಜ್ ಅಕೆರ್‌ಲಾಫ್ 1970ರಲ್ಲಿ “ಮಾರ್ಕೆಟ್ ಫಾರ್ ಲೆಮನ್ಸ್” ಎಂಬ ಲೇಖನವೊಂದನ್ನು ಪ್ರಕಟಿಸಿದರು. ಅದನ್ನು ಪ್ರಕಟಿಸಿದಾಗ ಅವರು ಇನ್ನೂ ಪಿಎಚ್‌ಡಿ ವಿದ್ಯಾರ್ಥಿ. ಸಾಮಾನ್ಯವಾಗಿ ಜನ ತಮ್ಮ ಬಳಿಯಿರುವ ಕಳಪೆ ಕಾರನ್ನು ಮಾರಲು ಪ್ರಯತ್ನಿಸುತ್ತಾ ಇರುತ್ತಾರೆ. ಅವರಿಗೆ ಬೇಡ ಎನ್ನುವ ಕಾರಣಕ್ಕೆ ಅದನ್ನು ಮಾರುತ್ತಿದ್ದಾರೆ ಅನ್ನುವುದು ಕೊಳ್ಳುವವರಿಗೂ ಗೊತ್ತಿರುತ್ತದೆ.



ಕೊಳ್ಳುವವರಿಗೆ ಕಾರಿನ ಗುಣಮಟ್ಟದ ಬಗ್ಗೆ ಅನುಮಾನ ಇದ್ದೇ ಇರುತ್ತದೆ. ಅವರ ಅನುಮಾನ ಹೆಚ್ಚಾದಷ್ಟೂ ಮಾರುಕಟ್ಟೆಯಲ್ಲಿ ಅದರ ಬೆಲೆ ಕಡಿಮೆಯಾಗುತ್ತದೆ. ಬೆಲೆ ತುಂಬಾ ಕಡಿಮೆಯಾದರೆ ಅವರು ಅದನ್ನು ಮಾರುವುದಿಲ್ಲ ಅಥವಾ ಮಾರಿದರೂ ತಮ್ಮ ಪರಿಚಿತರಿಗೆ ಮಾರುತ್ತಾರೆ. ತಮಗೆ ಕಾರು ಉಪಯೋಗಕ್ಕೆ ಬರುವುದೇ ಇಲ್ಲ ಅಂತಾದಾಗ ಮಾತ್ರ ಮುಕ್ತ ಮಾರುಕಟ್ಟೆಯಲ್ಲಿ ಮಾರುತ್ತಾರೆ. ಅಂದರೆ ಮಾರುಕಟ್ಟೆಯಲ್ಲಿ ಸಿಗುವುದು ಕಳಪೆ ಕಾರುಗಳು ಮತ್ತು ಕಡಿಮೆ ಗುಣಮಟ್ಟದ ಕೆಲಸಗಾರರು ಮಾತ್ರ. ಇಂತಹ ಪ್ರಕ್ರಿಯೆಯನ್ನು ಪ್ರತಿಕೂಲ ಆಯ್ಕೆ ಅಂದರೆ Adverse selection ಎಂದು ಕರೆಯುತ್ತಾರೆ.

ಮನೆಯ ಸುಖಗಳು

ದಿಲ್ಲಿಯ ಕೊಳಚೆ ಪ್ರದೇಶದ ನಿವಾಸಿಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಒಮ್ಮೆ ಅಭಿಜಿತ್ ಹಲವರನ್ನು ಸಂದರ್ಶಿಸಿದರು. ಒಮ್ಮೆ ಹಾಗೆ ಸಂದರ್ಶನ ಮಾಡುವಾಗ ಕೊಳೆಗೇರಿಯಲ್ಲಿ ಅವರಿಗೆ ತುಂಬಾ ಇಷ್ಟವಾದ ಅಂಶ ಯಾವುದು ಎಂದು ಕೇಳುತ್ತಾರೆ. ಅಲ್ಲಿ ಅವರಿಗೆ ಹಲವು ಅಂಶಗಳು ಇಷ್ಟವಾಗಿದ್ದವು. ಅಲ್ಲಿ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅವರಿಗೆ ಹಲವು ಆಯ್ಕೆಗಳು ಸಾಧ್ಯವಿದ್ದವು. ವೈದ್ಯಕೀಯ ಸೌಲಭ್ಯವಿತ್ತು. ಕೆಲಸ ಹುಡುಕಿಕೊಳ್ಳುವುದು ಹೆಚ್ಚು ಸುಲಭವಾಗಿತ್ತು. ಅವರಿಗೆ ಇಷ್ಟವಾಗದೇ ಇದ್ದದ್ದು ಅಲ್ಲಿನ ವಾತಾವರಣ. ಅದರಲ್ಲಿ ಅಚ್ಚರಿಯೇನಿಲ್ಲ. ಇಡೀ ಪ್ರಪಂಚದಲ್ಲಿ ದಿಲ್ಲಿಯ ಗಾಳಿ ಅತ್ಯಂತ ಕಲುಷಿತವಾದದ್ದು. ಸಂದರ್ಶಿಸಿದವರಲ್ಲಿ ಶೇಕಡ 69ರಷ್ಟು ಜನ ತಮ್ಮ ಸುತ್ತ ಮುತ್ತಲಿರುವ ಮೋರಿ ಗಟಾರಗಳನ್ನು, ಚರಂಡಿಗಳನ್ನು ಸರಿಪಡಿಸಬೇಕು ಎಂದರು. ಶೇಕಡ 54ರಷ್ಟು ಜನ ಸುತ್ತಲಿರುವ ಕಸದರಾಶಿಯನ್ನು ತೆಗೆಯಬೇಕೆಂದರು. ಅವರು ಹೇಳುವುದೆಲ್ಲಾ ಸರಿ. ಅಲ್ಲೆಲ್ಲಾ ಚರಂಡಿಗಳು ಕಟ್ಟಿಕೊಂಡಿರುವುದು, ಕಸ ರಾಶಿರಾಶಿಯಾಗಿ ಬಿದ್ದಿರುವುದು ಸರ್ವೆಸಾಮಾನ್ಯ. ಹೆಚ್ಚಿನ ಬಾರಿ ಅಲ್ಲಿ ಮೋರಿಗಳೇ ಇರುವುದಿಲ್ಲ. ಇವೆಲ್ಲಾ ಒಟ್ಟಾಗಿ ಸೇರಿಕೊಂಡು ಕೊಳಚೆ ಪ್ರದೇಶಗಳಿಗೇ ವಿಶಿಷ್ಟವಾದ ಒಂದು ನಾತ ಸೃಷ್ಟಿಯಾಗಿರುತ್ತದೆ.

ಕೊಳಚೆ ಪ್ರದೇಶಗಳಲ್ಲಿ ಬದುಕುವವರು ಸಾಮಾನ್ಯವಾಗಿ ತಮ್ಮ ಜೊತೆಗೆ ಕುಟುಂಬದವರನ್ನು ಕರೆತರುವುದಿಲ್ಲ. ಅಲ್ಲಿ ಬದುಕು ತುಂಬಾ ದುರ್ಭರ ಎನಿಸಿದಾಗ ಅವರೇ ಮನೆಗೆ ಹೋಗಿ ಬರುತ್ತಾರೆ. ರಾಜಸ್ತಾನದ ಗ್ರಾಮೀಣ ಪ್ರದೇಶಗಳಲ್ಲಿ ಹಣ ಸಂಪಾದನೆಗೆಂದು ವಲಸೆ ಹೋಗಿರುವವರು ತಿಂಗಳಿಗೊಮ್ಮೆ ಮನೆಗೆ ಬರುತ್ತಾರೆ. ಎಲ್ಲೋ ಕೆಲವರು ಎರಡು ಮೂರು ತಿಂಗಳು ಬಾರದೇ ಇರಬಹುದು. ಹೆಚ್ಚಿನ ವಲಸಿಗರು ತಮ್ಮ ಹಳ್ಳಿಯ ಹತ್ತಿರದಲ್ಲೇ ಉಳಿದುಕೊಳ್ಳುತ್ತಾರೆ. ಹಾಗಾಗಿ ಅವರಿಗೆ ಸಿಗುವ ಕೆಲಸಗಳು ಮತ್ತು ಅವರು ಪಡೆದುಕೊಳ್ಳಬಹುದಾದ ಕೌಶಲಗಳೂ ಸೀಮಿತವಾಗಿರುತ್ತವೆ.

ಆದರೆ ಅವರೇಕೆ ಕೊಳಚೆ ಪ್ರದೇಶಗಳಲ್ಲಿ ಅಥವಾ ಅದಕ್ಕಿಂತ ಹೊಲಸಾಗಿರುವ ಸ್ಥಳಗಳಲ್ಲಿ ಉಳಿದುಕೊಳ್ಳುತ್ತಾರೆ? ಅದಕ್ಕಿಂತ ಒಳ್ಳೆಯ ಸ್ಥಳಗಳಲ್ಲಿ ಬದುಕಬಾರದೆ? ಅವರಲ್ಲಿ ಕೆಲವರಿಗಾದರೂ ಈಗ ಕೊಡುತ್ತಿರುವುದಕ್ಕಿಂತ ಹೆಚ್ಚಿನ ಬಾಡಿಗೆ ಕೊಡುವುದಕ್ಕೆ ಸಾಧ್ಯವಿದೆ. ಹಾಗಿದ್ದಾಗ್ಯೂ ಹೀಗೇಕೆ? ಇದು ಅಭಿವೃದ್ಧಿಶೀಲ ರಾಷ್ಟ್ರಗಳ ಸಮಸ್ಯೆ. ಅಲ್ಲಿ ಇದಕ್ಕಿಂತ ಸುಮಾರಾದ ಸ್ಥಳ ಅವರ ಕೈಗೆಟುಕುವುದಿಲ್ಲ. ಮಧ್ಯಮ ಸ್ತರದ ಮನೆಗಳು ನಮ್ಮಲ್ಲಿ ಲಭ್ಯವಿಲ್ಲ. ಮೂರನೆಯ ಪ್ರಪಂಚದ ಹೆಚ್ಚಿನ ನಗರಗಳಲ್ಲಿ ಈ ಜನಸಮುದಾಯಕ್ಕೆ ಬೇಕಾದ ಮೂಲಭೂತ ವ್ಯವಸ್ಥೆ ಇಲ್ಲವೇ ಇಲ್ಲ. ಇತ್ತೀಚಿನ ವರದಿಯೊಂದರ ಪ್ರಕಾರ, 2016ರಿಂದ 2040ರ ಅವಧಿಗೆ ಮೂಲಭೂತ ವ್ಯವಸ್ಥೆಯನ್ನು ಕಲ್ಪಿಸಲು ಭಾರತಕ್ಕೆ



4.5 ಟ್ರಿಲಿಯನ್, ಕೆನ್ಯಾಕ್ಕೆ 223 ಬಿಲಿಯನ್ ಡಾಲರ್ ಮತ್ತು ಮೆಕ್ಸಿಕೋಗೆ 1.1 ಟ್ರಿಲಿಯನ್ ಡಾಲರ್‌ಗಳು ಬೇಕು. ಇದರರ್ಥವೇನೆಂದರೆ, ಸ್ವಲ್ಪ ಮರ್ಯಾದೆಯಿಂದ ಬದುಕಬಹುದಾದ ಒಳ್ಳೆಯ ಗುಣಮಟ್ಟದ ಮೂಲವ್ಯವಸ್ಥೆ ಹೆಚ್ಚಿನ ನಗರಗಳಲ್ಲಿ ಕೂಡ ಕಷ್ಟ. ಎಲ್ಲೋ ಕೆಲವು ಕಡೆ ಮಾತ್ರ ಇರುತ್ತದೆ. ಆದರೆ ಅವುಗಳಿಗೆ ಸಿಕ್ಕಾಪಟ್ಟೆ ಬೇಡಿಕೆ ಇರುತ್ತದೆ. ನಿವೇಶನದ ಬೆಲೆಯೂ ಗಗನದಲ್ಲಿರುತ್ತದೆ. ಇಡೀ ವಿಶ್ವದಲ್ಲೇ ಅತ್ಯಂತ ದುಬಾರಿ ಬೆಲೆಯ ಕೆಲವು ನಿವೇಶನಗಳು ಭಾರತದಲ್ಲಿವೆ. ಹೀಗೆ ದುಬಾರಿ ಬೆಲೆ ಕೊಡಲಾಗದೆ ಜನ ನಗರದ ಹೊರವಲಯದಲ್ಲಿ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಆ ಪ್ರದೇಶಗಳು ಅಡ್ಡಾದಿಡ್ಡಿಯಾಗಿ ಬೆಳೆಯುತ್ತವೆ. ಯಾರೂ ಆಕ್ರಮಿಸಿಕೊಳ್ಳದೆ ಉಳಿದಿರುವ ಜಾಗದಲ್ಲಿ ಬಡವರು ನೆಲಸುತ್ತಾರೆ. ಅಲ್ಲಿ ಒಳಚರಂಡಿ ವ್ಯವಸ್ಥೆ ಇದೆಯೋ ಇಲ್ಲವೋ, ನೀರಿನ ಪೈಪುಗಳು ಇವೆಯೋ ಇಲ್ಲವೋ ಮುಂತಾದವುಗಳ ಬಗ್ಗೆ ಅವರು ತಲೆಕೆಡಿಸಿಕೊಳ್ಳುವುದಿಲ್ಲ. ಇರೋದಕ್ಕೆ ಒಂದು ಚೂರು ಜಾಗಕ್ಕಾಗಿ ಹತಾಶರಾಗಿರುತ್ತಾರೆ. ಸಿಕ್ಕ ಜಾಗದಲ್ಲಿ ಉಳಿಯುತ್ತಾರೆ. ಅದೂ ಅವರದ್ದಲ್ಲ. ಹಾಗಾಗಿ ಯಾರು, ಯಾವ ಕ್ಷಣದಲ್ಲಿ ತಮ್ಮನ್ನು ಒಕ್ಕಲೆಬ್ಬಿಸುತ್ತಾರೋ ಎನ್ನುವ ಆತಂಕದಲ್ಲೇ ಇರುತ್ತಾರೆ. ಆದ್ದರಿಂದ ಅವರು ತಾತ್ಕಾಲಿಕ ಗುಡಿಸಿಲುಗಳನ್ನು ಕಟ್ಟಿಕೊಳ್ಳುತ್ತಾರೆ. ಇವು ನಗರದ ಹೊರಮೈಯಲ್ಲಿ ಗಾಯದ ಗುರುತುಗಳಂತೆ ಎದ್ದು ಕಾಣುತ್ತವೆ. ಇವೇ ತೃತೀಯ ಜಗತ್ತಿನ ಪ್ರಖ್ಯಾತ ಕೊಳಚೆ ಪ್ರದೇಶಗಳು.

ನಗರಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎಡ್ ಗ್ಲೇಸರ್ ಬರೆದಿರುವ ಟ್ರಯಂಫ್ ಆಫ್ ದ ಸಿಟಿ ಒಂದು ಅದ್ಭುತವಾದ ಪುಸ್ತಕ. ಅದರಲ್ಲಿ ನಗರ ನಿರ್ಮಾಣವನ್ನು ಯೋಜಿಸುವವರು ಈ ಪರಿಸ್ಥಿತಿಯನ್ನು ಹೇಗೆ ಮತ್ತಷ್ಟು ಉಲ್ಬಣಗೊಳಿಸುತ್ತಾರೆ ಎನ್ನುವುದನ್ನು ವಿವರಿಸಿದ್ದಾರೆ. ಮಧ್ಯಮವರ್ಗದ ಜನರಿಗೆ ಒತ್ತೊತ್ತಿಗೆ, ಎತ್ತರಕ್ಕೆ ಮನೆ ಕಟ್ಟಿಕೊಳ್ಳುವುದಕ್ಕೆ ಅವರು ಅವಕಾಶ ಕೊಡುವುದಿಲ್ಲ. ಅದಕ್ಕೆ ಬದಲಾಗಿ ಉದ್ಯಾನ ನಗರಿಯನ್ನು ಕಟ್ಟುವುದು ಅವರ ಗುರಿಯಾಗಿರುತ್ತದೆ. ಗೃಹನಿರ್ಮಾಣಕ್ಕೆ ಸಂಬಂಧಿಸಿದ ನಿಯಮಗಳು ಪ್ಯಾರಿಸ್, ನ್ಯೂ ಯಾರ್ಕ್ ಅಥವಾ ಸಿಂಗಪುರದಲ್ಲಿ ಇರುವುದಕ್ಕಿಂತಲೂ ಭಾರತದಲ್ಲಿ ಹೆಚ್ಚು ಬಿಗಿಯಾಗಿವೆ. ಹಾಗಾಗಿ ನಗರಗಳು ಅಡ್ಡಾದಿಡ್ಡಿಯಾಗಿ ಹರಡಿಕೊಂಡಿರುತ್ತವೆ. ಹೆಚ್ಚಿನ ಭಾರತೀಯ ನಗರಗಳಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ತಲುಪಲು ತುಂಬಾ ದೂರ ಪ್ರಯಾಣ ಮಾಡಬೇಕಾಗುತ್ತದೆ. ಇದೇ ಸಮಸ್ಯೆ ಚೀನಾ ಮತ್ತು ಇನ್ನೂ ಹಲವು ದೇಶಗಳಲ್ಲೂ ಇವೆ. ಆದರೆ ಭಾರತದಷ್ಟು ತೀವ್ರ ಸ್ವರೂಪದಲ್ಲಿಲ್ಲ.

ಇಂತಹ ನಿಯಮಗಳಿಂದಾಗಿ ಕಡಿಮೆ ಆದಾಯದವರು, ವಲಸಿಗರು ತುಂಬಾ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಜನಸಂದಣಿಯಿರುವ ಕೊಳಚೆ ಪ್ರದೇಶವೊಂದರಲ್ಲಿ ತೂರಿಕೊಳ್ಳಬೇಕಾಗುತ್ತದೆ (ಅದೃಷ್ಟ ಚೆನ್ನಾಗಿದ್ದು ಅದು ಸಿಕ್ಕರೆ), ಇಲ್ಲದಿದ್ದರೆ ಪ್ರತಿದಿನ ಗಂಟೆಗಟ್ಟಲೆ ಪ್ರಯಾಣಕ್ಕೆ ತಯಾರಿರಬೇಕು, ಅಥವಾ ಸೇತುವೆಯ ಅಡಿಯಲ್ಲೋ, ತಾನು ಕಟ್ಟುತ್ತಿರುವ ಕಟ್ಟಡದ ನೆಲದ ಮೇಲೋ, ತನ್ನ ರಿಕ್ಷಾದೊಳಗೋ ಅಥವಾ ತನ್ನ ಲಾರಿಯಡಿಯಲ್ಲೋ, ಇಲ್ಲವೇ ರಸ್ತೆಬದಿಯಲ್ಲಿ ಅಂಗಡಿಯೊಂದರ ಚಾಚಿರುವ ಮಾಡಿನ ಕೆಳಗೋ ಮಲಗಬೇಕಾಗುತ್ತದೆ. ಇವೆಲ್ಲಾ ನಿರಾಸೆಗಳನ್ನೂ ಮೀರಿಕೊಂಡು ಕೆಲಸ ಹುಡುಕಿ ನಡೆದರೆ ಕಡಿಮೆ ಕೌಶಲವಿರುವ ವಲಸಿಗರಿಗೆ ಸಿಗುವುದು ಯಾರೂ ಮಾಡಲು ಇಷ್ಟಪಡದ ಕೆಲಸಗಳು. ಕೊನೆಯ ಪಕ್ಷ ಇದು ಪ್ರಾರಂಭದಲ್ಲಂತೂ ನಿಜ. ನೀವು ಎಲ್ಲೋ ಆಕಸ್ಮಿಕವಾಗಿ ಸಿಕ್ಕಿಹಾಕಿಕೊಂಡಾಗ, ನಿಮಗೆ ಇನ್ಯಾವುದೇ ಆಯ್ಕೆಯೇ ಇಲ್ಲದಿದ್ದಾಗ, ಆ ಕೆಲಸಗಳನ್ನು ಮಾಡಬಹುದು. ಆದರೆ ಮನೆ, ಮಠ, ಗೆಳೆಯರು, ಎಲ್ಲರನ್ನೂ ಬಿಟ್ಟು ಪ್ರಪಂಚದ ಇನ್ನೊಂದು ಮೂಲೆಗೆ ಬಂದು ಸೇತುವೆಯಡಿ ಮಲಗಿಕೊಂಡು, ನೆಲವನ್ನು ಅಥವಾ ಬಸ್ಸಿನ ಟೇಬಲ್ಲುಗಳನ್ನು ಸ್ವಚ್ಛಗೊಳಿಸಿಕೊಂಡು ಬದುಕುವುದರಲ್ಲಿ ಎಂತಹ ಉತ್ಸಾಹ ಇರುವುದಕ್ಕೆ ಸಾಧ್ಯ? ಸಧ್ಯದ ಕಷ್ಟಗಳು, ನೋವು ಇವುಗಳಿಂದಾಚೆಗೆ ಯೋಚಿಸುತ್ತಾ, ಉದ್ಯೋಗದ ಏಣಿಯನ್ನು ನಿರಂತರ ಹತ್ತುತ್ತಾ, ಬಸ್‌ಬಾಯ್‌ನಿಂದ ಸರಣಿ ಹೋಟೆಲ್‌ಗಳ ಮಾಲಿಕನಾಗುವುದನ್ನು ಧ್ಯಾನಿಸುವ ವಲಸಿಗ ಮಾತ್ರ ಇವೆಲ್ಲಾ ಸವಾಲುಗಳನ್ನು ಎದುರಿಸಬಲ್ಲ.

ಮನೆಯ ಸೆಳೆತ ಎಂದರೆ ಅದು ಕೇವಲ ದೈಹಿಕ ಸುಖಸಾಧನಗಳು ಮತ್ತು ಶಾರೀರಿಕ ಅನುಕೂಲಗಳು ಮಾತ್ರವಲ್ಲ. ಅವುಗಳನ್ನು ಮೀರಿದ್ದು. ಬಡಜನರ ಬದುಕು ಬಹು ಬೇಗನೆ ಘಾಸಿಗೊಳಗಾಗುತ್ತದೆ. ಸ್ಥಿರವಾದ

ಆದಾಯವಿರುವುದಿಲ್ಲ. ಹೇಳಿಕೊಳ್ಳುವ ಆರೋಗ್ಯವೂ ಇರುವುದಿಲ್ಲ. ಪರಿಚಿತರು ಹಾಗೂ ಬಂಧುಗಳ ನಡುವೆ ಇದ್ದಾಗ ಕಷ್ಟದ ಹೊತ್ತಿನಲ್ಲಿ ನೆರವು ಸಿಗುವ ಸಾಧ್ಯತೆ ಇರುತ್ತದೆ. ಊರನ್ನು ತೊರೆದು ಹೋಗಿದ್ದಾಗ ಅವರ ಸಂಪರ್ಕ ಹಾಗೂ ಸಾಮಿಪ್ಯ ಎರಡನ್ನೂ ಕಳೆದುಕೊಳ್ಳುತ್ತಾರೆ. ಹೆಚ್ಚಿನ ಜನಗಳ ಜೊತೆ ಗೆಳೆತನ, ಬಾಂಧವ್ಯ ಇದ್ದಾಗ ಅಪಾಯಕ್ಕೆ, ತೊಂದರೆಗೆ ಸಿಲುಕಿಕೊಳ್ಳುವ ಸಾಧ್ಯತೆಗಳು ಕಡಿಮೆ. ಇವೆಲ್ಲವನ್ನು ಎದುರಿಸುವ ಶ್ರೀಮಂತಿಕೆ ಇದ್ದವರು ಅಥವಾ ತೀರಾ ಹತಾಶ, ನಿರಾಶಾದಾಯಕ ಸ್ಥಿತಿಯಲ್ಲಿ ಇರುವವರು ಮಾತ್ರ ಊರು ಬಿಟ್ಟು ಹೋಗಬಹುದು.

ಹೊರದೇಶಗಳಿಗೆ ವಲಸೆ ಹೋಗುವವರಿಗೂ ಈ ಮಾತು ಅನ್ವಯಿಸುತ್ತದೆ. ಮುಂದಿನ ದಿನಗಳಲ್ಲಿ ಅವರಿಗೆ ಇಷ್ಟು ಸೌಕರ್ಯವೂ ಸಿಗುವುದಿಲ್ಲ. ಮತ್ತು ಪರಿಚಯದ ಜಾಲ ವಹಿಸುವ ಪಾತ್ರವೂ ಕೂಡ ಕಡಿಮೆಯಾಗುತ್ತದೆ. ಹಾಗಾಗಿ ಅವರು ವಲಸೆ ಹೋಗುವುದೇ ಆದರೆ ಅವರು ಏಕಾಂಗಿಯಾಗಿಯೇ ಹೋಗಬೇಕಾಗುತ್ತದೆ. ತಮಗೆ ಪ್ರಿಯವಾದ, ಪರಿಚಿತವಾಗಿರುವ ಎಲ್ಲವನ್ನೂ ತೊರೆದು ಹೋಗಬೇಕಾಗುತ್ತದೆ. ಮತ್ತೆ ಹಲವು ವರ್ಷಗಳು ಇವು ಯಾವುವೂ ಅವರಿಗೆ ಸಿಗುವುದಿಲ್ಲ.

ಕೌಟುಂಬಿಕ ನಂಟುಗಳು

ಸಾಂಪ್ರದಾಯಿಕ ಸಮುದಾಯಗಳಲ್ಲಿನ ಜೀವನಕ್ರಮವೇ ಒಂದರ್ಥದಲ್ಲಿ ವಲಸೆಗೆ ತಡೆಯೊಡ್ಡುತ್ತದೆ. ಅಭಿವೃದ್ಧಿ ಅರ್ಥಶಾಸ್ತ್ರದ ಆದ್ಯರಲ್ಲಿ ಒಬ್ಬರಾದ ಹಾಗೂ 1979ರಲ್ಲಿ ನೋಬೆಲ್ ಪಾರಿತೋಷಕ ಪಡೆದ ಆರ್ಥರ್ ಲೀವಿಸ್ ಕ್ಯಾರೀಬಿಯದ ಆರ್ಥಿಕ ತಜ್ಞ, ಅವರು ಇದಕ್ಕೆ ಸಂಬಂಧಿಸಿದಂತೆ 1954ರಲ್ಲಿ ಒಂದು ಲೇಖನವನ್ನು ಪ್ರಕಟಿಸಿದ್ದಾರೆ. ಅದು ತುಂಬಾ ಪ್ರಖ್ಯಾತವಾಯಿತು. ಅದರಲ್ಲಿ ಒಂದು ಸರಳವಾದ ವಿಚಾರವನ್ನು ಹೇಳುತ್ತಾರೆ. ಪಟ್ಟಣದಲ್ಲಿ ಕೆಲಸ ಮಾಡಿದರೆ ನಿಮಗೆ ವಾರಕ್ಕೆ 100 ಡಾಲರ್ ಸಂಬಳ ದೊರಕುತ್ತದೆ ಅಂತ ಭಾವಿಸಿಕೊಳ್ಳಿ. ಹಳ್ಳಿಯಲ್ಲಿ ಅಂತಹ ಯಾವುದೇ ಕೆಲಸವೂ ಇಲ್ಲ ಎಂದುಕೊಳ್ಳಿ. ಹಳ್ಳಿಯಲ್ಲಿ ನಿಮ್ಮ ಕುಟುಂಬದ ಜಮೀನಿನಲ್ಲಿ ಕೆಲಸ ಮಾಡಿದರೆ ಅದರಿಂದ ವಾರಕ್ಕೆ ಒಟ್ಟು 500 ಡಾಲರ್ ಆದಾಯ ಸಿಗುತ್ತದೆ. ಅದನ್ನು ನೀವೂ ಸೇರಿದಂತೆ ನಾಲ್ಕು ಜನ ಸಹೋದರರು ಹಂಚಿಕೊಂಡರೆ ಪ್ರತಿಯೊಬ್ಬರಿಗೂ ತಲಾ 125 ಡಾಲರ್ ದೊರಕುತ್ತದೆ. ನೀವು ಊರು ಬಿಟ್ಟು ಹೋದರೆ ನಿಮ್ಮ ಸೋದರರು ನಿಮಗೆ ಅದರಲ್ಲಿ ಪಾಲು ಕೊಡದೇ ಇರಬಹುದು. ಇನ್ನು ನೀವು ವಲಸೆ ಹೋಗುವ ಜಾಗದಲ್ಲಿ ನೀವು ಮಾಡುವ ಕೆಲಸ ನಿಮಗೆ ಹಿತ ಕೊಡದೇ ಇದ್ದು, ಅಲ್ಲಿಯೂ ನೀವು ಇಷ್ಟೇ ದುಡಿಯಬೇಕಾಗಿದ್ದಲ್ಲಿ ನೀವು ಅಲ್ಲಿಗೇಕೆ ಹೋಗುತ್ತೀರಿ? ಜಮೀನಿನಲ್ಲಿ ನಿಮ್ಮ ಅವಶ್ಯಕತೆ ಇರಲಿ ಬಿಡಲಿ ಈ ಮಾತು ನಿಜ ಎನ್ನುವುದು ಲೀವಿಸರ ಒಳನೋಟವಾಗಿತ್ತು. ಒಂದು ವೇಳೆ ನೀವು ಜಮೀನಿನಲ್ಲಿ ದುಡಿಯದೇ ಹೋಗಿದ್ದರೂ ಕುಟುಂಬಕ್ಕೆ 500 ಡಾಲರ್ ಆದಾಯ ಬರುತ್ತಿದ್ದ ಪಕ್ಷದಲ್ಲಿ, ನೀವು ಪಟ್ಟಣದಲ್ಲಿ ಕೆಲಸ ಮಾಡಲು ಹೋಗಿದ್ದರೆ ಆಗ ಕುಟುಂಬದ ಆದಾಯಕ್ಕೆ ನೀವು 100 ಡಾಲರ್ ಸೇರಿಸಬಹುದು. ಆದರೆ ನೀವು ಹಾಗೆ ಮಾಡುವುದಿಲ್ಲ. ಏಕೆಂದರೆ ಆಗ ನಿಮ್ಮ ಸಹೋದರರು 500 ಡಾಲರ್‌ಗಳನ್ನು ತಮ್ಮಲ್ಲೇ ಹಂಚಿಕೊಂಡುಬಿಡಬಹುದು. ಆಗ ನಿಮಗೆ ಕೇವಲ ನೀವು ದುಡಿದ 100 ಡಾಲರ್ ಮಾತ್ರ ಸಿಗುತ್ತದೆ. ಭೂಮಿ ಕೇವಲ ಒಂದು ಉದಾಹರಣೆ ಅಷ್ಟೆ. ಅದು ಟ್ಯಾಕ್ಸಿ ನಡೆಸುವ ವ್ಯಾಪಾರವೋ ಅಥವಾ ಇನ್ನೇನೋ ಆಗಿರಬಹುದು. ಆಗಲೂ ನಾವು ಮನೆಯಲ್ಲೇ ಉಳಿಯುತ್ತೇವೆ.

ಲೀವಿಸ್ ಸೂಚಿಸುವುದೇನೆಂದರೆ, ನೀವು ಜಮೀನಿನಿಂದ ದೂರವೇ ಇದ್ದರೂ ನಿಮಗೆ 50 ಡಾಲರ್ ಕೊಟ್ಟೇ ಕೊಡುತ್ತೇವೆ ಎಂದು ನಿಮ್ಮ ಕುಟುಂಬದವರು ಭರವಸೆ ಕೊಟ್ಟರೆ, ನಿಮಗೂ 150 ಡಾಲರ್ ಸಿಗುತ್ತದೆ ಮತ್ತು ನಿಮ್ಮ ಮೂರು ಸಹೋದರರಿಗೂ 150 ಡಾಲರ್‌ಗಳು ಸಿಗುತ್ತದೆ. ಇದರಿಂದ ಕುಟುಂಬದ ಪ್ರತಿಯೊಬ್ಬರಿಗೂ ಒಳ್ಳೆಯದಾಗುತ್ತದೆ. ಆದರೆ ಅದು ಹಾಗಾಗುವುದಿಲ್ಲ. ಕುಟುಂಬದವರು ಕೊಟ್ಟ ಭರವಸೆಗಳನ್ನು ಸುಲಭವಾಗಿ ಮರೆತುಬಿಡಬಹುದು. ಒಮ್ಮೆ ನೀವು ಊರುಬಿಟ್ಟು ಹೊರಗೆ ಹೋದರೆ ನಿಮ್ಮನ್ನು ಕೌಟುಂಬಿಕ ವ್ಯವಹಾರದ ಭಾಗವಾಗಿ ಪರಿಗಣಿಸದೆಯೇ ಹೋಗಬಹುದು. ಹಾಗಾಗಿ ನಿಮ್ಮ ಹಕ್ಕನ್ನು ಉಳಿಸಿಕೊಳ್ಳುವುದಕ್ಕಾಗಿ ನೀವು ಊರಿನಲ್ಲಿಯೇ ಉಳಿದುಕೊಳ್ಳುತ್ತೀರಿ. ಇದರಿಂದಾಗ ಗ್ರಾಮೀಣ ಕಾರ್ಮಿಕರು ನಗರದ ಹೆಚ್ಚು ಉತ್ಪಾದಕ ಕ್ಷೇತ್ರವನ್ನು ಸೇರಿಕೊಳ್ಳುವ ಪ್ರಕ್ರಿಯೆ ನಿಧಾನವಾಗುತ್ತದೆ. ಇದು ದೇಶದೊಳಗೂ ನಿಜ, ಹೊರಗೂ ನಿಜ ಎನ್ನುವುದು ಲೀವಿಸ್ ಅವರ





ಅಭಿಪ್ರಾಯ. ಹಾಗಾಗಿ ಲಿವೀಸ್ ಅವರು ಕಲ್ಪಿಸಿಕೊಳ್ಳುವ ವ್ಯವಸ್ಥೆಯಲ್ಲಿ ವಲಸೆ ಪ್ರಮಾಣ ತುಂಬಾ ಕಡಿಮೆ ಇರುತ್ತದೆ.

ಸಂಬಂಧಗಳು ರೂಪುಗೊಳ್ಳುವುದೇ ನಿರ್ದಿಷ್ಟ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕೆ. ಉದಾಹರಣೆಗೆ ಕುಟುಂಬವನ್ನೇ ಗಮನಿಸಬಹುದು. ಅದರಿಂದ ಒಂದಿಷ್ಟು ಅನುಕೂಲಗಳಿವೆ. ಆದರೆ ಅವುಗಳಿಂದ ಇಡೀ ಸಮಾಜಕ್ಕೆ ಒಳ್ಳೆಯದಾಗುತ್ತದೆ ಎಂದು ಭಾವಿಸಬಾರದು. ಉದಾಹರಣೆಗೆ ವೃದ್ಧಾಪ್ಯದಲ್ಲಿ ಮಕ್ಕಳು ತಮ್ಮನ್ನು ಬಿಟ್ಟು ಹೋಗಬಹುದು ಅನ್ನುವ ಗಾಬರಿ ಹಿರಿಯರಿಗೆ ಇರಬಹುದು. ಇದೇ ಆಲೋಚನೆಯಿಂದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅವರು ಹಣ ಖರ್ಚು ಮಾಡದೇ ಇರಬಹುದು. ಹೆಚ್ಚಿನ ಶಿಕ್ಷಣವೇ ಇಲ್ಲದೇ ಹೋದರೆ ಮಕ್ಕಳು ನಗರಕ್ಕೆ ಹೋಗುವ ಸಾಧ್ಯತೆ ತುಂಬಾ ಕಡಿಮೆ. ಹಾಗಾಗಿ ಅವರು ತಮ್ಮೊಂದಿಗೆ ಉಳಿಯುತ್ತಾರೆ ಎಂದು ಅವರು ಯೋಚಿಸಬಹುದು. ದಿಲ್ಲಿಯ ಸಮೀಪದ ಹರಿಯಾಣದಲ್ಲಿ ಒಂದು ಅಧ್ಯಯನ ನಡೆದಿದೆ. ಬ್ಯಾಕ್ ಆಫೀಸ್ ಕೆಲಸಗಳಿಗೆ ನೇಮಕಾತಿ ನಡೆಯುತ್ತಿತ್ತು. ಈ ಮೇಲೆ ಉಲ್ಲೇಖಿಸಿರುವ ಅಧ್ಯಯನ ನಡೆಸಿದ ಸಂಶೋಧಕರ ತಂಡ ಗ್ರಾಮೀಣ ಜನರಿಗೆ ಆ ಬಗ್ಗೆ ಮಾಹಿತಿಯನ್ನು ನೀಡಿತು. ಈ ಕೆಲಸ ಬೇಕಿದ್ದರೆ ಮೊದಲನೆಯದಾಗಿ ಉದ್ಯೋಗಾಕಾಂಕ್ಷಿಗಳು ಹೈಸ್ಕೂಲ್‌ಶಿಕ್ಷಣ ಮುಗಿಸಿರಬೇಕು. ಎರಡನೆಯದಾಗಿ ಊರು ಬಿಟ್ಟು ನಗರಕ್ಕೆ ಬರಲು ತಯಾರಿರಬೇಕು. ಈ ಬಗ್ಗೆ ಸಾಕಷ್ಟು ಪ್ರಚಾರ ಮಾಡಲಾಯಿತು. ಪ್ರಚಾರ ಮಾಡಿದ ಹಳ್ಳಿಗಳಲ್ಲಿ ಹೆಣ್ಣುಮಕ್ಕಳ ತಂದೆತಾಯಿಯರಿಂದ ಒಳ್ಳೆಯ ಪ್ರತಿಕ್ರಿಯೆ ಬಂತು. ಅವರನ್ನು ಚೆನ್ನಾಗಿ ಓದಿಸಿದರು, ಅನಂತರ ಮದುವೆ ಮಾಡಿದರು. ಪ್ರಚಾರ ಮಾಡದ ಹಳ್ಳಿಗಳಿಗೆ ಹೋಲಿಸಿ ನೋಡಿದಾಗ ಇದು ಸ್ಪಷ್ಟವಾಗಿ ಕಾಣುತ್ತಿತ್ತು. ಅಷ್ಟೇ ಅಲ್ಲ ಅವರಿಗೆ ಒಳ್ಳೆಯ ಆಹಾರವನ್ನು ಕೊಡುತ್ತಿದ್ದರು. ಅದರಿಂದ ಅವರಲ್ಲಿ ಹೆಚ್ಚಿನವರು ಸುಪುಷ್ಟವಾಗಿ, ಎತ್ತರವಾಗಿ ಬೆಳೆದಿದ್ದರು. ಆದರೆ ಗಂಡುಮಕ್ಕಳ ವಿಷಯದಲ್ಲಿ ಹಾಗಾಗಿರಲಿಲ್ಲ. ಒಟ್ಟಾರೆಯಾಗಿ ಅವರ ಶಿಕ್ಷಣದಲ್ಲಿ ಸುಧಾರಣೆಯಾಗಲಿಲ್ಲ. ಗಂಡು ಮಕ್ಕಳು ಪಟ್ಟಣಕ್ಕೆ ಹೋಗಿ ಸಂಪಾದಿಸಬೇಕೆಂದು ಬಯಸಿದ್ದ ಕುಟುಂಬಗಳು ಮಾತ್ರ ಇದಕ್ಕೆ ಚೆನ್ನಾಗಿ ಸ್ಪಂದಿಸಿದ್ದವು. ಆದರೆ ಗಂಡುಮಕ್ಕಳು ಮನೆಯಲ್ಲೇ ಇರಬೇಕೆಂದು ಬಯಸಿದ್ದ ಮನೆಗಳಲ್ಲಿ ಹುಡುಗರ ಶಿಕ್ಷಣವನ್ನು ಬೇಗನೇ ಮೊಟುಕುಗೊಳಿಸಿದ್ದರು. ಅವರ ವಿಕಾಸ ಸಾಧ್ಯವಾಗಿರಲಿಲ್ಲ.

ಕಠ್ಮಂಡುವಿನ ಪರಿಸ್ಥಿತಿ

ಬಾಂಗ್ಲಾದೇಶದಲ್ಲಿ ಮತ್ತೊಂದು ಪ್ರಯೋಗ ಮಾಡಲಾಯಿತು. ಬೃಹತ್ ನಗರಗಳಲ್ಲಿ ಕೆಲಸದ ಸಾಧ್ಯತೆಗಳನ್ನು ಹುಡುಕಿಕೊಳ್ಳಿ ಎಂದು ಕೆಲವು ಹಳ್ಳಿಯವರಿಗೆ ತಿಳಿಸಲಾಯಿತು. ಖರ್ಚಿಗಾಗಿ ಅವರಿಗೆ 11.50 ಡಾಲರ್ ಹಣ ಕೊಡಲಾಯಿತು. ಹಾಗೆ ಹೋದ ಕೆಲವರಿಗೆ ಒಳ್ಳೆಯ ಅವಕಾಶಗಳೂ ಸಿಕ್ಕವು. ಕೆಲವರಿಗೆ ಕೆಲಸ ಸಿಗದೆ ಬರಿಗೈಲಿ ಹಿಂದಿರುಗಬೇಕಾಯ್ತು. ಸ್ವತಃ ತಾವೇ ಪ್ರಯಾಣದ ಖರ್ಚನ್ನು ಭರಿಸಬೇಕಾಗಿದ್ದಲ್ಲಿ ಅವರಿಗೆ ಖಂಡಿತಾ ಕಷ್ಟವಾಗುತ್ತಿತ್ತು. ಬಹುಪಾಲು ಜನರಿಗೆ ರಿಸ್ಕ್ ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲ. ಅದರಲ್ಲೂ ವಿಶೇಷವಾಗಿ ಕನಿಷ್ಠ ಆದಾಯದಲ್ಲಿ ಜೀವನ ನಡೆಸುವವರು ಯಾವುದೇ ರಿಸ್ಕ್ ತೆಗೆದುಕೊಳ್ಳುವುದಕ್ಕೂ ಸಿದ್ಧವಿರುವುದಿಲ್ಲ. ಏಕೆಂದರೆ ಸ್ವಲ್ಪ ನಷ್ಟವಾದರೂ ಅವರು ಉಪವಾಸ ಸಾಯಬೇಕಾಗುತ್ತದೆ. ಈ ಗಾಬರಿಯಿಂದಲೇ ಅವರು ಹೊಸದಕ್ಕೆ ಪ್ರಯತ್ನಿಸದೇ ಇರಬಹುದೇ?

ಹಾಗೆ ಭಾವಿಸುವುದರಲ್ಲಿ ಒಂದು ಸಮಸ್ಯೆ ಇದೆ. ಭಾವಿ ವಲಸಿಗರಿಗೆ ಇನ್ನೊಂದು ಆಯ್ಕೆಯೂ ಸಾಧ್ಯ. ಅವರಿಗೆ ತಮ್ಮ ದುಡಿಮೆಯಿಂದಲೇ 11.50 ಡಾಲರನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿತ್ತು. ಕೆಲಸ ಸಿಗದೆ ಹೋದರೆ ಮನೆಗೆ ಮರಳಿ ಬರಬಹುದು. ಅದರಿಂದ ಅವರ ಸ್ಥಿತಿಯಲ್ಲಿ ಅಂತಹ ವ್ಯತ್ಯಾಸ ಆಗುತ್ತಿರಲಿಲ್ಲ. ಹಲವರು ಹಾಗೆ ಹಣ ಉಳಿಸುತ್ತಿದ್ದಾರೆ ಅನ್ನುವುದೂ ನಿಜ. ಆದರೆ ಅದನ್ನು ಬಳಸಿಕೊಂಡು ವಲಸೆ ಹೋಗುವುದಿಲ್ಲ. ಬೇರೆ ವಸ್ತುಗಳನ್ನು ಕೊಳ್ಳುತ್ತಾರೆ. ವಲಸೆಗಾಗಿ 11.50 ಡಾಲರ್‌ಗಳನ್ನು ಉಳಿಸುವುದು ಕಷ್ಟವಾಗಬಾರದು. ಅದು ಅವರ

ಮಿತಿಯಲ್ಲಿಯೇ ಇದೆ. ಆದರೆ ಅವರು ಹಾಗೆ ಮಾಡುತ್ತಿಲ್ಲ. ಬಹುಶಃ ಒಂದು ಕಾರಣವೆಂದರೆ ಅವರು ವಲಸೆಯಿಂದ ಆಗುವ ಅಪಾಯವನ್ನು ಇರುವುದಕ್ಕಿಂತ ದೊಡ್ಡದು ಮಾಡಿ ಕಲ್ಪಿಸಿಕೊಳ್ಳುತ್ತಾರೆ. ನೇಪಾಳದಲ್ಲಿ ಮಾಡಿರುವ ಅಧ್ಯಯನವೊಂದು ಇದರ ಬಗ್ಗೆ ಬೆಳಕು ಚೆಲ್ಲುತ್ತದೆ.

ಇಂದು ದುಡಿಯುವ ವಯಸ್ಸಿನ ಶೇಕಡ 20ರಷ್ಟು ನೇಪಾಳಿ ಗಂಡಸರು ಕನಿಷ್ಠ ಒಮ್ಮೆಯಾದರೂ ಕೆಲಸಕ್ಕಾಗಿ ಬೇರೆ ದೇಶಕ್ಕೆ ಹೋಗಿ ಬಂದಿರುತ್ತಾರೆ. ಅವರಲ್ಲಿ ಹೆಚ್ಚಿನವರು ಮಲೇಶ್ಯಾ, ಕತಾರ್, ಸೌದಿ ಅರೇಬಿಯಾ ಅಥವಾ ಯುನೈಟೆಡ್ ಅರಬ್ ಎಮರೈಟ್ಸ್‌ನಲ್ಲಿ ಕೆಲಸ ಮಾಡಿರುತ್ತಾರೆ. ಸಾಮಾನ್ಯವಾಗಿ ಅವರು ಒಬ್ಬ ನಿರ್ದಿಷ್ಟ ಮಾಲಿಕನೊಂದಿಗೆ ಒಪ್ಪಂದ ಮಾಡಿಕೊಂಡು ಕೆಲಸ ಮಾಡುತ್ತಿರುತ್ತಾರೆ. ಕೆಲವು ವರ್ಷಗಳು ಕೆಲಸ ಮಾಡಿ ವಾಪಸ್ಸು ಬಂದು ಬಿಡುತ್ತಾರೆ.

ಅಂತಹ ವಲಸಿಗರಿಗೆ ವಲಸೆ ಹೋಗುವುದಕ್ಕೆ ತಗುಲುವ ಖರ್ಚು ಮತ್ತು ದೊರಕುವ ಲಾಭ ಎರಡರ ಸ್ಪಷ್ಟ ಅರಿವಿರುತ್ತದೆ ಎನ್ನುವುದು ಖಾತ್ರಿ. ಏಕೆಂದರೆ ವೀಸಾ ದೊರಕಬೇಕಾದರೆ ಕೆಲಸದ ಪ್ರಸ್ತಾಪ ಇರಲೇಬೇಕು. ಆದರೆ ನಾವು ಭೇಟಿ ಮಾಡಿದ ನೇಪಾಳದ ಸರ್ಕಾರಿ ಅಧಿಕಾರಿಗಳಿಗೆ ಈ ವಲಸಿಗರ ಬಗ್ಗೆ ತುಂಬಾ ಆತಂಕ. ತಾವು ಯಾವುದಕ್ಕೆ ಸಿಕ್ಕಿ ಹಾಕಿಕೊಳ್ಳುತ್ತಿದ್ದೇವೆ ಎನ್ನುವುದರ ಅರಿವೇ ಅವರಿಗಿಲ್ಲ ಎಂಬ ಆತಂಕ ಅವರಿಗಿತ್ತು. ಅವರೆಲ್ಲಾ ತಮಗೆ ತುಂಬಾ ಆದಾಯ ಸಿಗುತ್ತದೆ ಎಂದುಕೊಂಡಿದ್ದಾರೆ. ಬೇರೆ ದೇಶಗಳಲ್ಲಿ ಬದುಕೋದು ಎಷ್ಟು ಕಷ್ಟ, ಅಲ್ಲಿನ ಪರಿಸ್ಥಿತಿ ಎಷ್ಟು ಕೆಟ್ಟದಾಗಿದೆ ಎಂಬುದರ ಅರಿವೇ ಅವರಿಗಿಲ್ಲ ಎಂದು ನಮಗೆ ತಿಳಿಸಿದರು. ಅಧಿಕಾರಿಗಳ ಈ ಮಾತಿನ ಸತ್ಯಾಸತ್ಯತೆಗಳನ್ನು ಪರಿಶೀಲಿಸಲು ನಮ್ಮ ತಂಡದಲ್ಲಿಯೇ ಇದ್ದ ನೇಪಾಳದ ಪಿಎಚ್‌ಡಿ ವಿದ್ಯಾರ್ಥಿ ಮಹೇಶ್ವರ ಶ್ರೇಷ್ಠ ನಿರ್ಧರಿಸಿದ. ಅವನು ಒಂದು ಸಣ್ಣ ತಂಡದೊಂದಿಗೆ ಕಠ್ಮಂಡುವಿನ ಪಾಸ್‌ಪೋರ್ಟ್ ಆಫೀಸಿನಲ್ಲಿ ಕುಳಿತುಕೊಂಡ. ವಲಸೆ ಹೋಗುವವರೆಲ್ಲರೂ ಪಾಸ್‌ಪೋರ್ಟಿಗೆ ಅರ್ಜಿ ಸಲ್ಲಿಸಲು ಅಲ್ಲಿಗೆ ಬರಲೇ ಬೇಕಿತ್ತು. ಅಲ್ಲಿ ಅವನು ಅರ್ಜಿ ಹಾಕಲು ಬಂದ ಮೂರು ಸಾವಿರಕ್ಕೂ ಹೆಚ್ಚು ಜನ ಕೆಲಸಗಾರರನ್ನು ವಿವರವಾಗಿ ಸಂದರ್ಶನ ಮಾಡಿದ. ಅವರಿಗೆ ಎಷ್ಟು ಸಂಬಳ ಸಿಗುತ್ತದೆ, ಅವರು ಎಲ್ಲಿಗೆ ಹೋಗುತ್ತಿದ್ದಾರೆ ಮತ್ತು ವಿದೇಶದಲ್ಲಿ ಜೀವನ ಸ್ಥಿತಿ ಹೇಗಿದೆ ಮುಂತಾದ ವಿವರಗಳು ಅವರಿಗೆ ತಿಳಿದಿದೆಯೇ ಎಂಬುದನ್ನು ಕೇಳಿ ಅವರಿಂದ ಮಾಹಿತಿ ಸಂಗ್ರಹಿಸಿದ. ಈ ಭಾವಿ ವಲಸಿಗರಿಗೆ ತಮ್ಮ ಆದಾಯದ ಬಗ್ಗೆ ವಾಸ್ತವಕ್ಕಿಂತ ಹೆಚ್ಚಿನ ನಿರೀಕ್ಷೆ ಇತ್ತು. ವಾಸ್ತವದಲ್ಲಿ ಸಿಗುವುದಕ್ಕಿಂತ ಅವರ ಅಂದಾಜು ಸುಮಾರು ಶೇಕಡ 25ರಷ್ಟು ಹೆಚ್ಚಿತ್ತು. ಅದಕ್ಕೆ ಹಲವು ಕಾರಣಗಳೂ ಇದ್ದಿರಬಹುದು. ಬಹುಶಃ ಅವರನ್ನು ಕೆಲಸಕ್ಕೆ ಹೊಸದಾಗಿ ನೇಮಕ ಮಾಡಿಕೊಳ್ಳುತ್ತಿದ್ದ ಸಂಸ್ಥೆಯವನೇ ಅವರಿಗೆ ಸುಳ್ಳು ಹೇಳಿರುವ ಸಾಧ್ಯತೆಗಳೂ ಇದ್ದವು. ಹಾಗೆಯೇ ಅವರು ವಿದೇಶದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಸಾಯಬಹುದಾದ ಸಾಧ್ಯತೆಯನ್ನೂ ಹೆಚ್ಚಾಗಿಯೇ ಅಂದಾಜು ಮಾಡಿಕೊಂಡಿದ್ದರು. ಎರಡು ವರ್ಷಗಳ ಕಷ್ಟ ಕಾರ್ಪಣ್ಯದಿಂದ ಪ್ರತಿ 10,000 ವಲಸಿಗರಲ್ಲಿ ಕನಿಷ್ಠ 10 ಜನರಾದರೂ ಸಾಯುತ್ತಾರೆ ಎಂದು ಅವರು ಭಾವಿಸಿದ್ದರು. ಆದರೆ ವಾಸ್ತವವಾಗಿ ಹಾಗೆ ಸಾಯುವವರ ಸಂಖ್ಯೆ ಕೇವಲ 1.3 ಮಾತ್ರ.

ವಲಸೆ ಹೋಗಬೇಕೆಂದು ನಿರ್ಧರಿಸಿದ್ದವರಿಗೆ ವಿದೇಶದಲ್ಲಿ ನಿಜವಾಗಿ ಬರುವ ಸಂಬಳ, ಮರಣದ ಪ್ರಮಾಣ ಇವುಗಳನ್ನು ಕುರಿತು ಮಹೇಶ್ವರ್ ಒಂದಿಷ್ಟು ಮಾಹಿತಿಗಳನ್ನು ನೀಡಿದ. ಅನಂತರ ಈ ಮಾಹಿತಿಗಳಿಂದ ಅವರ ತೀರ್ಮಾನಗಳು ಬದಲಾಯಿತೇ ಎಂಬುದನ್ನು ಪರೀಕ್ಷಿಸಿ ನೋಡಿದ. ಈ ಮಾಹಿತಿಗಳಿಂದ ಅವರಿಗೆ ಖಂಡಿತಾ ಉಪಯೋಗವಾಗಿತ್ತು. ಅವು ಅವರ ತೀರ್ಮಾನವನ್ನು ಪ್ರಭಾವಿಸಿದ್ದವು. ಸಂಬಳದ ಬಗ್ಗೆ ಮಾಹಿತಿ ಸಿಕ್ಕವರು ಎರಡು ತಿಂಗಳ ನಂತರವೂ ನೇಪಾಳದಲ್ಲೇ ಉಳಿದುಕೊಂಡಿದ್ದರು. ಆದರೆ ತಾವು ಅಂದುಕೊಂಡಷ್ಟು ಜನ ಸಾಯುವುದಿಲ್ಲ ಎಂದು ಮನವರಿಕೆಯಾದವರು ವಲಸೆ ಹೋಗಲು ನಿರ್ಧರಿಸಿದ್ದರು. ಬಹುಶಃ ಹೆಚ್ಚು ಸಾವು ಸಂಭವಿಸುತ್ತದೆ ಎಂಬ ಮಾಹಿತಿ ಸಂಬಳಕ್ಕಿಂತ ಹೆಚ್ಚು ಭೀಕರವಾಗಿತ್ತು ಕಾಡಿತ್ತು ಅನ್ನಿಸುತ್ತದೆ. ಸಂಬಳ ಅಷ್ಟು ಸಿಗುವುದಿಲ್ಲ ಆದರೆ ಅವರು ಭಾವಿಸಿದಷ್ಟು ಜನ ಸಾಯುವುದಿಲ್ಲ ಎಂದು ತಿಳಿದಾಗ ವಲಸೆ ಹೋಗಿದ್ದ ಸಾಧ್ಯತೆಗಳು ಹೆಚ್ಚಾಗಿದ್ದವು. ಹಾಗಾಗಿ ವಲಸಿಗರಿಗೆ ಸಂಬಂಧಿಸಿದಂತೆ ನೇಪಾಳಿ ಸರ್ಕಾರದ ಅಭಿಪ್ರಾಯ ತಪ್ಪಾಗಿತ್ತು. ಜನ ತಪ್ಪು ಮಾಹಿತಿಯಿಂದ ವಲಸೆ ಹೋಗದೆ ಸ್ವದೇಶದಲ್ಲೇ ಉಳಿದುಕೊಂಡಿದ್ದರು.

ಹೆಚ್ಚು ಜನ ಸಾಯುತ್ತಾರೆ ಅಂತ ಅವರಿಗೆ ಯಾಕೆ ತೋರಿತ್ತು? ಸಮಸ್ಯೆಯೇನೆಂದರೆ ಪತ್ರಿಕೆಗಳು ವರದಿ ಮಾಡುವಾಗ ಒಂದು ನಿರ್ದಿಷ್ಟ ಪ್ರಾಂತ್ಯದಿಂದ ಎಷ್ಟು ಜನ ವಲಸೆ ಹೋದರು ಎಂಬುದನ್ನು ತಿಳಿಸುವುದಿಲ್ಲ. ಬದಲಾಗಿ ಸತ್ತವರ ಸಂಖ್ಯೆಯನ್ನು ಮಾತ್ರ ತಿಳಿಸುತ್ತವೆ. ಹಾಗಾಗಿ ಕೆಲಸಗಾರರಿಗೆ 100 ಮಂದಿಯಲ್ಲಿ ಒಬ್ಬ ಸತ್ತನೋ ಅಥವಾ 1000 ಮಂದಿಯಲ್ಲಿ ಒಬ್ಬ ಸತ್ತನೋ ತಿಳಿಯುವುದಿಲ್ಲ. ಈ ಮಾಹಿತಿಯ ಕೊರತೆಯಿಂದಾಗಿ ಜನ ಸ್ವಲ್ಪ ಅತಿಯಾಗಿಯೇ ಪ್ರತಿಕ್ರಿಯಿಸುತ್ತಾರೆ. ತಮ್ಮ ಜಿಲ್ಲೆಯಿಂದ ವಲಸೆ ಹೋಗಿರುವವರು ಸತ್ತರೆ, ಸ್ವಾಭಾವಿಕವಾಗಿಯೇ ಆ ಜಿಲ್ಲೆಯಿಂದ ವಲಸೆ ಹೋಗುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತದೆ. ಸಹಜವಾಗಿಯೇ ವಲಸೆ ಹೋಗಬಯಸುವವರು ತಾವು ವಲಸೆ ಹೋಗುವ ಸ್ಥಳಗಳಲ್ಲಿ ದೊರಕಬಹುದಾದ ಸೌಲಭ್ಯಗಳ ಬಗ್ಗೆ ಗಮನ ಹರಿಸುತ್ತಾರೆ.

ನೇಪಾಳದಲ್ಲಿ ಬಹಳಷ್ಟು ನೇಮಕಾತಿ ಸಂಸ್ಥೆಗಳು ಇವೆ. ಕೆಲಸಗಾರರು ದೊಡ್ಡ ಸಂಖ್ಯೆಯಲ್ಲಿ ವಲಸೆ ಹೋಗಿಬರುತ್ತಾರೆ ಜೊತೆಗೆ ವಿದೇಶಗಳಿಗೆ ಹೋಗುವ ವಲಸಿಗರ ಕ್ಷೇಮದ ಬಗ್ಗೆ ಸರ್ಕಾರಕ್ಕೆ ನಿಜವಾಗಿ ಕಾಳಜಿ ಇದೆ. ಇಷ್ಟೆಲ್ಲಾ ಇದ್ದಾಗಲೂ ಕೂಡ ನೇಪಾಳದಲ್ಲಿ ಜನರಿಗೆ ಸರಿಯಾದ ಮಾಹಿತಿಗಳು ತಿಳಿದಿಲ್ಲ. ಅಂಥದ್ದರಲ್ಲಿ ಎಲ್ಲೋ ಇರುವ ಭಾವಿ ವಲಸಿಗರಿಗೆ ಇಂತಹ ಯಾವುದೇ ಮಾಹಿತಿಗಳು ಲಭ್ಯವಿಲ್ಲದಿದ್ದಾಗ ಎಂತೆಂತಹ ಗೊಂದಲಗಳಿರಬಹುದು ಎನ್ನುವುದನ್ನು ಊಹಿಸಕೊಳ್ಳಬಹುದು. ಈ ಗೊಂದಲ ಎರಡು ಬಗೆಯಲ್ಲಿ ಪರಿಣಾಮ ಬೀರಬಹುದು. ನೇಪಾಳದಲ್ಲಿ ಆದಂತೆ ಅದರಿಂದ ವಲಸೆಯ ಪ್ರಮಾಣ ಕಮ್ಮಿಯಾಗಬಹುದು ಅಥವಾ ಜನ ತುಂಬಾ ಆಶಾವಾದಿಗಳಾಗಿದ್ದರೆ ಅದು ವಲಸೆಯನ್ನು ಹೆಚ್ಚಿಸಬಹುದು. ಆದರೆ ವಲಸೆ ಹೋಗುವುದರ ವಿರುದ್ಧ ಒಂದು ವ್ಯವಸ್ಥಿತವಾದ ಪೂರ್ವಗ್ರಹ ಏಕಿದೆ?

ರಿಸ್ಕ್ ವರ್ಸಸ್ ಅನಿರ್ದಿಷ್ಟತೆ

ಮಹೇಶ್ವರ್ ಸಂದರ್ಶಿಸಿದ ವ್ಯಕ್ತಿಗಳು ಹೀಗೆ ಮರಣ ಪ್ರಮಾಣವನ್ನು ಉತ್ಪ್ರೇಕ್ಷಿಸಿರುವುದನ್ನು ಸಾರ್ವತ್ರಿಕವಾಗಿ ಇರುವ ಭೀತಿಯ ಒಂದು ರೂಪಕವನ್ನಾಗಿ ಪರಿಗಣಿಸಬೇಕು. ವಲಸೆ ಎಂದರೆ ಪರಿಚಿತವಾದ್ದನ್ನು ಬಿಟ್ಟು ಅಪರಿಚಿತವಾದ ಸನ್ನಿವೇಶಕ್ಕೆ ಕಾಲಿಡುವುದು. ಅಪರಿಚಿತ ಪರಿಸ್ಥಿತಿ ಅಂದರೆ ಅರ್ಥಶಾಸ್ತ್ರಜ್ಞರು ಹೇಳುವಂತೆ ಕೇವಲ ಏನೆಲ್ಲಾ ಸಂಭವಿಸಬಹುದು, ಅವುಗಳ ಸಾಧ್ಯತೆ ಎಷ್ಟು ಅನ್ನುವುದರ ಪಟ್ಟಿಯಲ್ಲ. ಅರ್ಥಶಾಸ್ತ್ರದಲ್ಲಿ ಫ್ರಾಂಕ್ ನೈಟ್ ಕಾಲದಿಂದಲೂ ಲೆಕ್ಕಹಾಕಬಹುದಾದ ರಿಸ್ಕ್ (ಶೇಕಡಾ 50 ಹೀಗಾಗುವ ಸಂಭಾವ್ಯತೆ ಮತ್ತು ಶೇಕಡಾ 50 ಹಾಗಾಗುವ ಸಂಭಾವ್ಯತೆ) ಮತ್ತು ಲೆಕ್ಕಹಾಕಲಾಗದ ಅಪಾಯಗಳ ನಡುವೆ ಭೇದವನ್ನು ಗುರುತಿಸುವ ಒಂದು ದೀರ್ಘವಾದ ಪರಂಪರೆಯೇ ಇದೆ. ಇದನ್ನು ಡೋನಾಲ್ಡ್ ರಮ್ಸ್‌ಫೀಲ್ಡ್ "ಅಪರಿಚಿತವಾದ ಅಪರಿಚಿತಗಳು" (Unknown unknowns) ಎಂಬ ಅವಿಸ್ಮರಣೀಯವಾದ ಮಾತುಗಳ ಮೂಲಕ ವಿವರಿಸಿದ. ನೈಟ್ ಶಾಖೆಯ ಅರ್ಥಶಾಸ್ತ್ರಜ್ಞರು ಇದನ್ನು ಅನಿಶ್ಚಿತತೆ (uncertainty) ಎಂದು ಕರೆದರು. ರಿಸ್ಕ್ ಮತ್ತು ಅನಿಶ್ಚಿತತೆಗೆ ಮನುಷ್ಯರು ತುಂಬಾ ವಿಭಿನ್ನವಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ ಎನ್ನುವುದು ಫ್ರಾಂಕ್ ನೈಟ್‌ಗೆ ಮನದಟ್ಟಾಗಿತ್ತು. ಹೆಚ್ಚಿನವರು ಅಪರಿಚಿತವಾದ ಅಪರಿಚಿತಗಳ ಜೊತೆ ವ್ಯವಹರಿಸಲು

ಇಷ್ಟಪಡುವುದಿಲ್ಲ. ಸಮಸ್ಯೆಯ ಸ್ವರೂಪವಾಗಲಿ ಅದರ ವ್ಯಾಪ್ತಿಯಾಗಲಿ ಸ್ಪಷ್ಟವಾಗಿ ಗೊತ್ತಿಲ್ಲದಿದ್ದಾಗ ಜನ ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳುವುದಿಲ್ಲ.

ವಲಸೆ ಹೋಗಬೇಕು ಅಂದುಕೊಂಡಿರುವ ಬಾಂಗ್ಲಾದೇಶದ ಗ್ರಾಮೀಣ ಜನರಿಗೆ ನಗರ (ಅಥವಾ ಬೇರೆ ದೇಶ) ಅನ್ನುವುದು ಅನಿಶ್ಚಿತತೆಗಳ ಗೂಡು. ಅವರಿಗೆ ತಮ್ಮ ಕೌಶಲಗಳಿಗೆ ಮಾರುಕಟ್ಟೆಯಲ್ಲಿ ಎಂತಹ ಬೆಲೆ ಸಿಗುತ್ತದೆ ಅನ್ನುವುದು ಗೊತ್ತಿಲ್ಲ. ಅದೊಂದೇ ಅಲ್ಲ ನೂರಾರು ಇತರ ಗೊಂದಲಗಳು ಅವರನ್ನು ಕಾಡುತ್ತಿರುತ್ತವೆ. ಯಾರು ತಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳಬಹುದು? ತುಂಬಾ ಸ್ಪರ್ಧೆ ಇರಬಹುದೇ? ಮಾಲೀಕನಿಂದ ಶೋಷಣೆಗೆ ಒಳಗಾಗಬೇಕಾಗಬಹುದೇ? ಎಂತಹ ಶಿಫಾರಸ್ಸು ಪತ್ರಗಳು ಬೇಕಾಗಬಹುದು? ಕೆಲಸ ದೊರಕುವುದಕ್ಕೆ ಎಷ್ಟು ದಿನ ಬೇಕಾಗಬಹುದು? ಅಲ್ಲಿಯವರಗೆ ಜೀವನೋಪಾಯ ಹೇಗೆ? ಎಲ್ಲಿ ವಾಸ ಮಾಡುವುದು? ಹೀಗೆ ನೂರಾರು ಪ್ರಶ್ನೆಗಳು ಅವರನ್ನು ಕಾಡುತ್ತಿರುತ್ತವೆ. ಉತ್ತರ ಕಂಡುಕೊಳ್ಳಲು ಅವರಿಗೆ ಯಾವುದೇ ಅನುಭವವೂ ಇಲ್ಲ. ಎಲ್ಲ ಸಾಧ್ಯಾಸಾಧ್ಯತೆಗಳನ್ನು ಅವರೇ ಕಲ್ಪಿಸಿಕೊಳ್ಳಬೇಕು. ಹಾಗಾಗಿ ಹಲವರು ವಲಸೆ ಹೋಗಲು ಹಿಂಜರಿಯುತ್ತಾರೆ. ಅದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಅಸ್ಪಷ್ಟ ಅಪರಿಚಿತ ಲೋಕಕ್ಕೆ

ವಲಸೆ ಎಂದರೆ ಅದು ಅಪರಿಚಿತ ಲೋಕಕ್ಕೆ ಧುಮುಕುವುದು ಅಂತಲೇ. ಹಾಗಾಗಿಯೇ ಹಲವರು ವಲಸೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ವಲಸೆಯಿಂದ ಸಣ್ಣಪುಟ್ಟ ಖರ್ಚನ್ನು ನಿಭಾಯಿಸಲು ಒಂದಿಷ್ಟು ಹಣ ಸೇರಿಸಿಕೊಳ್ಳಬಹುದು. ಹಾಗಿದ್ದಾಗ್ಯೂ ಜನ ವಲಸೆಗೆ ಹಿಂದೇಟು ಹಾಕುತ್ತಾರೆ. ವಲಸೆ ಹೋಗುವುದು ಅಪಾಯ ಅನ್ನುವುದಕ್ಕಿಂತ ಹೆಚ್ಚಾಗಿ ಅದರಲ್ಲಿ ತುಂಬಾ ಅನಿಶ್ಚಿತತೆ ಇದೆ. ಇದರ ಜೊತೆಗೆ ಜನರಿಗೆ ಕೈಯ್ಯಾರೆ ತೊಂದರೆ ತಂದುಕೊಳ್ಳುವುದು ಸ್ವಲ್ಪವೂ ಇಷ್ಟವಿಲ್ಲ. ಎಲ್ಲಾ ಕಡೆಯೂ ಅನಿಶ್ಚಿತತೆಗಳೇ ಇವೆ. ಜೊತೆಗೆ ಹೆಚ್ಚಿನ ವಿಷಯಗಳ ಮೇಲೆ ಅವರಿಗೆ ಯಾವುದೇ ನಿಯಂತ್ರಣವೂ ಇಲ್ಲ. ಇದು ಜನರಿಗೆ ದುಃಖದ ವಿಷಯ. ಇದೆಲ್ಲದಕ್ಕಿಂತ ಹೆಚ್ಚಾಗಿ ತಾವೇ ಸ್ವತಂತ್ರವಾಗಿ ಮಾಡಿಕೊಳ್ಳುವ ಆಯ್ಕೆಯಿಂದ ಗ್ರಹಚಾರ ಕೆಟ್ಟು, ತುಂಬಾ ಕಷ್ಟವನ್ನು ಅನುಭವಿಸಬೇಕಾಗಿ ಬಂದಾಗ ಜನ ಇನ್ನು ಹೆಚ್ಚು ದುಃಖಿತರಾಗುತ್ತಾರೆ. ಸುಮ್ಮನೆ ಇದ್ದಿದ್ದರೆ ಆಗಿತ್ತಲ್ಲ ಅಂತ ಪರಿತಪಿಸುತ್ತಾರೆ. ಇಂಥಹ ಸಂದರ್ಭದಲ್ಲಿ ಯಾವ ಬದಲಾವಣೆಯೂ ಇಲ್ಲದೆ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದೇ ಮಾನದಂಡ ಆಗಿಬಿಡುತ್ತದೆ. ಅರ್ಥಶಾಸ್ತ್ರದ ಮೇಲೆ ತುಂಬಾ ಪ್ರಭಾವ ಬೀರಿರುವ ಡೇನಿಯಲ್ ಕನ್ಹೇಮನ್ ಮತ್ತು ಅಮೋಸ್ ಟ್ವರ್ಸ್ಕಿ ಎಂಬ ಇಬ್ಬರು ಮನಃಶಾಸ್ತ್ರಜ್ಞರು ಈ ಪರಿಕಲ್ಪನೆಯನ್ನು ನಷ್ಟವನ್ನು ತಪ್ಪಿಸಿಕೊಳ್ಳುವುದು (Loss Aversion) ಎಂದು ಕರೆಯುತ್ತಾರೆ (2002ರಲ್ಲಿ ಕನ್ಹೇಮನ್ ಅರ್ಥಶಾಸ್ತ್ರದಲ್ಲಿ ನೋಬೆಲ್ ಪಾರಿತೋಷಕ ಪಡೆದರು. ಅಕಾಲ ಮರಣಕ್ಕೆ ತುತ್ತಾಗದಿದ್ದ ಪಕ್ಷದಲ್ಲಿ ಟ್ವರ್ಸ್ಕಿ ಕೂಡ ಪಡೆಯುತ್ತಿದ್ದರು).

ನಂತರದ ಬರಹಗಳು ಅವರು ಪ್ರತಿಪಾದಿಸಿದ ಈ ನಷ್ಟ ತಪ್ಪಿಸಿಕೊಳ್ಳುವ ಪ್ರವೃತ್ತಿಯನ್ನು ಒಪ್ಪಿಕೊಳ್ಳುತ್ತವೆ. ಮತ್ತು ಇದರಿಂದ ಜನರ ಹಲವು ವಿಚಿತ್ರವಾದ ವರ್ತನೆಗಳನ್ನು ವಿವರಿಸುವುದಕ್ಕೆ ಸಾಧ್ಯವಾಗಿದೆ ಎಂದು ತಿಳಿಸಿವೆ. ಉದಾಹರಣೆಗೆ ಜನ ಮನೆಯ ಮೇಲಿನ ವಿಮಾ ಯೋಜನೆಗೆ ತುಂಬಾ ದೊಡ್ಡ ಮೊತ್ತದ ಪ್ರೀಮಿಯಂ ಕಟ್ಟುತ್ತಾರೆ. ಅದರಿಂದ ಅವರಿಗೆ ಸಿಗುವ ತೆರಿಗೆ ರಿಯಾಯಿತಿ ತೀರಾ ಅತ್ಯಲ್ಪ. ಮುಂದೆ ಯಾವುದೋ ಆಕಸ್ಮಿಕದಿಂದ ಮನೆಗೆ ದೊಡ್ಡ ಹಾನಿಯಾಗಿ, ದೊಡ್ಡ ಮೊತ್ತದ ಹಣ ಭರಿಸಬೇಕಾಗಿ ಬಂದಾಗ ಇದರಿಂದ ನೆರವಾಗುತ್ತದೆ ಎನ್ನುವ ಆಲೋಚನೆಯಿಂದ ಅವರು ವಿಮೆ ಮಾಡಿಕೊಳ್ಳುತ್ತಾರೆ. ಹಾಗಾಗಿ ಅವರಿಗೆ ತಾವು ತುಂಬಾ ದೊಡ್ಡ ಪ್ರಮಾಣದ ಪ್ರೀಮಿಯಂ ಕಟ್ಟುತ್ತಿದ್ದೇವೆ ಎಂದು ಅನ್ನಿಸುವುದಿಲ್ಲ. ಅದರಲ್ಲಿ ಅವರಿಗೆ ಯಾವ ತಪ್ಪು ಕಾಣುವುದಿಲ್ಲ. ಮುಗ್ಧ ಗ್ರಾಹಕರು ಹೆಚ್ಚಿನ ವಾರೆಂಟಿಗಾಗಿ ತುಂಬಾ ಬೆಲೆ ತೆತ್ತು ವಸ್ತುಗಳನ್ನು ಕೊಂಡುಕೊಳ್ಳುವ ನಿರ್ಧಾರದ ಹಿಂದೆಯೂ ಇದೇ ಮನಃಸ್ಥಿತಿ ಕೆಲಸ ಮಾಡುತ್ತಿರುತ್ತದೆ. ಒಟ್ಟಾರೆ ಹೇಳುವುದಾದರೆ ನಷ್ಟವನ್ನು ತಪ್ಪಿಸಿಕೊಳ್ಳಬೇಕೆನ್ನುವ ಯೋಚನೆ ನಮ್ಮ ನಿರ್ಧಾರವನ್ನು ಪ್ರಭಾವಿಸುತ್ತದೆ. ಅತ್ಯಂತ ಸಣ್ಣ ರಿಸ್ಕ್ ಕೂಡ ನಮ್ಮನ್ನು ತುಂಬಾ ಚಿಂತೆಗೀಡು ಮಾಡುತ್ತದೆ. ಸಾಮುದಾಯಿಕವಾಗಿ ಎಲ್ಲರೂ ವಲಸೆ ಹೋಗುವುದಿಲ್ಲ. ವಲಸೆ ಹೋಗಲು ನಾವು ನಿರ್ಧರಿಸಿದಾಗ ಅದು ತುಂಬಾ ದೊಡ್ಡ ಆಯ್ಕೆಯಾಗಿಬಿಡುತ್ತದೆ. ಅದಕ್ಕೆ ನಾವೇ ಜವಾಬ್ದಾರರು. ಹಾಗಾಗಿ ಹಲವರು ಈ ನಿರ್ಧಾರ ತೆಗೆದುಕೊಳ್ಳಲು ಹಿಂಜರಿಯುತ್ತಾರೆ ಎಂದು ಸಲೀಸಾಗಿ ಊಹಿಸಬಹುದು.

ಕೊನೆಯದಾಗಿ ವಲಸೆಯಲ್ಲಿ ಆಗಬಹುದಾದ ಸೋಲನ್ನು ಜನ ತುಂಬಾ



ವೈಯಕ್ತಿಕವಾಗಿ ತೆಗೆದುಕೊಳ್ಳುತ್ತಾರೆ. ವಲಸೆಯಿಂದ ತುಂಬ ಯಶಸ್ಸು ಗಳಿಸಿದ ಹಲವು ಕಥೆಗಳನ್ನು ಅವರು ಕೇಳಿದ್ದಾರೆ. ಹೆಮ್ಮೆಯಿಂದ ಅದನ್ನು ಹೇಳಿಕೊಳ್ಳುವುದನ್ನು ಕೇಳಿದ್ದಾರೆ. ಹಾಗಾಗಿ ತಮ್ಮ ಸೋಲನ್ನು ಜಗತ್ತು ಹೇಗೆ ನೋಡುತ್ತದೆ ಅನ್ನುವುದಕ್ಕಿಂತ ಅದು ತಮ್ಮ ನ್ಯೂನತೆಯನ್ನು ತೋರಿಸುತ್ತದೆ ಅನ್ನುವ ಭಾವನೆಯನ್ನು ಮೀರಿಕೊಳ್ಳುವುದು ಅವರಿಗೆ ಕಷ್ಟ. ಉದಾಹರಣೆಗೆ, ಎಸ್ತರಳ ತಾತ ಆಲ್ಬರ್ಟ್ ಗ್ರಾನ್‌ಜಾನ್ ಒಬ್ಬ ಪಶುವೈದ್ಯರಾಗಿದ್ದರು. ಫ್ರಾನ್ಸಿನ ಲೆ ಮನ್ಸ್ ಎಂಬಲ್ಲಿ ಒಂದು ಕಸಾಯಿಖಾನೆಯನ್ನು ನಡೆಸುತ್ತಿದ್ದರು. ಆಲ್ಬರ್ಟ್ ಒಮ್ಮೆ ತನ್ನ ಪತ್ನಿ ಮತ್ತು ನಾಲ್ಕು ಚಿಕ್ಕ ಮಕ್ಕಳನ್ನು ಕರೆದುಕೊಂಡು ಅರ್ಜೆಂಟೈನಾಗೆ ಹೊರಟರು. ಆಗ ದೋಣಿಯಲ್ಲಿ ಹಲವು ವಾರಗಳು ಪ್ರಯಾಣ ಮಾಡಬೇಕಿತ್ತು. ಅವರಿಗೆ ಅದೊಂದು ಸಾಹಸದ ಕೆಲಸವಾಗಿತ್ತು. ಅದೇ ಅವರಿಗೆ ಪ್ರೇರಣೆಯೂ ಆಗಿತ್ತು. ತನ್ನ ಕೆಲವು ಪರಿಚಿತರನ್ನು ಪಾಲುದಾರರನ್ನಾಗಿ ಮಾಡಿಕೊಂಡು ಪಶುಸಾಕಣೆ ಮಾಡುವ ಒಂದು ಅಸ್ಪಷ್ಟವಾದ ಯೋಜನೆಯನ್ನೂ ಹಾಕಿಕೊಂಡಿದ್ದರು. ಆದರೆ ಕುಟುಂಬ ಅಲ್ಲಿಗೆ ಬಂದು ಸೇರಿದ ವರ್ಷದೊಳಗಾಗಿಯೇ ಆ ಯೋಜನೆ ವಿಫಲವಾಯಿತು. ತೋಟದಲ್ಲಿನ ಪರಿಸ್ಥಿತಿ ಅವರು ಭಾವಿಸಿದ್ದಕ್ಕಿಂತಲೂ ಹೆಚ್ಚು ಕಠಿಣವಾಗಿತ್ತು. ಆ ಸಾಹಸೋದ್ಯಮಕ್ಕೆ ಅವರು ತಂದ ಹಣ ಸಾಲದು ಎಂದು ಪಾಲುದಾರರು ಆಕ್ಷೇಪಿಸಿದರು. ಅವರೊಂದಿಗೆ ಜಗಳ ಮಾಡಿಕೊಂಡರು. ಅವರ ಕುಟುಂಬ ಅಪರಿಚಿತ ದೇಶದಲ್ಲಿ, ಯಾವ ಆದಾಯವೂ ಇಲ್ಲದೆ ದೂರದ ಯವುದೋ ಒಂದು ಕೊಂಪೆಯಲ್ಲಿ ಸಿಲುಕಿಕೊಂಡಿತು. ಹಾಗೆ ನೋಡಿದರೆ ಫ್ರಾನ್ಸಿಗೆ ಮರಳುವುದು ಅವರಿಗೆ ತುಂಬಾ ಕಷ್ಟವೇನಾಗಿರಲಿಲ್ಲ. ಯುದ್ಧದ ನಂತರ ಫ್ರಾನ್ಸ್ ಚೇತರಿಸಿಕೊಳ್ಳುತ್ತಿತ್ತು. ಸುಲಭವಾಗಿ ಕೆಲಸ ಸಿಗುತ್ತಿತ್ತು. ಅವರ ಸೋದರರು ಆರ್ಥಿಕವಾಗಿ ಸುಸ್ಥಿಯಲ್ಲಿದ್ದರು. ಫ್ರಾನ್ಸಿಗೆ ತಮ್ಮ ಅಣ್ಣನನ್ನು ಕರೆಸಿಕೊಳ್ಳುವುದು ಅವರಿಗೆ ಕಷ್ಟವಾಗುತ್ತಿರಲಿಲ್ಲ. ಆದರೆ ಆಲ್ಬರ್ಟ್, ಮರಳಿ ಹೋಗಲು ಸಿದ್ಧನಿರಲಿಲ್ಲ. ನಷ್ಟ ಅನುಭವಿಸಿ, ಪ್ರಯಾಣದ ಖರ್ಚನ್ನು ಸಹೋದರರಿಂದ ಪಡೆದು, ಖಾಲಿ ಕೈಯಲ್ಲಿ ವಾಪಸ್ಸು ಹೋಗುವುದು ಆಲ್ಬರ್ಟ್‌ಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಅದು ಸ್ವಾಭಿಮಾನದ ಪ್ರಶ್ನೆಯಾಗಿತ್ತು. ಈ ವಿಷಯವನ್ನು ಹಲವಾರು ವರ್ಷಗಳ ನಂತರ ಸ್ವತಃ ಎಸ್ತರಳ ಅಜ್ಜಿ ಇವಲೀನ್ ಎಸ್ತರ್‌ಗೆ ಹೇಳಿದಳು. ಅವರು ಎರಡು ವರ್ಷಗಳ ಕಾಲ ಅಲ್ಲೇ ದಟ್ಟದಾರಿದ್ರ್ಯದಲ್ಲಿ ಜೀವನ ನಡೆಸಿದರು. ಹಾಗಿದ್ದಾಗ್ಯೂ ದೇಶೀ ಮಂದಿಗಿಂತ ತಾವು ಉತ್ತಮರು ಎನ್ನುವ ಮೇಲರಿಮೆಗೇನು ಕೊರತೆ ಇರಲಿಲ್ಲ. ಮಕ್ಕಳು ಮನೆಯಲ್ಲಿ ಸ್ಪಾನಿಷ್ ಮಾತಾಡುವಂತಿರಲಿಲ್ಲ. ಎಸ್ತರಳ ತಾಯಿ ವಯೋಲೈನ್ ಅರ್ಜೆಂಟೈನಾದಲ್ಲಿ ಶಾಲೆಗೆ ಹೋಗದೆ, ದೂರಶಿಕ್ಷಣದ ಮೂಲಕ ತನ್ನ ಓದು ಮುಗಿಸಿದಳು. ಮನೆಯಲ್ಲಿ ತನ್ನ ವಿರಾಮದ ಸಮಯವೆಲ್ಲವನ್ನೂ ಮನೆಗೆಲಸ ಮಾಡುತ್ತಾ, ಮಕ್ಕಳ ಸವೆದ ಚಪ್ಪಲಿಯನ್ನು ಸರಿಪಡಿಸುತ್ತಾ ಕಾಲಕಳೆದಳು. ಕೊನೆಗೆ ಇನ್‌ಸ್ಟಿಟ್ಯೂಟ್ ಮೆರಿಯುಕ್ಸ್ ಎಂಬ ಫ್ರೆಂಚ್ ಔಷಧಿ ಕಂಪನಿಯಲ್ಲಿ ಆಲ್ಬರ್ಟ್‌ಗೆ ಕೆಲಸ ಸಿಕ್ಕಿತು. ಅವರ ಕುಟುಂಬದ ಆರ್ಥಿಕ ಪರಿಸ್ಥಿತಿ ಕ್ರಮೇಣ ಸುಧಾರಿಸಿತು. ಅವರು ಅರ್ಜೆಂಟೈನಾದಲ್ಲಿ ಹತ್ತು ವರ್ಷಗಳು ಇದ್ದು ನಂತರ ಪೆರು, ಕೊಲಂಬಿಯಾ ಮತ್ತು ಸೆನೆಗಾಲ್ ಹೋದರು. ಆಲ್ಬರ್ಟ್‌ನ ಆರೋಗ್ಯ ಕ್ಷೀಣಿಸಿತೊಡಗಿದಾಗ (ಆಗ ಆಲ್ಬರ್ಟ್‌ಗೆ ಹೇಳಿಕೊಳ್ಳುವಂತಹ ವಯಸ್ಸೇನಾಗಿರಲಿಲ್ಲ) ಅವರು ಫ್ರಾನ್ಸಿಗೆ ಮರಳಿದರು. ಆ ಹೊತ್ತಿಗೆ ಅವರು ಬದುಕಿನಲ್ಲಿ ಒಂದಿಷ್ಟು ಸಾಧಿಸಿದ್ದೇವೆ ಎಂದು ಹೇಳಿಕೊಳ್ಳಬಹುದಾದ ಸ್ಥಿತಿಗೆ ಬಂದಿದ್ದರು. ಆದರೂ ಆ ಕಾರ್ಪಣ್ಯದ ಬದುಕು ಅವರ ಆರೋಗ್ಯವನ್ನು ಬಲಿ ತೆಗೆದುಕೊಂಡಿತ್ತು. ಫ್ರಾನ್ಸಿಗೆ ಮರಳಿದ ಕೆಲವೇ ದಿನಗಳಲ್ಲಿ ಆಲ್ಬರ್ಟ್ ತೀರಿಕೊಂಡರು.

ಸೋಲಿನ ಭಯ ರಿಸ್ಕ್ ಇರುವ ಸಾಹಸಕ್ಕೆ ಕೈಹಾಕದಂತೆ ಮಾಡುತ್ತದೆ. ಹಲವರು ಪ್ರಯತ್ನಿಸುವುದೇ ಬೇಡವೆಂದು ಸುಮ್ಮನಾಗಿಬಿಡುತ್ತಾರೆ. ಎಲ್ಲರೂ ತಾವು ಬುದ್ಧಿವಂತರು, ಕಠಿಣ ಪರಿಶ್ರಮ ಮಾಡುವವರು ಮತ್ತು ನೈತಿಕವಾಗಿ ಸರಿ ಇರುವವರು ಎನ್ನುವ ಚಿತ್ರವನ್ನು ಕಾಪಾಡಿಕೊಳ್ಳಲು ಬಯಸುತ್ತಾರೆ. ಏಕೆಂದರೆ ನಾವು ಪೆದ್ದರು, ಸೋಮಾರಿಗಳು ಮತ್ತು ನೀತಿನಿಷ್ಠೆ ಇಲ್ಲದವರು ಎಂದು ಒಪ್ಪಿಕೊಳ್ಳುವುದು ನಮಗೇ ಸಾಧ್ಯವಿಲ್ಲ. ಜೊತೆಗೆ, ನಮ್ಮ ಬಗ್ಗೆ ಒಳ್ಳೆಯ ಭಾವನೆ ಇದ್ದಾಗಷ್ಟೇ ನಮಗೆ ಜೀವನದಲ್ಲಿ ಬರುವ ಸವಾಲುಗಳನ್ನು ಎದುರಿಸುವುದಕ್ಕೆ ಬೇಕಾದ ಆತ್ಮಸ್ಥೈರ್ಯ ಸಾಧ್ಯವಾಗುವುದು. ನಮ್ಮ ಬಗ್ಗೆ ಒಳ್ಳೆಯ ಇಮೇಜನ್ನು ಇಟ್ಟುಕೊಳ್ಳುವುದು ಮುಖ್ಯ ಅನ್ನುವುದು ಸತ್ಯವಾದರೆ, ಅದಕ್ಕೆ ಮೆರಗುಕೊಟ್ಟು ಎದ್ದು ಚೆನ್ನಾಗಿ ಕಾಣುವಂತೆ ಮಾಡುವುದಕ್ಕೂ ಅರ್ಥವಿದೆ. ಈ ಪ್ರಕ್ರಿಯೆಯಲ್ಲಿ ನಮ್ಮ ಬಗ್ಗೆ ಇರುವ ಋಣಾತ್ಮಕ ಮಾಹಿತಿಗಳನ್ನೆಲ್ಲಾ ಸಕ್ರಿಯವಾಗಿ ಸೋಸಿಬಿಡುತ್ತೇವೆ. ಅಥವಾ ನಮಗೆ ತೊಂದರೆಯಾಗಬಹುದಾದ ತೀರ್ಮಾನಗಳನ್ನು ಆದಷ್ಟು ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ ಒಬ್ಬ ಭಿಕ್ಷುಕನಿಗೆ ಭಿಕ್ಷೆ ಕೊಡದೇ ಹಾಗೆ ಅವನನ್ನು ದಾಟಿಕೊಂಡು ಹೋಗಿಬಿಟ್ಟರೆ ನಾವು ಉದಾರಿಗಳಾಗುವುದಿಲ್ಲ. ಹಾಗಾಗಿ ಅವರನ್ನು ಗಮನಿಸದೇ ರಸ್ತೆ ದಾಟಿಬಿಟ್ಟರೆ ನಾನು ಉದಾರಿಯಲ್ಲ ಅನ್ನುವ ಭಾವನೆಯಿಂದ ತಪ್ಪಿಸಿಕೊಳ್ಳಬಹುದು. ಪರೀಕ್ಷೆಯೊಂದಕ್ಕೆ ಚೆನ್ನಾಗಿ ಅಭ್ಯಾಸ ಮಾಡಲು ಆಗದೇ ಹೋದ ಒಳ್ಳೆಯ ವಿದ್ಯಾರ್ಥಿಯೊಬ್ಬ ತಾನು ಓದಿದ್ದರೆ ಚೆನ್ನಾಗಿ ಮಾಡುತ್ತಿದ್ದೆ ಎಂದುಕೊಂಡು, ತಾನು ಬುದ್ಧಿವಂತ ಎನ್ನುವ ಭಾವನೆಯನ್ನು ಉಳಿಸಿಕೊಳ್ಳಬಹುದು. ಅದೇ ರೀತಿಯಲ್ಲಿ ವಲಸೆ ಹೋಗದೆ ಊರಲ್ಲೇ ಉಳಿದುಕೊಂಡ ವ್ಯಕ್ತಿ, ವಲಸೆ ಹೋಗಿದ್ದರೆ ತಾನು ತುಂಬಾ ಯಶಸ್ವಿಯಾಗುತ್ತಿದ್ದೆ ಎನ್ನುವ ಭಾವನೆಯೊಂದಿಗೆ ಜೀವಿಸಿಬಿಡಬಹುದು.

ಯಥಾಸ್ಥಿತಿಯನ್ನು ಉಳಿಸಿಕೊಳ್ಳುವ ಮನಃಸ್ಥಿತಿಯನ್ನು ಮೀರಿಕೊಳ್ಳ ಬೇಕಾದರೆ ನಮಗೆ ಕನಸು ಕಾಣುವುದಕ್ಕೆ ಸಾಧ್ಯವಾಗಬೇಕು. ಅಥವಾ ತುಂಬಾ ಆತ್ಮವಿಶ್ವಾಸವಿರಬೇಕು. ಹಾಗಾಗಿಯೇ ತುಂಬಾ ಯಶಸ್ವಿಯಾದ ಉದ್ದಿಮೆದಾರರಲ್ಲಿ ಹೆಚ್ಚಿನವರು ಒಂದು ವಿಶೇಷವಾದ ಸ್ಫೂರ್ತಿಯಿಂದ ವಲಸೆ ಹೋದಂತಹವರೇ ಆಗಿರುತ್ತಾರೆ. ಕೇವಲ ಹತಾಶೆಯಿಂದ ಅಥವಾ ಶ್ರೀಮಂತಿಕೆಯ ಆಸೆಯಿಂದ ಇಲ್ಲವೇ ಉನ್ನತ ಶಿಕ್ಷಣದ ಕನಸನ್ನು ಇಟ್ಟುಕೊಂಡು ಹೋದವರಲ್ಲಿ ಇಂತಹ ಯಶಸ್ವೀ ಉದ್ದಿಮೆದಾರರು ಕಂಡುಬಂದಿರುವುದು ಕಡಿಮೆ.

ಟೊಕೆವಿಲ್ಲೆ ನಂತರ

ಆದರೆ ಈ ನಿಯಮಕ್ಕೆ ಅಮೆರಿಕ ಒಂದು ಅಪವಾದ ಎನ್ನುತ್ತಾರೆ. ಏಕೆಂದರೆ ಅವರಲ್ಲಿ ಹೆಚ್ಚಿನವರು ರಿಸ್ಕ್ ಎದುರಿಸಿ ಹೊಸ ಅವಕಾಶಗಳೊಂದಿಗೆ ಮುಖಾಮುಖಿಯಾಗುವುದನ್ನು ಬಯಸುತ್ತಾರೆ. ಅಥವಾ ಕೊನೇಪಕ್ಷ ಅಮೆರಿಕದವರ ಬಗ್ಗೆ ಅಂತಹ ಒಂದು ಭಾವನೆ ಇದೆ. ಅಲೆಕ್ಸಿಸ್ ಡಿ ಟೊಕೆವಿಲ್ಲೆ 19ನೇ ಶತಮಾನದಲ್ಲಿ ಫ್ರಾನ್ಸಿನಲ್ಲಿದ್ದ ಒಬ್ಬ ಕುಲೀನ. ಅವನು ಅಮೆರಿಕೆಯನ್ನು ಒಂದು ಮುಕ್ತ ಸಮಾಜಕ್ಕೆ ಮಾದರಿ ಎಂದು ಭಾವಿಸಿದ್ದ. ಅಮೇರಿಕೆಯಲ್ಲಿರುವ ಚಡಪಡಿಕೆ ಅದಕ್ಕೆ ಒಂದು ಕಾರಣ ಎಂದು ಅಂದುಕೊಂಡಿದ್ದ. ಜನ ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ, ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕೆ ಸದಾ ಚಲಿಸುತ್ತಲೇ ಇದ್ದರು. ಅಲ್ಲಿ ವಂಶಪಾರಂಪರ್ಯವಾದ ವರ್ಗ ವ್ಯವಸ್ಥೆ ಇಲ್ಲ ಮತ್ತು ಅವರಲ್ಲಿ ಹಣ ಸಂಗ್ರಹಿಸಬೇಕೆಂಬ ಒಂದು ನಿರಂತರವಾದ ತುಡಿತ ಇದೆ. ಅವರ ಚಡಪಡಿಕೆಗೆ ಇವೆರಡೂ ಕಾರಣ ಎನ್ನುತ್ತಾನೆ ಟೊಕೆವಿಲ್ಲೆ. ಅಲ್ಲಿ ಎಲ್ಲರೂ ಶ್ರೀಮಂತರಾಗಲು ಪ್ರಯತ್ನಿಸುತ್ತಿದ್ದರು. ಹಾಗಾಗಿ ಅವಕಾಶಗಳು ಎಲ್ಲೇ ಇರಲಿ, ಅವುಗಳ ಬೆನ್ನುಹತ್ತಿ ಹೋಗುತ್ತಿದ್ದರು. ಅದು ಅವರ ಜವಾಬ್ದಾರಿ ಅಂತ ಅವರು ಭಾವಿಸಿದ್ದರು.

ಇಂದಿಗೂ ಅಮೆರಿಕನ್ನರು ಈ ಅಮೆರಿಕನ್ ಕನಸನ್ನು ನಂಬಿದ್ದಾರೆ. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಅಮೆರಿಕನ್ನರ ಶ್ರೀಮಂತಿಕೆಯಲ್ಲಿ ಅನುವಂಶಿಕತೆಯ ಪಾತ್ರ ಇದೆ. ಅದು ಯುರೋಪಿಗಿಂತಲೂ ಹೆಚ್ಚಾಗಿಯೇ ಇದೆ. ಬಹುಶಃ ಅದರಿಂದಾಗಿಯೇ ಅಮೆರಿಕೆಯಲ್ಲಿ ಚಡಪಡಿಕೆ ಕಮ್ಮಿಯಾಗಿದೆ. ಹೆಚ್ಚುತ್ತಿರುವ ಅಂತಾರಾಷ್ಟ್ರೀಯ ವಲಸೆ

ಕುರಿತು ಈಗ ಅವರಲ್ಲಿ ಅಸಹನೆಯೂ ಹೆಚ್ಚುತ್ತಿದೆ. ಅಮೆರಿಕನ್ನರು ಈಗ ಮೊದಲಿನಷ್ಟು ಚಲನಶೀಲರಾಗಿಲ್ಲ. 1950ರಲ್ಲಿ ಶೇಕಡ 7ರಷ್ಟು ಅಮೆರಿಕನ್ನರು ಪ್ರತಿವರ್ಷ ಬೇರೆ ದೇಶಗಳಿಗೆ ಹೋಗುತ್ತಿದ್ದರು. 2018ರಲ್ಲಿ ಅವರ ಸಂಖ್ಯೆ ಶೇಕಡ 4ಕ್ಕಿಂತಲೂ ಕಡಿಮೆಯಾಗಿದೆ. 1990ರಿಂದ ಹೀಗೆ ಹೋಗುವವರ ಸಂಖ್ಯೆ ಕಡಿಮೆಯಾಗತೊಡಗಿತು. ಅದು 2000ದ ಮಧ್ಯದ ಹೊತ್ತಿಗೆ ತೀವ್ರಗೊಂಡಿತು. ಅಷ್ಟೇ ಅಲ್ಲ ದೇಶದ ಒಳಗೂ ವಲಸೆಯ ಮಾದರಿಯಲ್ಲಿ ಗಮನಾರ್ಹ ಬದಲಾವಣೆಯಿದೆ. 1980ರ ಮಧ್ಯಭಾಗದವರಗೆ ಅಮೆರಿಕೆಯ ಶ್ರೀಮಂತ ರಾಜ್ಯಗಳಲ್ಲಿ ಜನಸಂಖ್ಯೆಯ ಹೆಚ್ಚಳ ವೇಗವಾಗಿತ್ತು. ಆದರೆ 1990ರಿಂದ ಇದು ತಪ್ಪಿದೆ. ಶ್ರೀಮಂತ ರಾಜ್ಯಗಳು ಹೆಚ್ಚು ಜನರನ್ನು ಆಕರ್ಷಿಸುತ್ತಿರಲಿಲ್ಲ. ಆದರೆ ಉನ್ನತ ಕೌಶಲವಿರುವ ಕೆಲಸಗಾರರು ಈಗಲೂ ಬಡ ರಾಜ್ಯಗಳಿಂದ ಶ್ರೀಮಂತ ರಾಜ್ಯಗಳತ್ತ ವಲಸೆ ಬರುತ್ತಿದ್ದಾರೆ. ಆದರೆ ಕಡಿಮೆ ಕೌಶಲದ ಕೆಲಸಗಾರರು ಇದಕ್ಕೆ ವಿರುದ್ಧವಾಗಿ ಬಡರಾಜ್ಯಗಳ ಕಡೆ ಹೋಗುತ್ತಿದ್ದಾರೆ. ಈ ಎರಡೂ ಪ್ರವೃತ್ತಿಗಳನ್ನು ಗಮನಿಸಿದಾಗ 1990ರಿಂದಾಚೆಗೆ ಅಮೆರಿಕೆಯ ಕಾರ್ಮಿಕ ಮಾರುಕಟ್ಟೆ ಕೌಶಲದ ಆಧಾರದ ಮೇಲೆ ಸ್ಪಷ್ಟವಾಗಿ ಎರಡಾಗಿ ವಿಭಜಿತವಾಗಿದೆ. ಕರಾವಳಿಗಳು ಹೆಚ್ಚೆಚ್ಚು ಸುಶಿಕ್ಷಿತರನ್ನು ಆಕರ್ಷಿಸಿದರೆ, ಕಡಿಮೆ ಶಿಕ್ಷಣ ಹೊಂದಿರುವವರು ಒಳನಾಡಿನಲ್ಲಿ ಅದರಲ್ಲೂ ಹಳೆಯ ಔದ್ಯೋಗಿಕ ನಗರಗಳಾದ ಡೆಟ್ರಾಟ್, ಕ್ಲೀವ್‌ಲ್ಯಾಂಡ್ ಮತ್ತು ಪಿಟ್ಸ್‌ಬರ್ಗ್‌ನಲ್ಲಿ ಸೇರಿಕೊಳ್ಳುತ್ತಿದ್ದಾರೆ. ಈ ವ್ಯತ್ಯಾಸವು ಸಂಪಾದನೆ, ಬದುಕಿನ ಕ್ರಮ ಮತ್ತು ಮತದಾನದ ವಿಧಾನದಲ್ಲೂ ಕಾಣುತ್ತಿದೆ. ಕೆಲವು ಪ್ರಾಂತ್ಯಗಳು ತುಂಬಾ ಹಿಂದೆ ಉಳಿದುಕೊಂಡಿವೆ. ಕೆಲವು ತುಂಬಾ ಮುಂದುವರಿದಿವೆ. ಒಂದು ರೀತಿಯ ಅವ್ಯವಸ್ಥೆಯ ಭಾವ ಕಂಡುಬರುತ್ತಿದೆ.

ತುಂಬಾ ಉನ್ನತ ಶಿಕ್ಷಣ ಪಡೆದಿರುವ ಸಾಫ್ಟ್‌ವೇರ್ ಅಥವಾ ಬಯೋಟೆಕ್ ಕೆಲಸಗಾರರಿಗೆ ಪಾಲೋ ಆಲ್ಟೋ, ಕ್ಯಾಲಿಫೋರ್ನಿಯಾ ಅಥವಾ ಕೇಂಬ್ರಿಡ್ಜ್, ಮೆಸ್ಸಾಚುಸೆಟ್ಸ್ ಇಂತಹ ಸ್ಥಳಗಳ ಆಕರ್ಷಣೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಮತ್ತು ಅದರಲ್ಲಿ ಅಚ್ಚರಿಯೇನಿಲ್ಲ. ಆ ನಗರಗಳಲ್ಲಿ ಉನ್ನತ ಶಿಕ್ಷಣವಿರುವ ಕೆಲಸಗಾರರಿಗೆ ಒಳ್ಳೆಯ ಸಂಬಳ ದೊರಕುತ್ತದೆ ಮತ್ತು ಅಲ್ಲಿ ಅವರು ಬಯಸುವಂತಹ ಅನುಕೂಲಗಳು ಮತ್ತು ಸ್ನೇಹಿತರು ಸಿಗುವ ಸಾಧ್ಯತೆಗಳೂ ಹೆಚ್ಚು.

ಆದರೆ ಕಡಿಮೆ ಓದಿರುವ ಕೆಲಸಗಾರರು ಅಲ್ಲಿಗೇಕೆ ಹೋಗುವುದಿಲ್ಲ? ವಕೀಲರಿಗೆ ತೋಟದ ಮಾಲಿಗಳು, ಅಡುಗೆಯವರು ಮತ್ತು ಬಾರ್ ಅಟೆಂಡರುಗಳು ಬೇಕು. ಸುಶಿಕ್ಷಿತ ಕೆಲಸಗಾರರ ಸಾಂದ್ರೀಕರಣವು ಅಶಿಕ್ಷಿತ ಕೆಲಸಗಾರರಿಗಾಗಿ ಬೇಡಿಕೆಯನ್ನು ಸೃಷ್ಟಿಸಿ ಅವರನ್ನು ಅಲ್ಲಿಗೆ ಬರುವಂತೆ ಉತ್ತೇಜಿಸಬೇಕು. ಆದರೆ ಇದು ಅಮೆರಿಕೆ. ಹಾಗಾಗಿ ಇಲ್ಲಿ ಬಾಂಗ್ಲಾದೇಶದಂತೆ ಆಗುವುದಿಲ್ಲ. ಪ್ರತಿಯೊಬ್ಬರ ಬಳಿಯೂ ರಾಜ್ಯದಲ್ಲಿ ಅಷ್ಟೇ ಏಕೆ ದೇಶದಾದ್ಯಂತ ಎಲ್ಲಿಂದ ಎಲ್ಲಿಗೆ ಪ್ರಯಾಣ ಮಾಡುವುದಕ್ಕೂ ಬಸ್‌ಟಿಕೇಟಿಗೆ ಹಣವಿರುತ್ತದೆ. ಎಲ್ಲರಿಗೂ ಸರಿಯಾದ ಮಾಹಿತಿ ತಿಳಿದಿರುತ್ತದೆ. ಎಲ್ಲರಿಗೂ ಯಾವ ನಗರಗಳಲ್ಲಿ ಹೆಚ್ಚು ಹಣ ಸಿಗುತ್ತದೆ ಎನ್ನುವುದು ತಿಳಿದಿರುತ್ತದೆ.

ಉನ್ನತ ಶಿಕ್ಷಣ ಪಡೆದವರಿಗೆ ಹೋಲಿಸಿದರೆ ಕೇವಲ ಹೈಸ್ಕೂಲ್ ಮಟ್ಟದ ವಿಧ್ಯಾಭ್ಯಾಸ ಇರುವ ಕೆಲಸಗಾರರಿಗೆ ಇಂತಹ ಸಂಪದ್ಭರಿತ ನಗರಗಳಲ್ಲಿ ಆದಾಯದಿಂದ ಬರುವ ಲಾಭ ಕಡಿಮೆ. ಇದು ಅವರು ಅಲ್ಲಿಗೆ ಹೋಗದಿರುವುದಕ್ಕೆ ಒಂದು ಕಾರಣ. ಕಡಿಮೆ ಕೌಶಲದ ಕಾರ್ಮಿಕರಿಗೂ ಕೂಡ ಒಂದು ವೇಜ್ ಪ್ರೀಮಿಯಂ ಇದೆ. ಸಂಬಳಗಳ ದರವನ್ನು ಆನ್‌ಲೈನ್ ಹಾಕುವ ವೆಬ್‌ಸೈಟುಗಳ ಪ್ರಕಾರ ಸ್ಟಾರ್‌ಬಕ್ಸ್ ಬರಿಸ್ಟಾ ಕಂಪನಿಯು ಬಾಸ್ಟನ್ನಿನಲ್ಲಿ ಒಂದು ಗಂಟೆಗೆ 12 ಡಾಲರ್ ಮತ್ತು ಬೋಯ್ಸ್‌ನಲ್ಲಿ 9 ಡಾಲರ್‌ಗಳನ್ನೂ ನೀಡುತ್ತವೆ. ಇದು ಉನ್ನತ ಕೌಶಲ ಇರುವ ಕೆಲಸಗಾರರು ಪಡೆಯುವ ಲಾಭದಷ್ಟಿಲ್ಲ. ಆದರೆ ತೀರಾ ಕಡಿಮೆಯೂ ಅಲ್ಲ.

ಹೆಚ್ಚು ಕೌಶಲವಿರುವ ಕಾರ್ಮಿಕರ ಸಂಖ್ಯೆಯು ಹೆಚ್ಚಾಗುತ್ತಿದೆ. ವಸತಿಗಳಿಗೆ ಬೇಡಿಕೆಯೂ ಹೆಚ್ಚುತ್ತಿದೆ. ಹಾಗಾಗಿ ಪಾಲೋ ಆಲ್ಟೋ, ಕೇಂಬ್ರಿಡ್ಜ್ ಮತ್ತು ಅಂತಹ ಇತರ ಸ್ಥಳಗಳಲ್ಲಿ ವಸತಿಗಾಗಿ ಮಾಡಬೇಕಾದ ವೆಚ್ಚವೂ ಮಿತಿಮೀರಿ ಹೋಗಿದೆ. ಒಬ್ಬ ವಕೀಲ ಮತ್ತು ಒಬ್ಬ ಗೃಹರಕ್ಷಕ ದಕ್ಷಿಣದ ಮೂಲೆಯಲ್ಲಿ ಸಂಪಾದಿಸುವುದಕ್ಕಿಂತ ಹೆಚ್ಚಾಗಿ ನ್ಯೂ ಯಾರ್ಕಿನಲ್ಲಿ ಸಂಪಾದಿಸುತ್ತಾರೆ. ಆದರೆ ಅವರಲ್ಲಿ ವ್ಯತ್ಯಾಸವಿದೆ. ಒಬ್ಬ ವಕೀಲ ನ್ಯೂ ಯಾರ್ಕಿನಲ್ಲಿ ಶೇಕಡ 45ರಷ್ಟು ಹೆಚ್ಚು ಸಂಪಾದಿಸಿದರೆ, ಒಬ್ಬ ಗೃಹರಕ್ಷಕ ಶೇಕಡ 32ರಷ್ಟು ಹೆಚ್ಚು ಸಂಪಾದಿಸುತ್ತಾನೆ. ನ್ಯೂ ಯಾರ್ಕಿನಲ್ಲಿ ವಕೀಲ ತನ್ನ ಆದಾಯದ ಶೇಕಡ 21ರಷ್ಟನ್ನು ವಸತಿಗಾಗಿ ಖರ್ಚುಮಾಡಿದರೆ, ಒಬ್ಬ ಗೃಹರಕ್ಷಕ ಶೇಕಡ 52ರಷ್ಟು ಖರ್ಚು ಮಾಡಬೇಕಾಗುತ್ತದೆ. ಹಾಗಾಗಿ ವಕೀಲನಿಗೆ ಖರ್ಚೆಲ್ಲಾ ಕಳೆದಮೇಲೆ ದಕ್ಷಿಣದಲ್ಲಿ ದೊರಕುವುದಕ್ಕಿಂತ ಸಾಕಷ್ಟು ಹೆಚ್ಚು ಹಣ ನ್ಯೂ ಯಾರ್ಕಿನಲ್ಲಿ ದೊರೆಯುತ್ತದೆ. ಆದ-ರೆ ಗೃಹರಕ್ಷಕನ ವಿಷಯದಲ್ಲಿ ಪರಿಸ್ಥಿತಿಯು ಅದಕ್ಕೆ ತದ್ವಿರುದ್ಧ. ಅವ-ರಿಗೆ ದಕ್ಷಿಣದಲ್ಲೇ ಹೆಚ್ಚು (ಶೇಕಡ 6ರಷ್ಟು) ಉಳಿಯುತ್ತದೆ. ಹಾಗಾಗಿ ಗೃಹರಕ್ಷಕನೊಬ್ಬ ನ್ಯೂ ಯಾರ್ಕಿಗೆ ಬರುವುದರಲ್ಲಿ ಯಾವ ಅರ್ಥವೂ ಇಲ್ಲ.

ಸ್ಯಾನ್ ಫ್ರಾನ್ಸಿಸ್ಕೋನ ಮಿಷನ್ ಜಿಲ್ಲೆ ಈ ವಿದ್ಯಮಾನಕ್ಕೊಂದು ಸಂಕೇತವಾಗಿಬಿಟ್ಟಿದೆ. 1990ರ ಕೊನೆಯ ಭಾಗದವರಗೆ ಅದು ಹಿಸ್‌ಪ್ಯಾನಿಸ್ ವಲಸೆಗಾರರೇ ಹೆಚ್ಚಾಗಿದ್ದ ಕಾರ್ಮಿಕರ ಪ್ರದೇಶವಾಗಿ-ತ್ತು. ಆದರೆ ಟೆಕ್ ಉದ್ದಿಮೆಯಲ್ಲಿ ಕೆಲಸ ಮಾಡುವವರು ಅಲ್ಲಿಗೆ ಬರುವುದಕ್ಕೆ ಪ್ರಾರಂಭಿಸಿದ್ದರಿಂದ ಮನೆಬಾಡಿಗೆ ಏರಲಾರಂಭಿಸಿತು. ಅಲ್ಲಿ ಒಂದು ಬೆಡ್‌ರೂಮ್ ಇರುವ ಅಪಾರ್ಟ್‌ಮೆಂಟಿಗೆ 2011ರಲ್ಲಿ 1900 ಡಾಲರ್ ಬಾಡಿಗೆ ಇದ್ದದ್ದು 2013ರ ಹೊತ್ತಿಗೆ 2675 ಡಾಲರ್ ಆಯಿತು. 2014ರ ಹೊತ್ತಿಗೆ 3250 ಡಾಲರ್‌ಗಳಿಗೆ ಏರಿತು. ಇಂದು ಮಿಷನ್ ಜಿಲ್ಲೆಯಲ್ಲಿ ಕನಿಷ್ಠ ಕೂಲಿ ಬರುವ ಯಾವ ವ್ಯಕ್ತಿಯೂ ಅಪಾರ್ಟ್‌ಮೆಂಟನ್ನು ಬಾಡಿಗೆಗೆ ಪಡೆಯುವುದಕ್ಕೆ ಸಾಧ್ಯವಿಲ್ಲ. ಅಲ್ಲಿನ ಟೆಕ್ ಕೆಲಸಗಾರರನ್ನು ಹೊರಗಟ್ಟಬೇಕೆಂದು “ಮಿಷನ್ ಯುಪ್ಪಿ ಎರಾಡಿಕೇಷನ್ ಪ್ರೊಜೆಕ್ಟ್” ಪ್ರಾರಂಭವಾಯಿತು. ಎಷ್ಟೋ ಟೆಕ್ಕಿಗಳ ಕಾರುಗಳನ್ನು ನಾಶಪಡಿಸಲಾಯಿತು. ಚಳುವಳಿ ಸಾರ್ವಜನಿಕ ಗಮನವನ್ನು ದೊಡ್ಡ ಪ್ರಮಾಣದಲ್ಲಿ ಸೆಳೆಯಿತು. ಆದರೆ ಕೊನೆಯಲ್ಲಿ ಅವರ ಪ್ರಯತ್ನ ವಿಫಲವಾಯಿತು.

ಬೆಳೆಯುತ್ತಿರುವ ನಗರಗಳ ಸಮೀಪದಲ್ಲಿ ಹೆಚ್ಚಿನ ಮನೆಗಳನ್ನು ಕಟ್ಟಬಹುದು. ಆದರೆ ಅದಕ್ಕೆ ಸಮಯ ಹಿಡಿಯುತ್ತದೆ. ಅದಕ್ಕಿಂತ ಹೆಚ್ಚಾಗಿ ಅಮೆರಿಕೆಯ ಹಳೆಯ ನಗರಗಳಲ್ಲಿ ಕಟ್ಟಡಗಳನ್ನು ಒತ್ತೊತ್ತಾಗಿ ಕಟ್ಟುವುದು ಸಾಧ್ಯವಿಲ್ಲ. ಅಲ್ಲಿಯ ಪ್ರಾಂತೀಯ ಕಾನೂನು ಅದಕ್ಕೆ ಅವಕಾಶಕೊಡುವುದಿಲ್ಲ. ಹೊಸ ಕಟ್ಟಡಗಳು ಈಗಿರುವ ಕಟ್ಟಡಗಳ ಮಾದರಿಯಲ್ಲೇ ಇರಬೇಕು, ಅವುಗಳಿಗಿಂತ ತುಂಬ ಭಿನ್ನವಾಗಿ ಕಟ್ಟುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಹೊಸದಾಗಿ ಬಂದ ವಲಸಿಗರಿಗೆ ಆಯ್ಕೆ ಕಷ್ಟ. ಅವರು ತುಂಬಾ ದೂರದ ಸ್ಥಳಗಳಲ್ಲಿ ಮನೆ ಮಾಡಬೇಕು, ಇಲ್ಲ ದುಬಾರಿಯಾದ ಬಾಡಿಗೆ ಕೊಡಬೇಕು.

ಅಮೆರಿಕೆಯಲ್ಲಿ ಇತ್ತೀಚಿನ ದಿನಗಳಲ್ಲಿ ದೊಡ್ಡ ಶಿಕ್ಷಣ ಸಂಸ್ಥೆಗಳು ಇರುವ ಕಡೆಗಳಲ್ಲೇ ಹೆಚ್ಚಿನ ಬೆಳವಣಿಗೆ ಆಗುತ್ತಿದೆ. ಇವೆಲ್ಲ ಸಾಮಾನ್ಯವಾಗಿ ತುಂಬಾ ಹಳೆಯ ನಗರಗಳು ಮತ್ತು ಅಲ್ಲೆಲ್ಲಾ ವಸತಿ ಹಾಗೂ ನಿವೇಶನಗಳು ತುಂಬಾ ದುಬಾರಿ. ಮತ್ತು ಆ ಪ್ರದೇಶಗಳಲ್ಲಿ ವಸತಿ ಮತ್ತು ನಿವೇಶನಗಳು ಬೆಳೆಯುವುದಕ್ಕೆ ಆಸ್ಪದವೇ ಇಲ್ಲ. ಹಲವಷ್ಟು ನಗರಗಳು ಯುರೋಪಿನ ನಗರಗಳ ಮಾದರಿಯಲ್ಲಿಯೇ ಇರುವ ನಗರಗಳು. ಬೆಳವಣಿಗೆಯನ್ನು ವಿರೋಧಿಸಿಕೊಂಡು ತಮ್ಮ ಐತಿಹಾಸಿಕ ಗುಣ ಮತ್ತು ಖ್ಯಾತಿಯನ್ನು ಉಳಿಸಿಕೊಳ್ಳುವ ಬಲವಾದ ಉಮೇದು ಹೊಂದಿರುವ ನಗರಗಳು. ಹಾಗಾಗಿ ಅಲ್ಲೆಲ್ಲಾ ತುಂಬಾ ಬಲವಾದ ಕಾಯಿದೆಗಳು ಜಾರಿಯಲ್ಲಿವೆ ಮತ್ತು ಬಾಡಿಗೆಗಳು ತುಂಬಾ ದುಬಾರಿ. ತೀವ್ರವಾಗಿ

ಬೆಳೆಯುತ್ತಿರುವ ಸ್ಥಳಗಳಿಗೆ ಒಬ್ಬ ಸಾಮಾನ್ಯ ಅಮೆರಿಕನ್ ಪ್ರಜೆ ವಲಸೆ ಹೋಗದಿರುವುದಕ್ಕೆ ಇದು ಕೂಡ ಒಂದು ಕಾರಣವಿರಬಹುದು.

ತನ್ನ ಪ್ರಾಂತ್ಯದಲ್ಲಿನ ಆರ್ಥಿಕ ಕುಸಿತದಿಂದಾಗಿ ಕೆಲಸ ಕಳೆದುಕೊಂಡ ಕಾರ್ಮಿಕ, ಕೆಲಸ ಹುಡುಕಿಕೊಂಡು ಬೇರೆ ಕಡೆ ಹೋಗಬೇಕಾಗಿ ಬಂದಾಗ ವಸತಿಯ ಪ್ರಶ್ನೆ ಇನ್ನಷ್ಟು ಜಟಿಲವಾಗುತ್ತದೆ. ಅವನಿಗೆ ಈಗಾಗಲೇ ಒಂದು ಮನೆ ಇದ್ದರೆ ಆರ್ಥಿಕ ಕುಸಿತದಿಂದಾಗಿ ಅದನ್ನು ಮಾರಾಟ ಮಾಡುವುದಕ್ಕೆ ಸಾಧ್ಯವಾಗದೇ ಇರಬಹುದು. ಅದಕ್ಕೆ ಒಳ್ಳೆಯ ಬೆಲೆ ಸಿಗದೇ ಇರಬಹುದು. ಆದರೆ ವಾಸಿಸುವುದಕ್ಕೆ ಅವನಿಗೆ ಕನಿಷ್ಠ ಪಕ್ಷ ಒಂದು ಮನೆಯಾದರೂ ಇದೆ. ಅವನಿಗೆ ಸ್ವಂತ ಮನೆ ಇಲ್ಲದಿದ್ದರೂ ಆರ್ಥಿಕ ಕುಸಿತ ಆದಾಗ ಅವನಿಗೇ ಹೆಚ್ಚು ಲಾಭ. ಯಾಕೆಂದರೆ ಉನ್ನತ ಕೌಶಲದ ಕೆಲಸಗಾರನಿಗೆ ಹೋಲಿಸಿದರೆ ಅವನು ತನ್ನ ಖರ್ಚಿನ ಬಹುಭಾಗವನ್ನು ಮನೆ ಬಾಡಿಗೆಗೆ ತೆರುತ್ತಿರುತ್ತಾನೆ. ಹಾಗಾಗಿ ಮನೆ ಬಾಡಿಗೆ ಕಮ್ಮಿಯಾದಾಗ ಸ್ವಾಭಾವಿಕವಾಗಿಯೇ ಅವನಿಗೆ ಹೆಚ್ಚು ಲಾಭವಾಗುತ್ತದೆ. ಇದೂ ಕೂಡ ಅವರನ್ನು ವಲಸೆ ಹೋಗದಂತೆ ತಡೆಯುವ ಒಂದು ಅಂಶ.

ತಾವು ಇರುವ ಕಡೆ ಅವಕಾಶಗಳು ಕಡಿಮೆ ಇದ್ದು, ಬೇರೆ ಕಡೆಗಳಲ್ಲಿ ಒಳ್ಳೆಯ ಅವಕಾಶಗಳು ಇದ್ದರೂ ವಲಸೆ ಹೋಗದಂತೆ ಅವರನ್ನು ತಡೆಯುವ ಇನ್ನೂ ಹಲವು ಅಂಶಗಳಿವೆ. ಅಮೆರಿಕೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವುದು ತುಂಬಾ ದುಬಾರಿ. ಅಲ್ಲಿ ನಿಯಮಗಳು ತುಂಬಾ ಕಟ್ಟುನಿಟ್ಟು ಮತ್ತು ಸಾರ್ವಜನಿಕ ಸಬ್ಸಿಡಿಗಳೂ ಇಲ್ಲ. ಆದಾಯ ಕಡಿಮೆ ಇರುವವರಿಗೆ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಒಂದು ವ್ಯವಸ್ಥೆ ಮಾಡುವುದು ಅಸಾಧ್ಯ. ಅವರಿಗಿರುವ ಒಂದೇ ದಾರಿ ಎಂದರೆ ಅಜ್ಜ ಅಜ್ಜಿಯರ ನೆರವು ಪಡೆಯುವುದು. ಅದು ಸಾಧ್ಯವಾಗದೆ ಹೋದಾಗ ಸಂಬಂಧಿಕರು ಅಥವಾ ಸ್ನೇಹಿತರ ನೆರವನ್ನು ಪಡೆಯಬೇಕಾಗುತ್ತದೆ. ಅವರು ನಿಮಗೆ ಸಹಾಯ ಮಾಡಲು ಒಪ್ಪಿದರೆ ಸರಿ, ಇಲ್ಲದೇ ಹೋದರೆ ನೀವು ಮನೆ ಬಿಟ್ಟು ಹೋಗುವ ಮಾತೇ ಇಲ್ಲ. ಹೆಂಗಸರು ಹೊರಗೆ ಕೆಲಸಕ್ಕೆ ಹೋಗದೇ ಇದ್ದ ಕಾಲದಲ್ಲಿ ಇದು ದೊಡ್ಡ ಸಮಸ್ಯೆ ಆಗಿರಲಿಲ್ಲ. ಏಕೆಂದರೆ ಅವರೇ ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು. ಆದರೆ ಇಂದು ಅದು ದೊಡ್ಡ ನಿರ್ಣಾಯಕ ಸಂಗತಿ ಆಗಿಬಿಡುತ್ತದೆ.

ಇನ್ನೊಂದು ಸಂಗತಿಯೆಂದರೆ ಅವರು ಈಗ ಮಾಡುತ್ತಿರುವುದು ಖಾಯಂ ಕೆಲಸವಲ್ಲ. ಕೆಲಸ ಹೋದರೆ ಮನೆಯೂ ಹೋಗಿಬಿಡಬಹುದು. ಹೇಳಿಕೊಳ್ಳುವುದಕ್ಕೆ ಒಂದು ವಿಳಾಸವಿಲ್ಲದೇ ಹೋದರೆ ಕೆಲಸ ಸಿಗುವುದಕ್ಕೂ ಕಷ್ಟವಾಗುತ್ತದೆ. ಇಂತಹ ಹೊತ್ತಿನಲ್ಲಿ ಕುಟುಂಬ ಎನ್ನುವುದು ಅವರಿಗೆ ನೆರವಾಗುತ್ತದೆ. ಅದು ಅವರಿಗೆ ಆರ್ಥಿಕವಾಗಿ, ಭಾವನಾತ್ಮಕವಾಗಿ ಒಂದು ಒತ್ತಾಸೆ ನೀಡುತ್ತದೆ. ನಿರುದ್ಯೋಗಿ ಯುವಕರು ತಮ್ಮ ತಂದೆ ತಾಯಿಯರ ಮನೆಗೆ ಮರಳುತ್ತಾರೆ. ದುಡಿಯುವ ವಯಸ್ಸಿನ ಕೆಲಸಗಾರರಲ್ಲಿ ಶೇಕಡ 67ರಷ್ಟು ಜನ ತಮ್ಮ ತಂದೆ ತಾಯಿಯರ ಜೊತೆ ಅಥವಾ ತುಂಬಾ ಹತ್ತಿರದ ನೆಂಟರು ಇಲ್ಲವೇ ಗೆಳೆಯರ ಜೊತೆಗೆ ವಾಸಿಸುತ್ತಾರೆ (ಇಂತಹವರ ಸಂಖ್ಯೆ 2000ದಲ್ಲಿ ಶೇಕಡ 46ರಷ್ಟು ಇತ್ತು). ಈ ನೆಮ್ಮದಿ ಮತ್ತು ಸುರಕ್ಷೆಯನ್ನು ಬಿಟ್ಟು ಬೇರೊಂದು ಸ್ಥಳಕ್ಕೆ ಹೋಗಲು ಯಾರೂ ಇಷ್ಟಪಡುವುದಿಲ್ಲ. ಇದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು.

ಸ್ವಂತ ಊರಿನಲ್ಲಿ ಹಲವು ವರ್ಷಗಳು ಒಬ್ಬ ಮಾಲೀಕನ ಬಳಿ ಕೆಲಸ ಮಾಡಿಕೊಂಡು ಬಂದಿದ್ದವರಿಗೆ, ಆ ಕೆಲಸ ಹೋದಾಗ ಊರುಬಿಟ್ಟು ಹೋಗುವುದು ನಿಜವಾಗಿ ಕಷ್ಟದ ಕೆಲಸ. ಕೆಲಸ ಕಳೆದುಕೊಂಡ ಸಂಕಟದ ಜೊತೆಗೆ ಇಡೀ ಬದುಕನ್ನು ಮತ್ತೆ ಮೊದಲಿನಿಂದ ಪ್ರಾರಂಭಿಸುವ ದುಗುಡ, ತಳಮಳಗಳೂ ಸೇರಿಕೊಂಡಿರುತ್ತವೆ. ತಂದೆಯಂತೆಯೇ ನೆಮ್ಮದಿಯಾದ ಕೆಲಸದಲ್ಲಿದ್ದು, ಅನಂತರ ಆರಾಮವಾಗಿ ನಿವೃತ್ತಿ ಹೊಂದುವ ಅನುಭವ ಇವರದಲ್ಲ. ತಮ್ಮ ಇಡೀ ನಿರೀಕ್ಷೆಯನ್ನು ಬದಲಿಸಿಕೊಂಡು, ಸಂಪೂರ್ಣ ಅಪರಿಚಿತ ನಗರಕ್ಕೆ ವಲಸೆ ಹೋಗಿ, ತಾವು ಊಹಿಸಿಕೊಂಡಿರದ ಕೆಲಸವನ್ನು ಅತ್ಯಂತ ಕೆಳಹಂತದಿಂದ ಪ್ರಾರಂಭಿಸಬೇಕಾಗುತ್ತದೆ. ಹಾಗಾಗಿ ಅವರು ಎಲ್ಲೂ ವಲಸೆ ಹೋಗದೆ ಹಳ್ಳಿಯಲ್ಲಿಯೇ ಉಳಿಯಲು ಬಯಸುವುದರಲ್ಲಿ ಅಚ್ಚರಿಯೇನಿಲ್ಲ.

ಕಮ್ ಬ್ಯಾಕ್ ಸಿಟೀಸ್ ಪ್ರವಾಸ

ಸಂಕಷ್ಟದಲ್ಲಿರುವ ಪ್ರದೇಶಗಳಿಂದ ವಲಸೆ ಹೋಗುವುದು ಜನರಿಗೆ ಕಷ್ಟ. ಹಾಗಾದರೆ ಕೆಲಸಗಳೇ ಯಾಕೆ ಅವರ ಬಳಿಗೆ ಬರಬಾರದು? ಕಂಪನಿಗಳು ಮುಚ್ಚಿಹೋಗಿವೆ, ಕಾರ್ಮಿಕರು ಕೆಲಸಕ್ಕೆ ಸಿಗುತ್ತಾರೆ, ಕೂಲಿಯು ತೀರಾ ಹೆಚ್ಚು ಇರುವುದಿಲ್ಲ. ಕಡಿಮೆ ಬಾಡಿಗೆಗೆ ಮನೆಗಳು ದೊರಕುತ್ತವೆ. ಪರಿಸ್ಥಿತಿಯ ಲಾಭ ಪಡೆದುಕೊಂಡು ಹೊಸ ಕಂಪೆನಿಗಳನ್ನು ಪ್ರಾರಂಭಿಸಬಹುದಲ್ಲವೇ? ಇಂತಹ ಚಿಂತನೆಯನ್ನು ಸಾಕಾರಗೊಳಿಸುವ ಒಂದು ಪ್ರಯತ್ನ ನಡೆಯಿತು. 2017ರ ಡಿಸೆಂಬರ್‌ನಲ್ಲಿ ಎಓಎಲ್ ಸಂಸ್ಥೆಯ ಸಹಸ್ಥಾಪಕರಲ್ಲಿ ಒಬ್ಬನಾದ ಬಿಲಿಯನೇರ್ ಸ್ಟೀವನ್ ಕೇಸ್ ಮತ್ತು ಹಿಲ್‌ಬಿಲ್ಲಿ ಎಲಿಜಿಯ ಲೇಖಕ ಜೆ. ಖ. ವಾನ್ಸ್ ಸೇರಿಕೊಂಡು ರೈಸ್ ಆಫ್ ದ ರೆಸ್ಟ್ ಎಂಬ ಹೂಡಿಕೆ ನಿಧಿಯನ್ನು ಪ್ರಾರಂಭಿಸಿದರು. ಇದಕ್ಕೆ ಅಮೆರಿಕದ ಖ್ಯಾತ ಬಿಲಿಯನೇರುಗಳು (ಜೆಫ್ ಬೆಝೋನಿಂದ ಎರಿಕ್ ಸ್ಕಿಮಿಟ್ಜ್ ತನಕ) ಹಣಸಹಾಯ ಮಾಡಿದರು. ಸಾಂಪ್ರದಾಯಿಕವಾಗಿ ಟೆಕ್ ಹೂಡಿಕೆದಾರರು ಬಂಡವಾಳ ಹೂಡಲು ಬಯಸದ ಪ್ರದೇಶಗಳಲ್ಲಿ ಬಂಡವಾಳ ಹೂಡುವ ಉದ್ದೇಶದಿಂದ ಇದು ಪ್ರಾರಂಭವಾಯಿತು. ಸಿಲಿಕಾನ್ ವ್ಯಾಲಿಯ ಕೆಲವು ಹೂಡಿಕೆದಾರರನ್ನು ಯಂಗ್‌ಟೌನ್ ಮತ್ತು ಅಕ್ರಾನ್, ಓಹಿಯೋ, ಡೆಟ್ರಾಯ್ಟ್, ಫ್ಲಿಂಟ್, ಮಿಚಿಗನ್, ಸೌತ್ ಬೆಂಡ್, ಇಂಡಿಯಾನಾ ಮುಂತಾದ ಸ್ಥಳಗಳಿಗೆ ಬಸ್ಸಿನಲ್ಲಿ ಪ್ರವಾಸ ಕರೆದೊಯ್ಯಲಾಯಿತು. ಅದನ್ನು 'ದ ಕಮ್ ಬ್ಯಾಕ್ ಸಿಟೀಸ್ ಟೂರ್' ಎಂದೇ ಕರೆದರು. ಅದರಲ್ಲಿ ಹಣ ತೊಡಗಿಸಿದವರಿಗೆ ಅದೊಂದು ಲಾಭಗಳಿಸುವ ಪ್ರಯತ್ನವಾಗಿತ್ತು ಅಷ್ಟೆ. ಒಂದು ಸಾಮಾಜಿಕ ಬದಲಾವಣೆ ತರುವ ಉದ್ದೇಶ ಅವರಿಗಿರಲಿಲ್ಲ. ಅದನ್ನು ಅವರು ಸ್ಪಷ್ಟಪಡಿಸಿದ್ದರು. ಬೇ ಪ್ರದೇಶದಲ್ಲಿ ಜನದಟ್ಟಣೆ ತುಂಬಾ ಇದೆ. ಅಲ್ಲಿ ಬದುಕುವ ಖರ್ಚು ತುಂಬಾ ಜಾಸ್ತಿ. ಒಳನಾಡಿನಲ್ಲಿ ಸೊಗಸಾದ ಅವಕಾಶಗಳಿವೆ ಎಂದು ಅವರು ಪತ್ರಿಕಾ ವರದಿಯಲ್ಲಿ ಒತ್ತಿಹೇಳಿದರು. ಇಷ್ಟೆಲ್ಲಾ ಹೇಳಿದರೂ ಅವರು ತಮ್ಮ ಪ್ರಯತ್ನವನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ ಅನ್ನಿಸುತ್ತದೆ. ಹಾಗೆ ಅನುಮಾನಿಸುವುದಕ್ಕೆ ಕಾರಣಗಳೂ ಇವೆ. ಇದಕ್ಕಾಗಿ ಅವರು ಹೂಡಿದ್ದ ನಿಧಿಯ ಮೊತ್ತ ಕೇವಲ 150 ಮಿಲಿಯನ್ ಡಾಲರುಗಳು. ಅದು ಈ ಗುಂಪಿನ ಹೂಡಿಕೆದಾರರ ಪಾಕೆಟ್‌ಮನಿಗೂ ಸಮವಲ್ಲ. ಬೆಝೋಗಳು ಈ ಪ್ರಯತ್ನವನ್ನು ಬೆಂಬಲಿಸಿದರು ಅನ್ನವುದು ನಿಜ. ಆದರೆ ಡೆಟ್ರಾಯ್ಟನ್ನು ಅಮೆಝಾನಿನ ಎರಡನೇ ಕೇಂದ್ರಸ್ಥಾನ ಮಾಡುವಷ್ಟು ಉತ್ಸಾಹ ಅವರಿಗಿರಲಿಲ್ಲ. ಇಡೀ ಪ್ರಯತ್ನದ ಗುರಿ ಒಂದಿಷ್ಟು ಸಡಗರವನ್ನು ಮೂಡಿಸುವುದಾಗಿತ್ತು. ಕೆಲವು ಉದ್ಯಮಗಳು ಪ್ರಾರಂಭವಾಗುವಂತೆ ನೋಡಿಕೊಳ್ಳುವುದಾಗಿತ್ತು. ಉಳಿದವರನ್ನು ಉತ್ತೇಜಿಸುವ ಸಲುವಾಗಿ ಮೊದಮೊದಲು ಬಂಡವಾಳ ಹೂಡಿದವರ ಸುತ್ತ ಒಂದು ಸಡಗರ, ಚಟುವಟಿಕೆ ಮತ್ತು ಸಂಭ್ರಮದ ವಾತಾವರಣವನ್ನು ಮೂಡಿಸುವುದಾಗಿತ್ತು. ಈ ತಂತ್ರ ಹಾರ್ಲೆಮ್‌ನಲ್ಲಿ ಯಶಸ್ವಿಯಾಯಿತು. ಆದರೆ ಅಕ್ರಾನ್‌ನಲ್ಲಿ ಯಶಸ್ವಿಯಾಗಲಿಲ್ಲ. ಅದಕ್ಕೆ ಕಾರಣವೇನಿರಬಹುದು? ಹಾರ್ಲೆಮ್ ನಗರದಲ್ಲಿ ನಿವೇಶನಗಳು ಹೆಚ್ಚಿಗೆ ಇಲ್ಲ ಅನ್ನುವುದನ್ನು ಬಿಟ್ಟರೆ ಅಲ್ಲಿ ಎಲ್ಲಾ ರೀತಿಯ ಸೌಲಭ್ಯಗಳಿದ್ದವು, ಸಡಗರವೂ ಇತ್ತು. ಹಾಗಾಗಿ ಒಂದಲ್ಲ ಒಂದು ದಿನ ಹಾರ್ಲೆಮ್ ಮತ್ತೆ ಚೇತರಿಸಿಕೊಳ್ಳುತ್ತಿತ್ತು. ಮರುಹುಟ್ಟು ಪಡೆಯುತ್ತಿತ್ತು ಅನ್ನುವುದರಲ್ಲಿ ಅನುಮಾನವೇ ಇರಲಿಲ್ಲ. ಆದರೆ ಆಕ್ರಾನ್ (ಅಥವಾ ಸೌತ್ ಬೆಂಡ್ ಅಥವಾ ಡೆಟ್ರಾಯ್ಟ್) ಬಗ್ಗೆ ಇಷ್ಟೊಂದು ಆಶಾವಾದಕ್ಕೆ ಅವಕಾಶವಿಲ್ಲ. ಏಕೆಂದರೆ ಇಂದಿನ ದಿನಗಳಲ್ಲಿ ಶ್ರೀಮಂತ ಯುವಕ ಯುವತಿಯರಿಗೆ ಸೊಗಸಾದ ಹೋಟೆಲ್ಲುಗಳು, ಝಗಮಗಿಸುವ ಶೋಕಿಯಾದ ಬಾರುಗಳು ಮತ್ತು ಕೆಫೆಗಳು ಬೇಕು. ಪ್ರತಿಷ್ಠೆಯ ಬರಿಸ್ತಾಗಳಿಗೆ ಹೋಗಿ

ತುಂಬಾ ದುಬಾರಿಯಾದ ಎಸ್‌ಪ್ರೆಸ್ಸೋಗಳನ್ನು ಕೊಂಡುಕೊಳ್ಳುವುದು ಅವರಿಗೆ ಕಷ್ಟವಿಲ್ಲ. ಆದರೆ ಇಂತಹ ಸ್ಥಳಗಳಲ್ಲಿ ಅವರು ಬಯಸುವ ಆಕರ್ಷಕ ಸೌಲಭ್ಯಗಳು ದೊರಕುವಂತೆ ಮಾಡುವುದು ಸಾಧ್ಯವಿಲ್ಲ. ಅದಕ್ಕೆ ಕೊಳ್ಳುವ ಜನ ಬೇಕು. ಅದು ಕೋಳಿ ಮೊದಲೋ, ಮೊಟ್ಟೆ ಮೊದಲೋ ಎನ್ನುವ ಸಮಸ್ಯೆಯಿದ್ದಂತೆ. ಈ ಸೌಲಭ್ಯಗಳು ಇಲ್ಲದೇ ಹೋದರೆ ಸುಶಿಕ್ಷಿತ ಯುವಕರು ಕೆಲಸಕ್ಕೆ ಅಲ್ಲಿಗೆ ಬರುವುದಿಲ್ಲ. ಅಂತಹ ಶೋಕಿ ಕೆಲಸಗಾರರು ಇಲ್ಲದೇ ಹೋದರೆ ಈ ಸೌಲಭ್ಯಗಳು ಲಾಭದಾಯಕವಾಗಿ ಪರಿಣಮಿಸುವುದಿಲ್ಲ.

ವಾಸ್ತವದಲ್ಲಿ ಒಂದೊಂದು ರೀತಿಯ ಉದ್ಯಮಗಳು ಒಂದೊಂದು ಕಡೆ ಕೇಂದ್ರೀಕೃತವಾಗಿರುತ್ತವೆ. ಉದಾಹರಣೆಗೆ ಸಾಫ್ಟ್‌ವೇರ್ ಉದ್ಯಮಗಳೆಲ್ಲಾ ಒಂದು ಕಡೆ ನೆಲಸಿರುತ್ತವೆ. ಇದಕ್ಕೆ ಆ ಪ್ರದೇಶಗಳ ಖ್ಯಾತಿ ಬಹುಮಟ್ಟಿಗೆ ಕಾರಣವಿರಬಹುದು ಅನ್ನಿಸುತ್ತದೆ. ನೀವು ಮುಸುಕಿನ ಜೋಳದ ಹೊಲದ ನಡುವೆ ಸಾಫ್ಟ್‌ವೇರ್ ಕಂಪೆನಿ ಪ್ರಾರಂಭಿಸಿದರೆ ಗಿರಾಕಿಗಳಲ್ಲಿ ಅದರ ಬಗ್ಗೆ ವಿಶ್ವಾಸ ಮೂಡದೇ ಇರಬಹುದು. ನಿಮಗೆ ಹೊಸ ಕಾರ್ಮಿಕರು ಬೇಕಿದ್ದಾಗಲೆಲ್ಲಾ ಇಲ್ಲಿಗೆ ವಲಸೆ ಬನ್ನಿ ಎಂದು ಅವರನ್ನು ಒಪ್ಪಿಸುವುದು ಕಷ್ಟದ ಕೆಲಸ. ಒಂದೇ ಬಗೆಯ ಫ್ಯಾಕ್ಟರಿಗಳು ಪಕ್ಕಪಕ್ಕದಲ್ಲಿ ಇದ್ದಾಗ ಪಕ್ಕದ ಕಂಪೆನಿಯಿಂದ ಕೆಲಸಗಾರರನ್ನು ಸೆಳೆದುಕೊಳ್ಳುವುದು ಹೆಚ್ಚು ಸಲೀಸು. ಜೊತೆಗೆ ಕಾನೂನಿನ ತೊಡಕುಗಳೂ ಇವೆ. ಏಕೆಂದರೆ ಝೋನಿಂಗ್ ನಿಯಮದ ಪ್ರಕಾರ ಅಶುದ್ಧವಾದ ಉದ್ಯಮಗಳು ಒಂದು ಕಡೆ, ಹೋಟೆಲ್ ಬಾರ್ ಇವೆಲ್ಲಾ ಇನ್ನೊಂದು ಕಡೆ ಇರಬೇಕು. ಕೊನೆಯದಾಗಿ ಒಂದೇ ರೀತಿಯ ಉದ್ಯಮಗಳಲ್ಲಿ ಕೆಲಸ ಮಾಡುವ ಜನರ ಖಾಯಿಶ್‌ಗಳು (ಟೆಕಿಗಳು ಕಾಫಿ ಇಷ್ಟಪಡುತ್ತಾರೆ, ಹಣಹೂಡುವವರು ದುಬಾರಿ ವೈನ್ ಬಾಟಲ್‌ಗಳನ್ನು ಜಂಬದಿಂದ ಮೆರೆಸುತ್ತಾರೆ) ಸಾಮಾನ್ಯವಾಗಿ ಒಂದೇ ಬಗೆಯವು. ಹೀಗೆ ಉದ್ಯಮಗಳು ಒಂದು ಕಡೆ ಕೇಂದ್ರೀಕೃತವಾಗಿದ್ದರೆ ಅವರು ಬಯಸುವ ಸೌಲಭ್ಯವನ್ನು ಒದಗಿಸುವುದು ಹೆಚ್ಚು ಸುಲಭವಾಗುತ್ತದೆ.

ಈ ಕಾರಣಗಳಿಂದಾಗಿ ಒಂದೇ ಬಗೆಯ ಉದ್ಯಮಗಳು ಒಂದೇ ಕಡೆ ಬೆಳೆಯುವುದು ಸ್ವಾಭಾವಿಕ. ಬೇರೆಲ್ಲೋ ಸಣ್ಣದಾಗಿ ಪ್ರಾರಂಭಿಸಿ ಅದನ್ನು ಕ್ರಮೇಣ ದೊಡ್ಡದಾಗಿ ಬೆಳೆಸೋಣ ಅಂದುಕೊಳ್ಳುವುದು ಕಷ್ಟ. ಅಪಲಾಚಿಯದಲ್ಲಿ ಒಂದು ಬಯೋಟೆಕ್ ಕಂಪನಿಯನ್ನು ಊಹಿಸಿಕೊಳ್ಳುವುದು ತುಂಬಾ ಕಷ್ಟವಾಗುತ್ತದೆ. ಸಿಟಿಗಳು ಮರಳಿ ಬರಲಿ, ಪ್ರಯಾಣ ಯಶಸ್ವಿಯಾಗಲಿ ಎಂದು ನಾವು ನಿರೀಕ್ಷಿಸುತ್ತೇವೆ. ಆದರೆ ಅದು ಆಗುತ್ತದೆ ಅನ್ನುವ ವಿಶ್ವಾಸವಿಲ್ಲ. ಅಥವಾ ಡೆಟ್ರಾಯ್ಟ್‌ನಲ್ಲಿ ನಾವು ಭೂಮಿಯನ್ನು ಕೊಳ್ಳುವ ಸಾಹಸ ಮಾಡುವುದಿಲ್ಲ.

ಐಸೆನ್‌ಹೋವರ್ ಮತ್ತು ಸ್ಟಾಲಿನ್

ದೊಡ್ಡ ಪ್ರಮಾಣದ ಅಂತಾರಾಷ್ಟ್ರೀಯ ವಲಸೆ ಇಂದಿನ ನಿಜವಾದ ಸಮಸ್ಯೆಯಲ್ಲ. ಹೆಚ್ಚಿನ ಬಾರಿ ವಲಸೆಯಿಂದ ಸ್ಥಳೀಯರಿಗೆ ಆರ್ಥಿಕವಾಗಿ ಯಾವುದೇ ರೀತಿಯ ನಷ್ಟವೂ ಆಗುವುದಿಲ್ಲ. ವಲಸೆಗಾರರಿಗೆ ಖಂಡಿತವಾಗಿ ಕೆಲವು ಅನುಕೂಲಗಳಿವೆ. ಹೆಚ್ಚಿನ ಬಾರಿ ಆರ್ಥಿಕ ಲಾಭ ಪಡೆಯಲು ಬೇರೆ ಪ್ರದೇಶಗಳಿಗೆ ಅಥವಾ ಬೇರೆ ದೇಶಗಳಿಗೆ ವಲಸೆ ಹೋಗುವುದಕ್ಕೆ ಜನರಿಗೆ ಸಾಧ್ಯವಾಗುತ್ತಿಲ್ಲ ಅಥವಾ ಹೋಗುವುದಕ್ಕೆ ಅವರಿಗೆ ಇಷ್ಟವಿಲ್ಲ. ಇದೇ ಈಗಿನ ನಿಜವಾದ ಸಮಸ್ಯೆ. ಅಂದರೆ ಪ್ರಗತಿಪರ ಸರ್ಕಾರವು ವಲಸೆ ಹೋಗುವವರನ್ನು ಪುರಸ್ಕರಿಸಿ, ವಲಸೆ ಹೋಗಲು ಒಲ್ಲದವರನ್ನು ಶಿಕ್ಷಿಸಬೇಕು ಎಂದು ನಾವು ಹೇಳುತ್ತಿದ್ದೇವೆಯೇ?

ಇಂದು ಹೆಚ್ಚಿನ ಚರ್ಚೆಗಳು ವಲಸೆಯನ್ನು ಹೇಗೆ ಕಡಿಮೆ ಮಾಡಬೇಕು ಎನ್ನುವುದರ ಬಗ್ಗೆಯೇ ನಡೆಯುತ್ತಿವೆ. ಅಂತಹ ಸಮಯದಲ್ಲಿ ಈ ಮೇಲಿನ ಚಿಂತನೆಗಳು ವಿಚಿತ್ರ ಎನಿಸಬಹುದು. ಆದರೆ 1950ರ ದಶಕದಲ್ಲಿ ಅಮೆರಿಕ, ಕೆನಡಾ, ಚೀನಾ, ದಕ್ಷಿಣ ಆಫ್ರಿಕಾ, ಸೋವಿಯತ್ ರಷ್ಯಾ ಮುಂತಾದ ದೇಶಗಳೆಲ್ಲವೂ ಜನರು ಹೊಸ ಪ್ರಾಂತ್ಯಗಳಿಗೆ ವಲಸೆ ಹೋಗುವಂತೆ ಮಾಡಲು ಹಲವು ಕ್ರಮಗಳನ್ನು ತೆಗೆದುಕೊಂಡವು. ವಲಸೆ ಹೋಗುವಂತೆ ಜನರನ್ನು ಒತ್ತಾಯಿಸುವಂತಹ ನೀತಿಗಳನ್ನು ರೂಪಿಸಲು ಆ ದೇಶಗಳಲ್ಲಿ ಗಂಭೀರವಾದ ಪ್ರಯತ್ನಗಳು ನಡೆದಿವೆ. ವಾಚ್ಯವಾಗಿ ಹೇಳದಿದ್ದರೂ ಇವುಗಳ ಹಿಂದೆ ಕ್ರೂರವಾದ ರಾಜಕೀಯ ಉದ್ದೇಶವಿತ್ತು (ತಾವು ಇಷ್ಟಪಡದ ಜನಾಂಗೀಯ ಗುಂಪನ್ನು ಹತ್ತಿಕ್ಕುವುದು ಅದರಲ್ಲಿ ಒಂದು). ಆದರೆ ಆ ಉದ್ದೇಶವನ್ನು ಆಧುನೀಕರಣದ ನುಡಿಗಟ್ಟಿನ ಉಡುಪು ತೊಡಿಸಿ ಮರೆಮಾಚುತ್ತಿದ್ದರು. ಈ ಆಧುನೀಕರಣದ ನುಡಿಗಟ್ಟುಗಳು ಸಾಂಪ್ರದಾಯಿಕ ಆರ್ಥಿಕ ವ್ಯವಸ್ಥೆಯಲ್ಲಿನ ಆರ್ಥಿಕ ಕೊರತೆಗಳನ್ನು ಎತ್ತಿತೋರಿಸುತ್ತಿತ್ತು. ಅಭಿವೃದ್ಧಿಶೀಲ ದೇಶಗಳ ಆಧುನೀಕರಣದ ಅಜೆಂಡಾ ಈ ಉದಾಹರಣೆಗಳಿಂದಲೇ ಪ್ರೇರೇಪಣೆ ಪಡೆದುಕೊಂಡಿರುವುದು.

ಗ್ರಾಮೀಣ ಪ್ರದೇಶಗಳನ್ನು ವಂಚಿಸಿ, ನಗರ ವಲಯಗಳಿಗೆ ಅನುಕೂಲ ಮಾಡಿಕೊಡುವಂತಹ ಬೆಲೆ ಮತ್ತು ತೆರಿಗೆ ನೀತಿಯನ್ನು ಅನುಸರಿಸುವ ಸುದೀರ್ಘ ಪರಂಪರೆಯೇ ಅಭಿವೃದ್ಧಿಶೀಲ ದೇಶಗಳ ಸರ್ಕಾರಗಳಲ್ಲಿ ಇದೆ. 1970ರಲ್ಲಿ ಆಫ್ರಿಕದ ಹಲವು ದೇಶಗಳು ಕೃಷಿ ಮಾರುಕಟ್ಟೆ ಬೋರ್ಡ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದವು. ಇದೊಂದು ಕ್ರೂರವಾದ ತಮಾಷೆ. ರೈತರು ತಮ್ಮ ಬೆಳೆಗಳನ್ನು ಮಾರುಕಟ್ಟೆಗೆ ತಂದು ಮಾರದಂತೆ ಈ ಬೋರ್ಡ್‌ಗಳು ಮಾಡಿದವು. ಅನಂತರ ತಾವೇ ಅದನ್ನು ಅತ್ಯಂತ ಕಡಿಮೆ ಬೆಲೆಗೆ ಕೊಂಡು ನಗರದ ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಮಾರುತ್ತಿದ್ದವು. ಬೆಲೆಗಳು ಅದೇ ಮಟ್ಟದಲ್ಲಿ ಇರುವಂತೆ ನೋಡಿಕೊಂಡವು. ಭಾರತ ಮತ್ತು ಚೀನಾದಂತಹ ದೇಶಗಳು ನಗರದ ಗ್ರಾಹಕರಿಗೆ ತುಂಬಾ ಅವಶ್ಯಕವಾಗಿದ್ದ ಕೃಷಿ ಉತ್ಪನ್ನಗಳ ರಫ್ತನ್ನೇ ನಿಷೇಧಿಸಿದವು. ಇಂತಹ ನೀತಿಗಳಿಂದ ಕೃಷಿಯು ಲಾಭದಾಯಕವಲ್ಲದ ಉದ್ಯಮವಾಯಿತು. ಈ ನೀತಿಗಳು ಜನ ತಮ್ಮ ಜಮೀನುಗಳನ್ನು ಬಿಡುವಂತೆ ಮಾಡಿದವು. ವಲಸೆ ಹೋಗಲಾರದ ಅತ್ಯಂತ ಬಡ, ಸಣ್ಣ ಹಾಗೂ ಭೂರಹಿತ ರೈತರ ಬದುಕು ಕಷ್ಟವಾಯಿತು.

ವಲಸೆ ಆರ್ಥಿಕವಾಗಿ ಒಳ್ಳೆಯ ಕ್ರಮ. ಅದನ್ನು ಉತ್ತೇಜಿಸುವುದು ಒಳ್ಳೆಯದು. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ನಡೆಯುವ ವಲಸೆ ಇರಬಹುದು ಅಥವಾ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ನಡೆಯುವ ವಲಸೆಯೇ ಇರಬಹುದು, ಒಟ್ಟಾರೆಯಾಗಿ ವಲಸೆಯಿಂದ ಜೀವನ ಮಟ್ಟದಲ್ಲಿ ಅಸಮಾನತೆ ಕಮ್ಮಿಯಾಗುತ್ತದೆ. ಜನರಿಗೆ ತಮ್ಮ ಪ್ರಾಂತ್ಯದಲ್ಲಿನ ಆರ್ಥಿಕ ಏರುಪೇರನ್ನು ತಡೆದುಕೊಳ್ಳುವ ಸಾಮರ್ಥ್ಯ ಉಂಟಾಗುತ್ತದೆ. ವಲಸೆಯಿಂದ ಅವರಿಗೆ ಹೊಸ ಅವಕಾಶಗಳು ತೆರೆದುಕೊಳ್ಳುತ್ತವೆ. ಅದರಿಂದ ಅವರಿಗೆ ಅನುಕೂಲವಾಗುತ್ತದೆ. ಒಂದು ಪ್ರದೇಶದಲ್ಲಿ ಆರ್ಥಿಕ ವಿಪತ್ತಿನಿಂದ ಸಂಕಷ್ಟ ಬಂದಾಗ ಜನ ಅಲ್ಲಿಂದ ಬೇರೆ ಕಡೆಗೆ ಹೋಗುತ್ತಾರೆ. ಒಂದು ಆರ್ಥಿಕ ವ್ಯವಸ್ಥೆ ತನಗೆ ಎದುರಾದ ಬಿಕ್ಕಟ್ಟನ್ನು ಅರಗಿಸಿಕೊಂಡು ವ್ಯವಸ್ಥೆಯಲ್ಲಿನ ರಚನೆಯನ್ನು ಮಾರ್ಪಡಿಸಿಕೊಳ್ಳುವ ಕ್ರಮವೇ ಇದು.

ಈಗಾಗಲೇ ಶ್ರೀಮಂತ ದೇಶಗಳಲ್ಲಿ ಮತ್ತು ಅನುಕೂಲಕರ ನಗರಗಳಲ್ಲಿ ವಾಸಿಸುತ್ತಿರುವ ನಮ್ಮಂಥವರ ಮನಸ್ಸಿನಲ್ಲಿ ಇಲ್ಲಿ ಎಲ್ಲವೂ ಸೊಗಸಾಗಿದೆ. ಹಾಗಾಗಿ ಎಲ್ಲರೂ ಇಲ್ಲಿಗೆ ಬರಲು ಬಯಸುತ್ತಾರೆ ಎಂಬ ಭಾವನೆ ಇದೆ. ಹೀಗೆ ಜನರನ್ನು ಆಕರ್ಷಿಸುವ ಯಶಸ್ವಿ ಆರ್ಥಿಕತೆ ಅರ್ಥಶಾಸ್ತ್ರಜ್ಞರಿಗೆ ಒಳ್ಳೆಯ ವಿಚಾರ. ಆದರೆ ಅಭಿವೃದ್ಧಿಶೀಲ ದೇಶಗಳ ನಗರ ನಿವಾಸಿಗಳಿಗೆ ಅಥವಾ ಶ್ರೀಮಂತ ದೇಶಗಳ ನಿವಾಸಿಗಳಿಗೆ ಇದು ಆತಂಕಕಾರಿಯಾದ ವಿಷಯ. ಇಡೀ ಪ್ರಪಂಚದ ಜನ ತಾವಿರುವ ಪ್ರದೇಶಗಳಿಗೆ ಬಂದುಬಿಡುತ್ತಾರೆ ಎನ್ನುವ ಕಲ್ಪನೆಯೇ ಅವರಲ್ಲಿ ಭೀತಿ ಹುಟ್ಟಿಸುತ್ತದೆ. ಉದ್ಯೋಗ, ವಸತಿ ಮತ್ತು ವಾಹನ ನಿಲ್ದಾಣಗಳ ಕೊರತೆ ಈಗಾಗಲೇ ಇದೆ. ಇನ್ನು ಅವರೆಲ್ಲಾ ಬಂದು, ಕೊರತೆಯಿರುವ ಈ ಸಂಪನ್ಮೂಲಗಳಿಗಾಗಿ ತಮ್ಮೊಡನೆ ಕಾದಾಡುವುದನ್ನು ಕಲ್ಪಿಸಿಕೊಂಡೇ

ಅವರು ಗಾಬರಿಯಾಗುತ್ತಾರೆ. ಹೊರಗಿನವರು ಬರುವುದರಿಂದ ಸ್ಥಳೀಯರ ಸಂಬಳ ಮತ್ತು ಉದ್ಯೋಗದ ಅವಕಾಶ ಕಡಿಮೆಯಾಗುತ್ತದೆ ಎಂದು ಯೋಚಿಸುವುದೇ ತಪ್ಪು. ಆದರೆ ತೃತೀಯ ಜಗತ್ತಿನಲ್ಲಿ ಇನ್ನೂ ಅರೆಬರೆ ನಿರ್ಮಿಸಿರುವ ನಗರಗಳಲ್ಲಿ ಜನಸಂದಣಿ ಹೆಚ್ಚಾಗುತ್ತದೆ ಎನ್ನುವುದು ಸ್ವಲ್ಪ ಮಟ್ಟಿಗೆ ನಿಜ.

ವಲಸಿಗರು ನಮ್ಮನ್ನು ಮೀರಿಸಿ ಮೇಲುಗೈ ಸಾಧಿಸಬಹುದೆಂಬ ಎಂಬ ಹೆದರಿಕೆಯೂ ಅವರನ್ನು ತಮ್ಮೊಂದಿಗೆ ಸೇರಿಸಿಕೊಳ್ಳುವುದಕ್ಕೆ ಅಡ್ಡಿಪಡಿಸುತ್ತದೆ. ನಮಗಿಂತ ಭಿನ್ನ ಸಂಸ್ಕೃತಿಯ ಜನ ದೊಡ್ಡ ಪ್ರಮಾಣದಲ್ಲಿ ಬಂದರೆ (ಇದು ಭಾರತದೊಳಗೇ ಜನ ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಬಂದು ನೆಲೆಸುವ ವಿಷಯದಿಂದ ಮೊದಲ್ಗೊಂಡು ಮೆಕ್ಸಿಕೋದವರು ಅಮೆರಿಕೆಗೆ ಬಂದು ನೆಲೆಸುವ ವಿಷಯದವರೆಗೆ ಎಲ್ಲದಕ್ಕೂ ಅನ್ವಯಿಸುತ್ತದೆ.) ಏನಾಗುತ್ತದೆ ಎನ್ನುವುದಕ್ಕೆ ಸಂಬಂಧಿಸಿ ಹಲವು ಪ್ರಶ್ನೆಗಳು ಕಾಡುತ್ತವೆ. ಅವರು ಈ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುತ್ತಾರಾ, ಅಥವಾ ಈ ಸಂಸ್ಕೃತಿಯನ್ನು ಬದಲಿಸಿಬಿಡುತ್ತಾರಾ, ಅಥವಾ ಅವರ ಸಂಸ್ಕೃತಿ ಸಂಪೂರ್ಣವಾಗಿ ನಮ್ಮ ಸಂಸ್ಕೃತಿಯೊಳಗೆ ಬೆರೆತು, ತನ್ನ ಅಸ್ಮಿತೆಯನ್ನೇ ಕಳೆದುಕೊಂಡು, ಜಾಗತೀಕರಣಗೊಂಡು ಯಾವ ರುಚಿಯೂ ಇಲ್ಲದ ಏಕರೂಪಿ ಸಂಸ್ಕೃತಿ ಸೃಷ್ಟಿಯಾಗಿಬಿಡುತ್ತದಾ? ಆದರೆ ನಾವು ಅಂತಹ ಕಾಲ್ಪನಿಕ ಸ್ವರ್ಗಕ್ಕೆ ಅಥವಾ ನರಕಕ್ಕೆ ಹತ್ತಿರದಲ್ಲೂ ಇಲ್ಲ. ನಾವು ಭಾವಿಸಿದಂತೆ ಜನ ಆರ್ಥಿಕವಾಗಿ ಯಶಸ್ವಿಯಾಗಿರುವ ಸ್ಥಳಗಳಿಂದ ಆಕರ್ಷಿತರಾಗಿಲ್ಲ. ನಿಜ ಹೇಳಬೇಕೆಂದರೆ ಒದ್ದಾಡಿಕೊಂಡಾದರೂ ಅವರು ತಮ್ಮೂರಿನಲ್ಲೇ ಇರುವುದಕ್ಕೆ ಇಷ್ಟಪಡುತ್ತಾರೆ.

ಅಂದರೆ ಆಂತರಿಕ ಮತ್ತು ಬಾಹ್ಯ ವಲಸೆಯನ್ನು ಉತ್ತೇಜಿಸುವುದು ನಮ್ಮ ನೀತಿಯ ಆದ್ಯತೆಯಾಗಬೇಕು. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಮಾಡಬೇಕು. ಈ ಹಿಂದೆ ಮಾಡಿರುವಂತೆ ಜನರ ಮೇಲೆ ಒತ್ತಾಯ ತರಬಾರದು. ಹಾಗೆಯೇ ಕೆಟ್ಟ ರೀತಿಯ ಆರ್ಥಿಕ ಪ್ರೋತ್ಸಾಹವನ್ನು ಕೊಡಬಾರದು. ವಲಸೆಗೆ ಇರುವ ಮುಖ್ಯ ಅಡ್ಡಿಆತಂಕಗಳನ್ನು ನಿವಾರಿಸಬೇಕು. ಆ ಮೂಲಕ ವಲಸೆಯನ್ನು ಸರಾಗಗೊಳಿಸಬೇಕು.

ಇಡೀ ಪ್ರಕ್ರಿಯೆಯನ್ನು ಸರಳೀಕರಿಸಿ, ಸುಗಮಗೊಳಿಸಬೇಕು. ಜನರಲ್ಲಿ ಆ ಬಗ್ಗೆ ಸಂಪೂರ್ಣ ತಿಳುವಳಿಕೆ ಮೂಡಿಸಬೇಕು. ಆಗ ಕೆಲಸಗಾರರ ಬಳಿ ವಲಸೆಯ ಖರ್ಚು ಮತ್ತು ದೊರಕುವ ಲಾಭ ಎರಡರ ಬಗ್ಗೆಯೂ ನಿಖರವಾದ ಮಾಹಿತಿ ಇರುತ್ತದೆ. ನಿರ್ಧಾರ ತೆಗೆದುಕೊಳ್ಳುವುದು ಸಲೀಸಾಗುತ್ತದೆ. ವಲಸೆಗಾರರು ಮತ್ತು ಅವರ ಕುಟುಂಬದವರಿಗೆ ಹಣ ಕಳುಹಿಸುವ ಮತ್ತು ಪಡೆಯುವ ಪ್ರಕ್ರಿಯೆಯನ್ನು ಸುಗಮಗೊಳಿಸಿದರೆ ವಲಸೆಗಾರರಿಗೆ ತಾವು ಏಕಾಂಗಿ ಎನ್ನುವ ಭಾವನೆ ಹೋಗುತ್ತದೆ. ಸೋಲಿನ ಭೀತಿ ವಲಸೆಗಾರರನ್ನು ಸದಾ ಭೂತಾಕಾರವಾಗಿ ಕಾಡುತ್ತಿರುತ್ತದೆ. ವಿಫಲತೆಯಿಂದ ಅವರನ್ನು ರಕ್ಷಿಸುವ ಯಾವುದಾದರೊಂದು ವಿಮೆಯ ಬಗ್ಗೆ ಚಿಂತಿಸುವುದು ಒಳ್ಳೆಯದು. ಬಾಂಗ್ಲಾದೇಶದಲ್ಲಿ ಹೀಗೆ ಮಾಡಿದಾಗ ಅದು ಒಳ್ಳೆಯ ಪರಿಣಾಮ ಬೀರಿತ್ತು.

ಸ್ಥಳೀಯರಿಗೆ ವಲಸಿಗರನ್ನು ಸ್ವೀಕರಿಸುವುದಕ್ಕೆ ಸಾಧ್ಯವಾಗಬೇಕು. ಅದಕ್ಕೆ ವಲಸಿಗರು ಸ್ಥಳೀಯರ ಜೊತೆ ಒಂದಾಗುವ ಪ್ರಕ್ರಿಯೆಯನ್ನು ಸುಗಮಗೊಳಿಸಬೇಕು. ಅವರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡುವುದು, ವಲಸೆ ಬರುವುದಕ್ಕೆ ಮೊದಲೇ ಅವರಿಗೆ ಮಾಡಲು ಸೂಕ್ತವಾಗುವ ಉದ್ಯೋಗ ಯಾವುದೆಂದು ಗುರುತಿಸುವುದು, ಮಕ್ಕಳ ಆರೈಕೆಗೆ ನೆರವಾಗಲು ವ್ಯವಸ್ಥೆ ಮಾಡುವುದು, ಮುಂತಾದ ಕ್ರಮಗಳಿಂದ ಹೊಸಬರಿಗೆ ಬೇಗನೆ ಹೊಂದಿಕೊಳ್ಳಲು ಆಗುತ್ತದೆ. ಈ ಸಲಹೆಗಳು ದೇಶದೊಳಗಿನ ಹಾಗೂ ಅಂತಾರಾಷ್ಟ್ರೀಯ ವಲಸೆಗಳೆರಡಕ್ಕೂ ಅನ್ವಯಿಸುತ್ತದೆ. ಇದರಿಂದ ವಲಸೆ ಹೋಗಲು ಹಿಂಜರಿಯುವವರನ್ನು ವಲಸೆಗೆ ಹೋಗುವಂತೆ ಪ್ರೋತ್ಸಾಹಿಸುವುದಕ್ಕೆ ಸಾಧ್ಯವಾಗುತ್ತದೆ. ಜೊತೆಗೆ ಬೇಗನೆ ಅತಿಥೇಯ ಸಮುದಾಯದ ಸಹಜ ಬದುಕಿನ ಭಾಗವಾಗುವುದಕ್ಕೆ ಅವರಿಗೆ ಸಾಧ್ಯವಾಗುತ್ತದೆ. ಆದರೆ ನಾವೀಗ ಹೆಚ್ಚುಕಡಿಮೆ ಅದಕ್ಕೆ ತದ್ವಿರುದ್ಧವಾದ ಪರಿಸ್ಥಿತಿಯಲ್ಲಿದ್ದೇವೆ. ಎಲ್ಲೋ ಕೆಲವು ಸಂಸ್ಥೆಗಳು ಮಾತ್ರ ನಿರಾಶ್ರಿತರಿಗೆ ಸಹಾಯ ಮಾಡುತ್ತಿವೆ. ಉಳಿದಂತೆ ಅವರಿಗೆ ಹೊಂದಿಕೊಳ್ಳಲು ಅನುಕೂಲ ಮಾಡಿಕೊಡುವಂತಹ ಯಾವ ಪ್ರಯತ್ನಗಳೂ ಆಗುತ್ತಿಲ್ಲ. ವಿದೇಶದಿಂದ ಬಂದ ವಲಸೆಗಾರರಿಗೆ ಕಾನೂನುಬದ್ಧವಾಗಿ ಕೆಲಸ ಮಾಡುವ ಹಕ್ಕು ದೊರೆಯುವುದು ಕಷ್ಟ. ಅದಕ್ಕೆ ಹಲವು ಎಡರುತೊಡರುಗಳಿವೆ. ಇನ್ನು ದೇಶದೊಳಗೆ ವಲಸೆಗಾರರಿಗೆ ತಂಗಲು ಸ್ಥಳವಿಲ್ಲ. ಹತ್ತಾರು ಅವಕಾಶಗಳು ಇರುವಂತೆ ತೋರಿದರೂ, ಅವರು ಸಿಕ್ಕ ಮೊದಲ ಕೆಲಸವನ್ನೇ ಉಳಿಸಿಕೊಳ್ಳುವುದಕ್ಕೆ ಹೆಣಗುವ ಪರಿಸ್ಥಿತಿಯಲ್ಲಿದ್ದಾರೆ.

ವಲಸೆಗೆ ಬರುತ್ತಿರುವ ಪ್ರತಿಕ್ರಿಯೆಯ ಹಿಂದಿರುವ ರಾಜಕೀಯಕ್ಕೆ ಕೇವಲ ಅರ್ಥಶಾಸ್ತ್ರದ ತಪ್ಪು ಗ್ರಹಿಕೆ ಮಾತ್ರ ಕಾರಣವಲ್ಲ, ಗುರುತಿನ ರಾಜಕಾರಣವೂ ಅದಕ್ಕೆ ಬಹುಮಟ್ಟಿಗೆ ಕಾರಣ ಎನ್ನುವುದನ್ನು ಮರೆಯಲು ಸಾಧ್ಯವಿಲ್ಲ. ಅರ್ಥಶಾಸ್ತ್ರ ಮತ್ತು ರಾಜಕಾರಣಗಳ ನಡುವೆ ಪರಸ್ಪರ ಹೊಂದಾಣಿಕೆ ಇಲ್ಲ ಎನ್ನುವುದು ಹೊಸ ವಿಷಯವೇನಲ್ಲ. ಐರೋಪ್ಯ ವಲಸೆಯ ಸುವರ್ಣಯುಗದಲ್ಲಿ ಐರೋಪ್ಯ ವಲಸಿಗರನ್ನು ಬರಮಾಡಿಕೊಂಡ ಅಮೆರಿಕೆಯ ನಗರಗಳೆಲ್ಲವೂ ಅವರಿಂದ ಆರ್ಥಿಕವಾಗಿ ತುಂಬಾ ಅನುಕೂಲ ಪಡೆದವು. ಹಾಗಿದ್ದಾಗ್ಯೂ ವಲಸಿಗರ ವಿರುದ್ಧ ವ್ಯಾಪಕವಾದ ದ್ವೇಷಪೂರಿತ ರಾಜಕೀಯ ಪ್ರತಿಕ್ರಿಯೆ ವ್ಯಕ್ತವಾಯಿತು. ವಲಸೆಗೆ ಪ್ರತಿಕ್ರಿಯೆಯಾಗಿ ನಗರಗಳು ತೆರಿಗೆಗಳನ್ನು ಮತ್ತು ಸಾರ್ವಜನಿಕ ವೆಚ್ಚವನ್ನು ಕಡಿತಗೊಳಿಸಿದವು. ಸಾರ್ವಜನಿಕ ವೆಚ್ಚದಲ್ಲಿಯೂ ಅಂತರ್‌ಜನಾಂಗೀಯ (ಇಂಟರ್ ಎಥ್ನಿಕ್) ಒಪ್ಪಂದಗಳಿಗೆ ಸಂಬಂಧಿಸಿದ (ಉದಾಹರಣೆಗೆ ಶಾಲೆಗಳು), ಅಥವಾ ಕಡಿಮೆ ಆದಾಯದ ಗುಂಪಿನ ವಲಸಿಗರಿಗೆ (ಚರಂಡಿಗಳು, ಕಸವನ್ನು ಸಂಗ್ರಹಿಸುವುದು, ಮುಂತಾದ ಕೆಲಸ ಮಾಡುತ್ತಿದ್ದ ವಲಸಿಗರಿಗೆ) ನೆರವಾಗುತ್ತಿದ್ದ ಸೇವೆಗಳಿಗೆ ಮಾಡುತ್ತಿದ್ದ ವೆಚ್ಚ ತೀವ್ರವಾಗಿ ಕಡಿತಗೊಂಡಿತು. ವಲಸೆಗಾರರು ಹೆಚ್ಚಾಗಿ ಇರುವ ನಗರಗಳಲ್ಲಿ ವಲಸೆಯನ್ನು ಬೆಂಬಲಿಸಿದ ಡೆಮಾಕ್ರೆಟಿಕ್ ಪಕ್ಷಕ್ಕೆ ಮತಗಳು ಕಡಿಮೆಯಾದವು. ಕನ್ಸರ್ವೇಟಿವ್ ಪಕ್ಷದ ರಾಜಕಾರಣಿಗಳು, ಅದರಲ್ಲೂ ನಿರ್ದಿಷ್ಟವಾಗಿ 1924ರಲ್ಲಿ ನ್ಯಾಷನಲ್ ಆರಿಜಿನ್ಸ್ ಕಾಯಿದೆಯನ್ನು (ಅದು ಅಮೆರಿಕೆಗೆ ನಿರಾತಂಕವಾಗಿ ನಡೆಯುತ್ತಿದ್ದ ವಲಸೆಯನ್ನು ಕೊನೆಗೊಳಿಸಿತು) ಬೆಂಬಲಿಸಿದ ಅಭ್ಯರ್ಥಿಗಳನ್ನು ಜನ ಆಯ್ಕೆ ಮಾಡಿದರು. ತಮ್ಮ ಹಾಗೂ ಹೊಸದಾಗಿ ಬಂದ ವಲಸಿಗರ ನಡುವಿನ ಸಾಂಸ್ಕೃತಿಕ ಅಂತರಕ್ಕೆ ಇದು ಮತದಾರರ ಪ್ರತಿಕ್ರಿಯೆಯಾಗಿತ್ತು. ಜೊತೆಗೆ ಆ ಸಮಯದಲ್ಲಿ ಯಹೂದಿಗಳು ಮತ್ತು ಕ್ಯಾಥೊಲಿಕರನ್ನು ಸಂಪೂರ್ಣವಾಗಿ ಅನ್ಯರು, ಪರಕೀಯರು ಎಂದು ಭಾವಿಸುತ್ತಿದ್ದರು. ಮುಂದೆ ಅವರು ಈ ಸಮಾಜದಲ್ಲಿ ಬೆರೆತುಹೋಗುವ ತನಕ ಇದು ಹೀಗೇ ಮುಂದುವರೆಯಿತು.

ಇತಿಹಾಸ ಮರುಕಳಿಸುತ್ತದೆ ಎನ್ನುವುದು ನಿಜ. ಆದರೆ ಅದು ಎರಡು ಮತ್ತು ಮೂರನೆಯ ಬಾರಿ ಮರುಕಳಿಸಿದಾಗಲೂ ಅದರ ಕಹಿಯೇನೂ ಕಡಿಮೆಯಾಗುವುದಿಲ್ಲ. ಆದರೆ ಅದು ಹಲವು ಬಾರಿ ಮರುಕಳಿಸುವುದರಿಂದ ಆ ಕೋಪಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಎನ್ನುವುದನ್ನು ಮತ್ತಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಅಂತಿಮವಾಗಿ ಎಷ್ಟೇ ಉತ್ತೇಜನ ನೀಡಿದರೂ ಕೆಲವರು ಮನೆ ಬಿಟ್ಟು ಹೋಗುವುದಿಲ್ಲ ಎನ್ನುವುದನ್ನು ಮರೆಯಬಾರದು. ಜನರ ಈ ಪ್ರವೃತ್ತಿ ಯಾವುದೇ ಅರ್ಥಶಾಸ್ತ್ರಜ್ಞನ ಗ್ರಹಿಕೆಗೆ ವಿರುದ್ಧವಾಗಿದೆ. ಅವರ ನಿರೀಕ್ಷೆಯಂತೆ ಜನ ವರ್ತಿಸುತ್ತಿಲ್ಲ. ಜನರ ಈ ವರ್ತನೆ ಇಡೀ ಅರ್ಥವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಬಹಳಷ್ಟು ಆರ್ಥಿಕ ನೀತಿಗಳ ಪರಿಣಾಮವನ್ನು ಪ್ರಭಾವಿಸುತ್ತದೆ. ಹಾಗಾಗಿ ಸಾಮಾಜಿಕ ನೀತಿಯನ್ನು ರೂಪಿಸುವಾಗ ಜನರಲ್ಲಿ ಇರುವ ಚಲಿಸಲು ನಿರಾಕರಿಸುವ ಈ ಸ್ವಭಾವವನ್ನೂ ಗಣನೆಗೆ ತೆಗೆದುಕೊಳ್ಳಬೇಕು.